Editor: NITYANANDASWAMI Publisher: U. BASAVARAJA RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 35 | ಆಗಸ್ಟ್ 22-28, 2022 | ಪುಟ 16 | ರೂ.10/-

Volume: 16 Issue: 35 August 22-28, 2022 Pages: 16 Price: 10/-

https://janashakthi.wordpress.com e-mail : js_weekly@yahoo.com




## ಸ್ವಾತಂತ್ರ್ಯೋತ್ಸವ

### ಸ್ವಾತಂತ್ರ್ಯದ ರಕ್ಷಣೆಗೆ ಸಾಗಬೇಕಿದೆ ಆಂದೋಲನ

## ಬಾಬಾಬುಡನ್ ಗಿರಿ:

### ಸರ್ಕಾರದ ಅನಾಹುತಕಾರಿ ನಿರ್ಧಾರ





## ಬಿಲ್ಕಿಸ್ ಬಾನು ಪ್ರಕರಣ

ಅತ್ಯಾಚಾರ ಆರೋಪಿಗಳಿಗೆ ಬಿಡುಗಡೆ ಭಾಗ್ಯ
ಭಾರತ ಮಾತೆಗೆ ಎಂತಹ ದೌರ್ಭಾಗ್ಯ



## ಭಾರತದ ರಕ್ಷಣೆಗೆ ಕ್ವಾಡ್ ಶೂಲ

# ಮತದಾರ ಗುರುತಿನ ಚೀಟಿ ಮತ್ತು ಆಧಾರ್ ಜೋಡಣೆಯ ಪ್ರಕ್ರಿಯೆಯನ್ನು ಲೋಪ–ದೋಷಗಳ ತನಿಖಾ ವರದಿ ತಯಾರಿಯ ವರೆಗೆ ತಡೆಹಿಡಿಯಬೇಕು

## ಮುಖ್ಯ ಚುನಾವಣಾ ಆಯುಕ್ತರಿಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪತ್ರ

ಚುನಾವಣಾ ಆಯೋಗ ಮತದಾರರ ಗುರುತಿನ ಚೀಟಿ(ಐ.ಡಿ.)ಯೊಂದಿಗೆ ಆಧಾರ್ ನ್ನು ಜೋಡಿಸುವ ಪ್ರಕ್ರಿಯೆಯನ್ನು ಪುನಃ ಪ್ರಾರಂಭಿಸಿದೆ. ಈ ಹಿಂದೆ 2015ರಲ್ಲಿ ಅದು ನಡೆಸಿದ್ದ ಮತದಾರ ಗುರುತಿನ ಚೀಟಿ ಮತ್ತು ಆಧಾರನ್ನು ಜೋಡಿಸುವ ಪ್ರಕ್ರಿಯೆಯಲ್ಲಿ ವಿಶೇಷವಾಗಿ ತೆಲ್ಲಂಗಾಣ ರಾಜ್ಯದಲ್ಲಿ ಹಲವಾರು ಮತದಾರರ ಹೆಸರುಗಳು ಬಿಟ್ಟುಹೋದುವು. ಇದು ಈ ಪ್ರಕ್ರಿಯೆಯಲ್ಲಿನ ಗಂಭೀರ ಲೋಪ–ದೋಷಗಳಿಂದಾಗಿ ಆಗಿದೆ. ಇದರ ಕುರಿತು ಗಂಭೀರ ತನಿಖೆಯನ್ನೂ ನಡೆಸದೆ, ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆಯನ್ನೂ ನಡೆಸದೆ ಈ ಪ್ರಕ್ರಿಯೆಯನ್ನು ಮತ್ತೆ ಆರಂಭಿಸಿರುವುದು ಕಳವಳಕಾರಿ, ಇಂತಹ ತನಿಖೆ ಆಗುವ ವರೆಗೆ, ಮತ್ತು ಇಂತಹ ಲೋಪಗಳು ಆಗದಂತೆ ತಡೆಯುವ ಕ್ರಮಗಳನ್ನು ರೂಪಿಸುವ ವರೆಗೆ ಈ ಪ್ರಕ್ರಿಯೆಯನ್ನು ತಡೆ ಹಿಡಿಯಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮುಖ್ಯ ಚುನಾವಣಾ ಆಯುಕ್ತರಿಗೆ ಆಗಸ್ಟ್ 4ರಂದು ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಮತದಾರರ ಹೆಸರುಗಳನ್ನು ತೆಗೆದಿರುವುದು ಮತ್ತು ದತ್ತಾಂಶ ಭಂಗದ ಗಂಭೀರ ಲೋಪದೋಷಗಳನ್ನು ತನಿಖೆ ಮಾಡುವುದು ಭಾರತದ ಚುನಾವಣಾ ಆಯೋಗದ ಕರ್ತವ್ಯವಾಗಿದೆ. ಮತದಾರರ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ಕೆಲಸವನ್ನು ಅದಕ್ಕೆ ವಿಧಿಸಲಾಗಿದೆ. ದತ್ತಾಂಶ ಸುರಕ್ಷತೆಯ ಕೊರತೆ, ಮತದಾರರ ಹೆಸರುಗಳನ್ನು ತೆಗೆದುಹಾಕುವುದು ಮತ್ತು ದತ್ತಾಂಶವನ್ನು ಚುನಾವಣಾ ಆಯೋಗದ ದತ್ತಾಂಶದೊಂದಿಗೆ ವಿವಿಧ ರಾಜ್ಯ ನಿಗಾವಣೆ ದತ್ತಾಂಶ ಭಂಡಾರಗಳಿಗೆ ಒಳಪಡಿಸುವುದು ಜನಪ್ರತಿನಿಧಿ ಕಾಯಿದೆಯ ಉಲ್ಲಂಘನೆಯಾಗುತ್ತದೆ.

ಆಧಾರ್ ಮತ್ತು ಮತದಾರ ಐ.ಡಿ.ಯನ್ನು ಜೋಡಿಸುವ ಘೋಷಿತ ಉದ್ದೇಶವು ಪ್ರಾಥಮಿಕವಾಗಿ ನಕಲಿ ಮತದಾರರನ್ನು ತೆಗೆದುಹಾಕುವುದಾಗಿದೆ, ಆದರೆ ಯುಐಡಿಎಐ ಮೇಲಿನ ತನ್ನ ವರದಿಯಲ್ಲಿ ಸಿಎಜಿ ನಕಲಿ ಆಧಾರ್ ಕುರಿತ ಕಳವಳಗಳನ್ನು ಎತ್ತಿರುವಾಗ, ಇದು ಆತುರದ ಕಸರತ್ತಾಗುತ್ತದೆ. ಭಾರತದ ಚುನಾವಣಾ ಆಯೋಗ ಈ ವಿಷಯದಲ್ಲಿ ಕೈಗೊಳ್ಳಬೇಕಾದ ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸದಿರುವುದು ಮತ್ತು ಪ್ರತಿಯೊಬ್ಬ ಮತದಾರರ ಆಧಾರ್ ಅನ್ನು ಜೋಡಿಸುವ ಆತುರದ ಪ್ರಕ್ರಿಯೆಯು ಈ ಹಿಂದೆ ಸಂಭವಿಸಿದಂತೆ ನಿಜವಾದ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಘಟನೆಗಳಿಗೆ ಕಾರಣವಾಗುತ್ತದೆ.

ಚುನಾವಣಾ ಆಯೋಗವು 2021 ರಲ್ಲಿ ಪ್ರಜಾಪ್ರತಿನಿಧಿ ಕಾಯ್ದೆಗೆ ಈ ಜೋಡಣೆಯ ವಿಧಾನಕ್ಕೆ ಅವಕಾಶವನ್ನು ಕೊಡುವ ತಿದ್ದುಪಡಿಯನ್ನು ಮಾಡುವ ಮೊದಲು ಸಂಗ್ರಹಿಸಿದ ಎಲ್ಲಾ ಆಧಾರ್ ದತ್ತಾಂಶವನ್ನು ತೆಗೆದು ಹಾಕಬೇಕು. ಅಧಿಕಾರಿಗಳು ಈ ಹಿಂದಿನ ಜೋಡಣೆಯನ್ನು ಮತದಾರರಿಗೆ ಸೂಕ್ತ ಮಾಹಿತಿ ಕೊಡದೆ ನಡೆಸಿದ್ದರಿಂದ, ಈಗಾಗಲೇ ಮತದಾರರ ಗುರುತಿನ ಚೀಟಿಯೊಂದಿಗೆ ಆಧಾರ್ ನ್ನು ಜೋಡಿಸಿರುವ ಪ್ರತಿಯೊಬ್ಬ ಮತದಾರರಿಗೆ ಅಧಿಸೂಚನೆ ನೀಡಬೇಕು ಎಂದು ಯೆಚುರಿ ಈ ಪತ್ರದಲ್ಲಿ ಒತ್ತಾಯಿಸಿದ್ದಾರೆ.

"ನಾಗರಿಕರ ಮತ್ತು. ಚುನಾವಣಾ ಉದ್ದೇಶಗಳಿಗಾಗಿ ಮಾತ್ರ ಸಂಗ್ರಹಿಸಲಾದ ಈ ದತ್ತಾಂಶವನ್ನು ಇತರ ಉದ್ದೇಶಗಳಿಗಾಗಿ ಬಳಸುವುದನ್ನು ನಾವು ವಿರೋಧಿಸುತ್ತೇವೆ ಮತ್ತು ಈ ದತ್ತಾಂಶದ ಉದ್ದೇಶವನ್ನು ಮಿತಿಗೊಳಿಸಬೇಕು ಎಂದು ಒತ್ತಾಯಿಸುತ್ತೇವೆ. ಭಾರತದ ಚುನಾವಣಾ ಆಯೋಗವು ಖಾಸಗಿತ್ವದ ಅಭ್ಯಾಸಗಳ ಅಗತ್ಯವನ್ನು ಖಚಿತಗೊಳಿಸಬೇಕು" ಎಂದು ಈ ಪತ್ರದಲ್ಲಿ ಸರಕಾರವನ್ನು ಆಗ್ರಹಿಸಲಾಗಿದೆ.

ಸೀತಾರಾಂ ಯೆಚುರಿಯವರ ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಮಾನ್ಯರೇ,

ಭಾರತದ ಚುನಾವಣಾ ಆಯೋಗವು ಮತದಾರರ ಗುರುತಿನ ಚೀಟಿ(ಐ.ಡಿ.)ಯೊಂದಿಗೆ ಆಧಾರ್ ನ್ನು ಜೋಡಿಸುವ ಪ್ರಕ್ರಿಯೆಯನ್ನು ಪುನಃ ಪ್ರಾರಂಭಿಸಿದೆ. ಮತದಾರ ಐ.ಡಿ.ಯೊಂದಿಗೆ ಆಧಾರ್ ಅನ್ನು ಜೋಡಿಸುವ ಈ ಪ್ರಕ್ರಿಯೆಯನ್ನು ಈಗಾಗಲೇ 2015 ರಲ್ಲಿ 'ರಾಷ್ಟ್ರೀಯ ಚುನಾವಣಾ ಪಟ್ಟಿಗಳ ಶುದ್ಧೀಕರಣ – ದೃಢೀಕರಣ ಕಾರ್ಯಕ್ರಮ'ದ ಭಾಗವಾಗಿ, ಸುಪ್ರೀಂ ಕೋರ್ಟ್ ಈ ಪ್ರಕ್ರಿಯೆಯನ್ನು ನಿಲ್ಲಿಸುವವರೆಗೆ. ನಡೆಸಲಾಗಿದೆ ಎಂದು ಸಾರ್ವಜನಿಕವಾಗಿಯೇ ಒಪ್ಪಿಕೊಳ್ಳಲಾಗಿದೆ,

ಈ ಕಸರತ್ತಿನ ಭಾಗವಾಗಿ ದೇಶಾದ್ಯಂತ ಹಲವಾರು ಮುಖ್ಯ ಚುನಾವಣಾ ಅಧಿಕಾರಿಗಳು ಎನ್.ಪಿ.ಆರ್., ಪಿಡಿಎಸ್ ಮತ್ತು ರಾಜ್ಯ ನಿವಾಸಿ ದತ್ತಾಂಶ ಜಾಲಸಂಪರ್ಕಗಳು(ಎಸ್.ಆರ್.ಡಿ.ಹೆಚ್.) ನಂತಹ ಹಲವಾರು ಇತರ ದತ್ತಾಂಶ ಸಂಗ್ರಹಗಳಿಂದ ಮತದಾರರ ಆಧಾರ್ ದತ್ತಾಂಶಗಳನ್ನು ಪಡೆದುಕೊಂಡಿದ್ದಾರೆ. ಈ ಚುನಾವಣಾ ಕಚೇರಿಗಳು ವೈಯಕ್ತಿಕ ಮತದಾರರಿಗೆ ಈ ಬಗ್ಗೆ ಮಾಹಿತಿ ನೀಡಿಲ್ಲ, ಬದಲಿಗೆ ಈಗಾಗಲೇ ಅಸ್ತಿತ್ವದಲ್ಲಿರುವ ದತ್ತಾಂಶಗಳನ್ನು ಆಧರಿಸಿ ತಂತಾನೇ ಜೋಡಿಸುವ ನಿಬಂಧನಾಂಶ(ಅಲ್ಗಾರಿದಮ್)ಗಳನ್ನು ಬಳಸಿ 31 ಕೋಟಿ ಮತದಾರರ ಮತದಾರ ಐ.ಡಿ.ಯೊಂದಿಗೆ ಆಧಾರ್ ಅನ್ನು ಜೋಡಿಸಿವೆ. ಈ ಪ್ರಕ್ರಿಯೆಯ ಫಲಿತಾಂಶವಾಗಿ ದೇಶಾದ್ಯಂತ, ನಿರ್ದಿಷ್ಟವಾಗಿ, ಮತದಾರ ಐ.ಡಿ.ಯೊಂದಿಗೆ ಆಧಾರ್ ನ್ನು ಜೋಡಿಸುವ ಎನ್.ಆರ್.ಇ.ಪಿ–ಎ.ಪಿ.ಯನ್ನು ಮೂಲತಃ ಅಭಿವೃದ್ಧಿ ಪಡಿಸಿದ ತೆಲಂಗಾಣ ರಾಜ್ಯದಲ್ಲಿ ಮತದಾರರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಬಿಟ್ಟುಹೋಗಿವೆ. ಈ ಪ್ರಕ್ರಿಯೆ 2018 ರ ವಿಧಾನಸಭಾ ಚುನಾವಣೆಯ ಸಮಯದಲ್ಲಿ ತೆಲಂಗಾಣ ರಾಜ್ಯದಾದ್ಯಂತ ಹಲವಾರು ನೈಜ ಮತದಾರರನ್ನು ತಟ್ಟಿದ್ದು, ಹಲವು ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆಯಲಾಗಿದೆ. ಇದಲ್ಲದೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಆಧಾರ್‌ಗೆ ಜೋಡಿಸಿದ ಮತದಾರ ಐ.ಡಿ.ಗಳ ದತ್ತಾಂಶಗಳ ಭಂಗವಾಗಿದೆ.

ಆಧಾರ್‌ಗೆ ಸಂಬಂಧಿಸಿದಂತೆ ಈ ಹಿಂದೆ ಇಂತಹ ಚುನಾವಣಾ ಅಪ–ಆಚರಣೆಗಳೆಲ್ಲ ನಡೆದಿರುವಾಗ, ಈ ಪ್ರಕ್ರಿಯೆಯ ಪ್ರಾರಂಭದ ಮೊದಲು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸದಿರುವುದು ಕಳವಳಕಾರಿಯಾಗಿದೆ. ಭಾರತವು ಪ್ರಸ್ತುತ ದತ್ತಾಂಶ ರಕ್ಷಣೆ ಅಥವಾ ಖಾಸಗಿತ್ವ ಕಾನೂನನ್ನು ಹೊಂದಿಲ್ಲ ಮತ್ತು ಭಾರತದ ಚುನಾವಣಾ ಆಯೋಗವು ಕೂಡ ಮತದಾರರ ಆಧಾರ್ ದತ್ತಾಂಶ ನಿರ್ವಹಣೆಗೆ ಸಂಬಂಧಿಸಿದಂತೆ ಖಾಸಗಿತ್ವ ನೀತಿಯನ್ನು ಹೊಂದಿಲ್ಲ. ಆಧಾರ್ ಮತ್ತು ಮತದಾರ ಐಡಿಯನ್ನು ಜೋಡಿಸುವ ಘೋಷಿತ ಉದ್ದೇಶವು ಪ್ರಾಥಮಿಕವಾಗಿ ನಕಲಿ ಮತದಾರರನ್ನು ತೆಗೆದುಹಾಕುವುದಾಗಿದೆ, ಆದರೆ ಯುಐಡಿಎಐ ಮೇಲಿನ ತನ್ನ ವರದಿಯಲ್ಲಿ ಸಿಎಜಿ ನಕಲಿ ಆಧಾರ್ ಕುರಿತ ಕಳವಳಗಳನ್ನು ಎತ್ತಿರುವಾಗ, ಇದು ಆತುರದ ಕಸರತ್ತು. ಭಾರತದ ಚುನಾವಣಾ ಆಯೋಗ ಈ ವಿಷಯದಲ್ಲಿ ಕೈಗೊಳ್ಳಬೇಕಾದ ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸದಿರುವುದು ಮತ್ತು ಪ್ರತಿಯೊಬ್ಬ ಮತದಾರರ ಆಧಾರ್ ಅನ್ನು ಜೋಡಿಸುವ ಆತುರದ ಪ್ರಕ್ರಿಯೆಯು ಈ ಹಿಂದೆ ಸಂಭವಿಸಿದಂತೆ ನಿಜವಾದ ಮತದಾರರನ್ನು ಮತದಾರರ ಪಟ್ಟಿಯಿಂದ ತೆಗೆಯುವ ಘಟನೆಗಳಿಗೆ ಕಾರಣವಾಗುತ್ತದೆ.

ದತ್ತಾಂಶ ಸುರಕ್ಷತೆಯ ಕೊರತೆ, ಮತದಾರರ ಹೆಸರುಗಳನ್ನು ತೆಗೆದುಹಾಕುವುದು ಮತ್ತು ದತ್ತಾಂಶವನ್ನು ಚುನಾವಣಾ ಆಯೋಗದ ದತ್ತಾಂಶದೊಂದಿಗೆ ವಿವಿಧ ರಾಜ್ಯ ನಿಗಾವಣೆ ದತ್ತಾಂಶ ಭಂಡಾರಗಳಿಗೆ ಒಳಪಡಿಸುವುದು ಜನಪ್ರತಿನಿಧಿ ಕಾಯಿದೆಯ ಉಲ್ಲಂಘನೆಯಾಗುತ್ತದೆ. ಮತದಾರರ ಹೆಸರುಗಳನ್ನು ತೆಗೆದಿರುವುದು ಮತ್ತು ದತ್ತಾಂಶ ಭಂಗದ ಈ ಗಂಭೀರ ಲೋಪದೋಷಗಳನ್ನು ತನಿಖೆ ಮಾಡುವುದು ಭಾರತದ ಚುನಾವಣಾ ಆಯೋಗದ ಕರ್ತವ್ಯವಾಗಿದೆ. ಮತದಾರರ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವ ಕೆಲಸವನ್ನು ಭಾರತದ ಚುನಾವಣಾ ಆಯೋಗಕ್ಕೆ ವಿಧಿಸಲಾಗಿದೆ. ಚುನಾವಣಾ ಆಯೋಗವು ಈ ಘಟನೆಗಳ ಬಗ್ಗೆ ತನಿಖಾ ವರದಿಯನ್ನು ತಯಾರಿಸುವ ವರೆಗೆ ಮತ್ತು ಸ್ಪಷ್ಟವಾದ ತಪಾಸಣೆ ಮತ್ತು ಸಮತೋಲನ ಕ್ರಮಗಳನ್ನು ಪ್ರಸ್ತುತ ಪಡಿಸುವ ವರೆಗೆ ಈ ಜೋಡಿಕೆಯ ಕಸರತ್ತನ್ನು ಕಸರತ್ತನ್ನು ತಡೆಹಿಡಿಯಬೇಕು.

ಚುನಾವಣಾ ಆಯೋಗವು 2021 ರಲ್ಲಿ ಈ ಜೋಡಣೆಯ ವಿಧಾನಕ್ಕೆ ಅವಕಾಶವನ್ನು ಕೊಡುವ ತಿದ್ದುಪಡಿಯನ್ನು ಪ್ರಜಾಪ್ರತಿನಿಧಿ ಕಾಯ್ದೆಗೆ ಮಾಡುವ ಮೊದಲು ಸಂಗ್ರಹಿಸಿದ ಎಲ್ಲಾ ಆಧಾರ್ ದತ್ತಾಂಶವನ್ನು ತೆಗೆದು ಹಾಕಬೇಕು. ಅಧಿಕಾರಿಗಳು ಈ ಹಿಂದಿನ ಜೋಡಣೆಯನ್ನು ಮತದಾರರಿಗೆ ಸೂಕ್ತ ಮಾಹಿತಿ ಕೊಡದೆ ನಡೆಸಿದ್ದರಿಂದ, ಈಗಾಗಲೇ ಮತದಾರರ ಗುರುತಿನ ಚೀಟಿಯೊಂದಿಗೆ ಆಧಾರ್ ನ್ನು ಜೋಡಿಸಿರುವ ಪ್ರತಿಯೊಬ್ಬ ಮತದಾರರಿಗೆ ಅಧಿಸೂಚನೆ ನೀಡಬೇಕು ಎಂದು ನಾವು ಒತ್ತಾಯಿಸುತ್ತೇವೆ. ಜೋಡಣೆಯ ಈ ಸಂಪೂರ್ಣ ಕಸರತ್ತು ಸ್ವಯಂಪ್ರೇರಣೆಯಿಂದ ನಡಯುವಂತದ್ದಾದ್ದರಿಂದ ಮತದಾರರು ತಮ್ಮ ಆಧಾರ್ ಜೋಡಣೆಯನ್ನು ತೆಗೆಯುವ ಹಕ್ಕನ್ನು ಚಲಾಯಿಸಲು ಅವಕಾಶ ನೀಡಬೇಕು. ಈ ಕಸರತ್ತು ಪ್ರಾರಂಭವಾಗುವ ಮೊದಲು ಆಧಾರ್ ಮತದಾರ ಐಡಿಯನ್ನು ಜೋಡಿಸಲು ಮತ್ತು ಜೋಡಣೆಯನ್ನು ತೆಗೆಯಲು ಕೋಡ್ ಮತ್ತು ಕೈಪಿಡಿಗಳು ಸೇರಿದಂತೆ ಸಂಪೂರ್ಣ ತಾಂತ್ರಿಕ ಪ್ರಕ್ರಿಯೆ, ಖಾಸಗಿತ್ವ ನೀತಿಗಳನ್ನು ಪ್ರಕಟಿಸಬೇಕು ಮತ್ತು ಎಲ್ಲಾ ರಾಜಕೀಯ



ಪಕ್ಷಗಳು ಮತ್ತು ಸಾರ್ವಜನಿಕರೊಂದಿಗೆ ಅವನ್ನು ಹಂಚಿಕೊಳ್ಳಬೇಕು.

ದತ್ತಾಂಶ ಸಂರಕ್ಷಣಾ ಕಾನೂನಿನ ಕೊರತೆಯಿಂದಾಗಿ, ಯಾವುದೇ ರೀತಿಯಲ್ಲಿ ಮತದಾರ ಐಡಿ ಜೋಡಿಸಿದ ಆಧಾರ್ ನ್ನು ಓಂಖಿಉಖಖಆ ದತ್ತಾಂಶ ಭಂಡಾರ, ರಾಷ್ಟ್ರೀಯ ಜನಸಂಖ್ಯಾ ನೋಂದಣಿ, ರಾಷ್ಟ್ರೀಯ ನಾಗರಿಕರ ನೋಂದಣಿಯನ್ನು ನಿರ್ಮಿಸುವ ಉದ್ದೇಶಕ್ಕಾಗಿಯಾಗಲೀ ಮತ್ತು ಯಾವುದೇ ಹೊಸ ಮತ್ತು ಮುಂಬರುವ ಜನನ ಮತ್ತು ಮರಣ ದಾಖಲಾತಿಗಳ ದತ್ತಾಂಶ ಬಂಡಾರವನ್ನು ನನಿರ್ಮಿಸುವುದಕ್ಕಾಗಲೀ ಗೃಹ ವ್ಯವಹಾರಗಳ ಸಚಿವಾಲಯದೊಂದಿಗೆ ಯಾವುದೇ ಸಂಭಾವ್ಯ ಹಂಚಿಕೆಯನ್ನು ನಾವು ವಿರೋಧಿಸುತ್ತೇವೆ. ನಾಗರಿಕರ ಮತ್ತು. ಚುನಾವಣಾ ಉದ್ದೇಶಗಳಿಗಾಗಿ ಮಾತ್ರ ಸಂಗ್ರಹಿಸಲಾದ ಈ ದತ್ತಾಂಶವನ್ನು ಇತರ ಉದ್ದೇಶಗಳಿಗಾಗಿ ಬಳಸುವುದನ್ನು ನಾವು ವಿರೋಧಿಸುತ್ತೇವೆ ಮತ್ತು ಈ ದತ್ತಾಂಶದ ಉದ್ದೇಶವನ್ನು ಮಿತಿಗೊಳಿಸಬೇಕು ಎಂದು ಒತ್ತಾಯಿಸುತ್ತೇವೆ. ಭಾರತದ ಚುನಾವಣಾ ಆಯೋಗವು ಖಾಸಗಿತ್ವದ ಅಭ್ಯಾಸಗಳ ಅಗತ್ಯವನ್ನು ಖಚಿತಗೊಳಿಸಬೇಕು.

ಈ ದತ್ತಾಂಶ ಸಂಗ್ರಹಣೆ ಮತ್ತು ಬಳಕೆಯ ಉದ್ದೇಶವು ಮತದಾರರ ನಕಲಿಯನ್ನು ನಿವಾರಿಸುವುದಕ್ಕೆ ಮಾತ್ರ ಸೀಮಿತವಾಗಿರಬೇಕು ಮತ್ತು ಅದು ಕೂಡ ಪುಟ್ಟಸ್ವಾಮಿ Vs ಭಾರತ ಒಕ್ಕೂಟ (2018) ಪ್ರಕರಣದಲ್ಲಿನ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಕಡ್ಡಾಯವಾಗಿರಬಾರದು. ಈ ನಿಟ್ಟಿನಲ್ಲಿ, ಆಯೋಗವು ಎಲ್ಲಾ ಮುಖ್ಯ ಚುನಾವಣಾ ಅಧಿಕಾರಿಗಳು, ಜಿಲ್ಲಾ ಚುನಾವಣಾ ಅಧಿಕಾರಿಗಳು, ಚುನಾವಣಾ ನೋಂದಣಿ ಅಧಿಕಾರಿಗಳು, ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಎಲ್ಲಾ ದತ್ತಾಂಶ ಅಭ್ಯಾಸಗಳು ಮತ್ತು ಅದರ ಅಧಿಕಾರಿಗಳು ಅನುಸರಿಸಬೇಕಾದ ಖಾಸಗಿತ್ವದ ಅಭ್ಯಾಸಗಳ ಸೂಚನೆಗಳನ್ನು ನೀಡಬೇಕಾಗಿದೆ. ಈ ಅಭ್ಯಾಸಗಳ ಯಾವುದೇ ಉಲ್ಲಂಘನೆಗಳ ವಿಷಯದಲ್ಲಿ EC ಕಟ್ಟುನಿಟ್ಟಾಗಿ ವ್ಯವಹರಿಸಬೇಕು.

ಸೀತಾರಾಂ ಯೆಚೂರಿ, ಪ್ರಧಾನ ಕಾರ್ಯದರ್ಶಿ




ಲೋಕಸಭೆಯಲ್ಲಿ ಮಂಡಿಸಲು ಉದ್ದೇಶಿಸಲಾದ ವಿದ್ಯುತ್ (ತಿದ್ದುಪಡಿ) ಮಸೂದೆ, 2022 ನ್ನು ಶಾಸನವಾಗಿಸುವುದರ ವಿರುದ್ಧ ಪ್ರತಿಭಟನೆ ನಡೆಸಬೇಕೆಂದು ರಾಷ್ಟ್ರೀಯ ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳ ಸಮನ್ವಯ ಸಮಿತಿ (ಎನ್‌ಸಿಸಿಒಇಇಇ) ನೀಡಿರುವ ಕರೆಗೆ ಓಗೊಟ್ಟು ಆಗಸ್ಟ್ 8 ರಂದು ಕಾಶ್ಮೀರದಿಂದ ತಮಿಳುನಾಡು ಮತ್ತು ತ್ರಿಪುರದಿಂದ ಕೇರಳದವರೆಗೆ ದೇಶದಾದ್ಯಂತ 9608 ಸ್ಥಳಗಳಲ್ಲಿ ಒಟ್ಟಾರೆಯಾಗಿ ಹತ್ತು ಲಕ್ಷ ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳು ಕೆಲಸ ನಿಲುಗಡೆ ಮಾಡಿ ಭಾಗವಹಿಸಿದರು.

ಎನ್‌ಸಿಸಿಒಇಇಇ ಆಗಸ್ಟ್ 2, 2022 ರಂದು ನವದೆಹಲಿಯ ಕಾನ್‌ಸ್ಟಿಟ್ಯೂಷನ್ ಪುಟ 7 ಕ್ಕೆ

ಸಂಪಾದಕೀಯ

# ಬಾಬಾಬುಡನ್ ಗಿರಿ: ಸರಕಾರದ ಅನಾಹುತಕಾರಿ ನಿರ್ಧಾರ

ಚಿಕ್ಕಮಗಳೂರು ಜಿಲ್ಲೆಯ ಸಹ್ಯಾದ್ರಿ ಶೃಂಗ ಶ್ರೇಣಿಯಲ್ಲಿರುವ ಐತಿಹಾಸಿಕ ಬಾಬಾಬುಡನ್ ಗಿರಿಯ ದರ್ಗಾ ಪೀಠದ ಗುಹೆಯಲ್ಲಿ ನಡೆಸಬೇಕಾದ ಧಾರ್ಮಿಕ ಆಚರಣೆ, ಪೂಜಾವಿಧಿ ವಿಧಾನ, ಆಡಳಿತ ನಿರ್ವಹಣೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರಕಾರ ಇತ್ತೀಚೆಗೆ ಹೊರಡಿಸಿರುವ ಆದೇಶ ಅತ್ಯಂತ ಅಪಾಯಕಾರಿಯಾಗಿದೆ. ಭಾರತ ದೇಶದಲ್ಲಿಯೇ ಕೋಮು ಸೌಹಾರ್ದತೆ, ಬಹುಮುಖಿ ಸಂಸ್ಕೃತಿಯ ಪ್ರಬಲ ಸಂಕೇತ, ಅನುಕರಣೀಯ ಎಂದು ಸುಪ್ರಿಂ ಕೋರ್ಟ್ ನಿಂದ ಪ್ರಶಂಸಿಲ್ಪಟ್ಟ ಸರ್ವ ಧರ್ಮೀಯರ ಶ್ರದ್ಧಾ ಕೇಂದ್ರದ ಪರಂಪರೆಗೆ ಮಸಿ ಬಳಿಯಲಾಗಿದೆ. ಸಂಘ ಪರಿವಾರ ಸರಕಾರದ ಅಧಿಕಾರ ದುರ್ಬಳಕೆ ಮಾಡಿ ವೈದಿಕಶಾಹೀಕರಣಕ್ಕೆ ಹಾದಿ ಮಾಡುವ ಬುಡಮೇಲು ಮಾಡುವ ಕೃತ್ಯವೂ ಇದಾಗಿದೆ.

ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಪೀಠ ಇರುವ ಗುಹೆಯಲ್ಲಿ ಹಿಂದಿನಿಂದಲೂ ಮುಜಾವರವರು ಧಾರ್ಮಿಕ ವಿಧಿ ವಿಧಾನಗಳನ್ನು ನಿತ್ಯವೂ ಪೂರೈಸುತ್ತಿದ್ದಾರೆ. ಇದು ಹಲವಾರು ಶತಮಾನಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಈಗ ಇವರೊಂದಿಗೆ ಆಗಮ ಗೊತ್ತಿರುವ ಹಿಂದೂ ಅರ್ಚಕರನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ. ಇಂದಿನ ಒಟ್ಟು ಆಡಳಿತಾತ್ಮಕ ಮತ್ತು ಧಾರ್ಮಿಕ ಆಚರಣೆಗಳ ಎಲ್ಲಾ ಕಾರ್ಯಭಾರಗಳನ್ನು ನಿರ್ವಹಣೆ ಮಾಡುತ್ತಾ ಉಸ್ತುವಾರಿ ನೋಡಿಕೊಳ್ಳುತ್ತಿದ್ದುದು ಸಜ್ಜಾದ್ ಎ ನಶೀನ್– ಶಾಖಾದ್ರಿ. ಇವರು ಸೂಫಿ ಸಂತರ ವಂಶಸ್ಥರು ಮತ್ತು ಪರಂಪರಾನುಗತ ಹಕ್ಕು ಹೊಂದಿದವರು. ಆದರೀಗ ಸರಕಾರ ಆ ಶ್ರದ್ಧಾ ಕೇಂದ್ರದ ನಿರ್ವಹಣೆ ಪೂರ್ಣ ಉಸ್ತುವಾರಿಗೆ ಹಿಂದೂ–ಮುಸ್ಲಿಂ ಧರ್ಮದವರನ್ನು ಒಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ನೇಮಿಸಲಿದೆ. ಪೀಠ ಮತ್ತು ದರ್ಗಾದ ಅರ್ಚನೆ, ಪೂಜಾ ವಿಧಿಗಳನ್ನು ಮುಜಾವರ್ ನಡೆಸುತ್ತಿದ್ದರು. ಅದರ ಬದಲಿಗೆ ದತ್ತಪೀಠದ್ದನ್ನು ಆಗಮ ಬಲ್ಲ ಅರ್ಚಕರಿಗೆ ವಹಿಸಿ ಕೊಡಲಿದೆ. ಪ್ರತಿ ಸೋಮವಾರ ಮತ್ತು ಗುರುವಾರ ನಮಾಜ್ ನಂತರ ಲೋಭಾನ ಹಾಕುವ ಪ್ರತಿ ಸಂಜೆ ಲೋಬಾನ, ಪತೇಹ ಅರ್ಪಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ದತ್ತ ಮಾಲಾ, ದತ್ತ ಜಯಂತಿ ಮತ್ತು ಇತರೆ ಧಾರ್ಮಿಕ ಆಚರಣೆಗಳು ಸುಗಮವಾಗಿ ಸಾಗಲು ವ್ಯವಸ್ಥಾಪನಾ ಸಮಿತಿಯು ಕ್ರಮ ಕೈಗೊಳ್ಳಬೇಕು. ಹೋಳಿ ಹುಣ್ಣಿಮೆಯ ಮರುದಿನದಿಂದ ಮೂರು ದಿನಗಳ ಉರುಸ್ ಆಚರಿಸಲು ಅವಕಾಶವಿದೆಯೆಂದು ಸರ್ಕಾರ ಆದೇಶಿಸಿದೆ.

ಮೊದಲನೆಯದಾಗಿ ಬಾಬಾಬುಡನ್ ದರ್ಗಾ ಪೀಠವನ್ನು ಯಾವುದೇ ಒಂದು ಧರ್ಮದ ಆಚರಣೆಯ ಜೊತೆಯಲ್ಲಿ ಸಮೀಕರಿಸುವುದೇ ತಪ್ಪು. ಈ ದತ್ತಮಾಲಾ, ದತ್ತ ಜಯಂತಿ ಇತ್ಯಾದಿ ಯಾವುದೇ ಧಾರ್ಮಿಕ ಆಚರಣೆಗಳು ಹಿಂದೆಂದೂ ಇಲ್ಲದ ಆಚರಣೆಗಳಾಗಿವೆ. ಮತ್ತು ದರ್ಗಾ ಪೀಠದ ಗುಹೆಯನ್ನು ವಿವಾದಗ್ರಸ್ತಗೊಳಿಸಲು 90 ರ ದಶಕದಲ್ಲಿ ಸಂಘ ಪರಿವಾರ ಯೋಜಿತ ಕಾರ್ಯಾಚರಣೆ ಆರಂಭಿಸಿದ ನಂತರ ಬಜರಂಗದಳ ವಿಶ್ವ ಎಂದು ಪರಿಷತ್ ನಂತಹ ಸಂಘಟನೆಗಳು ಪ್ರತಿ ವರ್ಷ ಇಲ್ಲಿನ ಪರಂಪರೆ, ಕಾನೂನು ಮತ್ತು ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ ಆಚರಣೆಯನ್ನು ನಡೆಸುತ್ತಿದ್ದುದು ಎಲ್ಲರಿಗೂ ಗೊತ್ತಿರುವ ಸಂಗತಿ. ಈಗಿನ ಆದೇಶ  ಬಜರಂಗದಳ, ವಿಶ್ವ ಹಿಂದೂ ಪರಿಷತ್ತಿನ ಕೆಲಸಗಳನ್ನು ಅಧಿಕೃತಗೊಳಿಸಲು ಸರಕಾರವೇ ಮುಂದಾಗಿದೆ.

ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿವಾದ ಉಲ್ಬಣಗೊಳಿಸುತ್ತಿದ್ದ ಕಾಲದಿಂದ, 1990 ದಶಕದ ಆರಂಭದಿಂದಲೂ ಸಂಘಪರಿವಾರ ಸೃಷ್ಟಿಸುತ್ತಾ ಬಂದಿರುವ ಹತ್ತಾರು ಹಸಿ ಸುಳ್ಳುಗಳು ಈ ವಿವಾದೊಳಗೆ ಹೆಣೆಯಲಾಗಿದೆ. ದುರಂತವೆಂದರೆ ಸಾರ್ವಜನಿಕ ಹೊಣೆಗಾರಿಕೆ ಇರುವ ಸರಕಾರದ ನಿರ್ಧಾರಕ್ಕೆ ಇವೇ ಆಧಾರವಾಗಿವೆ.

1975 ರಲ್ಲಿ ಕರ್ನಾಟಕ ಸರಕಾರ ಬಾಬಾ ಬುಡನ್ ದರ್ಗಾ ಪೀಠದ ಒಟ್ಟು ಆಸ್ತಿ, ಪ್ರದೇಶದ ಆಡಳಿತದ ನಿರ್ವಹಣೆಯನ್ನು ಮುಜರಾಯಿ ಇಲಾಖೆಯಿಂದ ವಕ್ಫ್ ಮಂಡಳಿಗೆ ವಹಿಸಿತು. ಇದನ್ನು ವಿರೋಧಿಸಿ ಈ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಸಜ್ಜಾದ್ ಎ ನಿಶಾನ್– ಶಾಖಾದ್ರಿಯವರು ನ್ಯಾಯಾಲಯದ ಮೊರೆ ಹೋದರು. ಇದೇ ಸಂದರ್ಭದಲ್ಲಿ ಇನ್ನಿಬ್ಬರು ಹಿಂದೂಗಳು ಸಹ ವಿರೋಧಿಸಿ ನ್ಯಾಯಾಲಯಕ್ಕೆ ಮನವಿ ಮಾಡಿದರು. 1988 ರಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಯುಕ್ತರು ಆದೇಶ ಹೊರಡಿಸಿ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಆದೇಶಿಸಿದರು. 2008ರಲ್ಲಿ ಸುಪ್ರಿಂ ಕೋರ್ಟ್ ಹಿಂದಿನ ತನ್ನ ಆದೇಶವನ್ನು ಪುನರುಚ್ಚರಿಸಿದಲ್ಲದೆ ಇದು ಹಿಂದೂ ಹಾಗೂ ಮುಸ್ಲಿಂ ಎಲ್ಲರಿಗೂ ಸಮಾನವಾಗಿ ಪೂಜಿಸುವ ಕೇಂದ್ರವಾಗಿದೆ ಯಥಾ ಸ್ಥಿತಿಯನ್ನು ಕಾಪಾಡಬೇಕು ಎಂದಿತ್ತು. ನ್ಯಾಯಾಲಯದ ಸೂಚನೆಯಂತೆ 2017ರಲ್ಲಿ ಕರ್ನಾಟಕ ಸರ್ಕಾರ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿಯನ್ನು ರಚಿಸಿ ಒಟ್ಟು ಆ ವಿಷಯಗಳ ಕುರಿತಾದಂತೆ ತಜ್ಞರ ವರದಿಯನ್ನು ಪಡೆಯಿತು. ಸುಪ್ರೀಂಕೋರ್ಟಿನ ಆದೇಶವನ್ನು ಮಾರ್ಚ್ 2018 ರಲ್ಲಿ ಅನುಸರಿಸಿ ಈ ಆಸ್ತಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ್ದು, ವಕ್ಫ್ ಗೆ ಅಲ್ಲ ಎಂದು ಆದೇಶಿಸಿತು.

ಇದು ಆಸ್ತಿ ವಿವಾದದ ಸ್ವರೂಪದ ಪ್ರಕರಣ ಎನ್ನುವುದು ಸ್ಪಷ್ಟವಾಗುತ್ತದೆ. ಹಿಂದಿನ ಸರ್ಕಾರಗಳು ಕೆಲವು ವಿಷಯಗಳಲ್ಲಿ ನಡೆದುಕೊಂಡ ರೀತಿಯಲ್ಲೂ ಕೆಲವು ಗೊಂದಲಗಳಿವೆ ಎನ್ನುವುದು ನಿಜ. ಆದರೆ ಬಿಜೆಪಿ ಮತ್ತು ಸಂಘ ಪರಿವಾರ ಇದನ್ನು ಒಂದು ಧಾರ್ಮಿಕ ಪ್ರಶ್ನೆಯಾಗಿ ಕೋಮು ವಿಭಜನೆಗೆ ಮತ್ತು ರಾಜಕೀಯ ಧೃವಿಕರಣದತ್ತ ವಿವಾದವನ್ನಾಗಿ ಪರಿವರ್ತಿಸಿತು. ಮತ್ತು ಅದನ್ನು ಬಹುದೊಡ್ಡ ಆಂದೋಲನದ ಸ್ವರೂಪಕ್ಕೆ ಕೊಂಡೊಯ್ದು ರಾಜಕೀಯ ಲಾಭವನ್ನು ಪಡೆಯಲು ಮುಂದಾಯಿತು. ಈ ವಿವಾದ ವನ್ನು ಚಳುವಳಿಯ ಸ್ವರೂಪಕ್ಕೆ ಕೊಂಡೊಯ್ಯುವ ದೆಶೆಯಲ್ಲಿಯೇ ಚಿಕ್ಕಮಗಳೂರು ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕೋಮು ಗಲಭೆಗಳು ನಡೆದು ಅದರ ರಾಜಕೀಯ ಕ್ರೋಢೀಕರಣವು ಆರಂಭಗೊಂಡಿತು. 2002 ರಲ್ಲಿ ಬಾಬಾಬುಡನ್ ಗಿರಿಯನ್ನು ದಕ್ಷಿಣ ಭಾರತದ ಅಯೋಧ್ಯೆ ಮಾಡುವ, ಕರ್ನಾಟಕವನ್ನು ಗುಜರಾತನ್ನಾಗಿಸುವ ಬಹಿರಂಗ ಬೆದರಿಕೆಯ ಮಾತುಗಳನ್ನು ಆಡಿದ್ದು ಸಂಘಪರಿವಾರ. ಜೊತೆಗೆ ಹಿಂದೆಂದೂ ಇಲ್ಲದ ದತ್ತ ಜಯಂತಿ, ದತ್ತ ಮಾಲೆ, ದತ್ತ ಯಜ್ಞ ಅಭಿಯಾನಗಳನ್ನು ಸಂಘಟಿಸಿ ಜನತೆಯನ್ನು ಎತ್ತಿ ಕಟ್ಟಲು ಪೂರ್ಣ ಪ್ರಮಾಣದಲ್ಲಿ ತೊಡಗುತ್ತಾ ಬಂದಿದೆ. ಈಗಲೂ2025 ರ ಹೊತ್ತಿಗೆ ಭಾರತವನ್ನು ಹಿಂದುತ್ವದ ರಾಷ್ಟ್ರವನ್ನಾಗಿಸುವ ದಾವಂತದಲ್ಲಿರುವ ಆರ್.ಎಸ್.ಎಸ್, ಬಿಜೆಪಿ ಗಳು ಅನಾಹುತಕಾರಿ ಸನ್ನಿವೇಶ ಸೃಷ್ಟಿಸಲು ಹಿಂಜರಿಯುತ್ತಿಲ್ಲ.

ಸುಪ್ರಿಂ ಕೋರ್ಟ್ ನ ಆದೇಶ, 1991ರ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಕಾಯ್ದೆ, ಪುಟ 6 ಕ್ಕೆ



# ಸಂಭ್ರಮದ ಜನಶಕ್ತಿ ಉತ್ಸವ

ಮಂಗಳೂರು, ರೆ.ಜತ್ತನ್ನ ಹಾಲ್, ಆಗಸ್ಟ್ 21, 2022 ಅಲ್ಲಿ ಸಂಭ್ರಮ ನೆರೆದಿತ್ತು. ಸಮಯಕ್ಕೆ ಸರಿಯಾಗಿ ಸಭಿಕರ ಆಗಮನದಿಂದ ಸಭಾಂಗಣ ಬಹುತೇಕ ಫುಲ್. ಉತ್ಸವದ ಉಧ್ಘಾಟನೆಗೆ ಆಗಮಿಸಿದ್ದ ಅತಿಥಿಗಳ ಮಾತುಗಳನ್ನು ಕೇಳಲು ಉತ್ಸುಕತೆ. ಇದಕ್ಕೊಂದು ವಿಶೇಷತೆಯೂ ಇತ್ತು. ಉದ್ಘಾಟನೆಗೆ ಆಗಮಿಸಿದವರು ತೀರಾ ಹರೆಯದಿಂದಲೇ ಮಾಧ್ಯಮ ಲೋಕ ಪ್ರವೇಶಿಸಿ ಕೇರಳ ಮತ್ತು ಅಖಿಲ ಭಾರತ ಮಟ್ಟದಲ್ಲಿ ಸ್ವಪ್ರತಿಭೆಯಿಂದ ತನ್ನದೇ ಛಾಪು ಮೂಡಿಸಿ ಗಮನ ಸೆಳೆದಿದ್ದ ಈಗ ಸಂಸದರೂ ಆಗಿರುವ ಜಾನ್ ಬ್ರಿಟ್ಟಾಸ್ 75 ನೆಯ ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಮೃತ ಕರ್ನಾಟಕ: ಸಮೃದ್ಧ, ಸೌಹಾರ್ದ, ಸಹಬಾಳ್ವೆಯ ಕರ್ನಾಟಕ ವಿಚಾರ ಸಂಕಿರಣದ ಆಶಯ ನುಡಿ ನುಡಿಯಲು ಖ್ಯಾತ ಸಂಸ್ಕೃತಿ ಚಿಂತಕರಾದ ಪ್ರೊ.ಪುರುಷೋತ್ತಮ ಬಿಳಿಮಲೆ, ವಿಚಾರ ಮಂಡಿಸಲು ಹಿರಿಯ ಅಭಿವೃದ್ಧಿ ಚಿಂತಕರಾದ ಪ್ರೊ.ಚಂದ್ರ ಪೂಜಾರಿ, ತುಳು ನಾಡಿನ ಹಿರಿಯ ಸಾಹಿತಿ ಬಿ.ಎಂ.ರೋಹಿಣಿ ಯವರು, ಇತರೆ ಗೆಳೆಯರು ಅಲ್ಲಿ ಸೇರಿದ್ದರು.

ಕಾರ್ಯಕ್ರಮ ನಿರ್ವಹಿಸಿದ ಸುನೀಲ್ ಕುಮಾರ್ ಬಜಾಲರು ಎಲ್ಲಾ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸುವುದರೊಂದಿಗೆ ಸಮಾರಂಭಕ್ಕೆ ಚಾಲನೆ ದೊರೆಯಿತು. ಸ್ವಾಗತ ಗೀತೆ ಲಿಂಗರಾಜು ಮಳವಳ್ಳಿಯವರಿಂದ.

ಸ್ವಾಗತ ಸಮಿತಿಯ ಅದ್ಯಕ್ಷರಾದ ಡಾ. ವಸಂತಕುಮಾರ್ ರವರು ಎಲ್ಲರನ್ನೂ ಸ್ವಾಗತಿಸಿದರು. ಒಟ್ಟು ಕಾರ್ಯಕ್ರಮ, ಜನಶಕ್ತಿ ಪತ್ರಿಕೆಯ ಕುರಿತು ಕಾರ್ಯನಿರ್ವಾಹಕ ಸಂಪಾದಕರಾದ ಡಾ.ಎಸ್.ವೈ. ಗುರುಶಾಂತ್ ಪ್ರಸ್ತಾವನೆಯಲ್ಲಿ ವಿವರಿಸಿದರು.

ಸಮಾರಂಭವನ್ನು ತಮ್ಮ ಅರ್ಥಪೂರ್ಣ ಮಾತುಗಳಿಂದ ಜಾನ್ ಬ್ರಿಟ್ಟಾಸ್ ಅವರು ಉದ್ಘಾಟಿಸಿದರು. ಹಾಗೆಯೇ ಡಾ.ಬಿಳಿಮಲೆ, ಡಾ.ಚಂದ್ರ ಪೂಜಾರಿ, ಶ್ರೀಮತಿ ರೋಹಿಣಿ ಯವರು ಅತ್ಯಂತ ವಿಚಾರಪೂರ್ಣ ಮಾತುಗಳನ್ನಾಡಿದರು. ಅದ್ಯಕ್ಷತೆ ವಹಿಸಿದ್ದ ಸಂಪಾದಕ ಮಂಡಳಿ ಸದಸ್ಯ ಕೆ.ಯಾದವಶೆಟ್ಟಿ, ಸಮಾರೋಪಿಸಿದರು. ಪತ್ರಿಕೆಯ ಪ್ರಕಾಶಕರಾದ ಯು.ಬಸವರಾಜ್, ಸಂಪಾದಕರಾದ ಡಾ.ಕೆ.ಪ್ರಕಾಶ್, ವಾಸುದೇವ ಉಚ್ಚಿಲ, ಡಾ.ಕೃಷ್ಣಪ್ಪ ಕೊಂಚಾಡಿ, ಮುನೀರ್ ಕಾಟಿಪಳ್ಳ ಮುಂತಾವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಮನೋಜ್ ವಾಮಂಜೂರು ವಂದಿಸಿದರು.

ಮದ್ಯಾಹ್ನದ ಅಧಿವೇಶನದಲ್ಲಿ ಪತ್ರಿಕೆಯ ಪ್ರಸಾರ, ವಿನ್ಯಾಸ, ಗುಣ ಮಟ್ಟ, ಮುಂತಾಗಿ ವಿಮರ್ಶಾತ್ಮಕವಾಗಿ ಜಿಲ್ಲೆಗಳಿಂದ ಬಂದಿದ್ದ ಪ್ರತಿಧಿ ಸಂಗಾತಿಗಳು ಚರ್ಚಿಸಿ ಸೂಕ್ತ ಸಲಹೆಗಳನ್ನು ನೀಡಿದರು. ಪತ್ರಿಕೆಯ ಪ್ರಸಾರ ಹಚ್ಚಿಸುವ ಹುಮ್ಮಸ್ಸು ಎಲ್ಲರಲ್ಲಿಯೂ ವ್ಯಕ್ತವಾಯಿತು. ಚರ್ಚೆಗೆ ಪೂರಕವಾದ ವರದಿಯನ್ನು ಡಾ.ಕೆ.ಪ್ರಕಾಶ್ ಮಂಡಿಸಿ ಚರ್ಚೆಗಳನ್ನು ಕ್ರೋಢೀಕರಿಸಿದರು. ಸಮಾರೋಪಿಸಿ ಮಾತನಾಡಿದ ಯು.ಬಸವರಾಜರವರು ಮುಂದಿನ ಗೊತ್ತು ಗುರಿಗಳನ್ನು, ಪತ್ರಿಕೆಯ ಮಹತ್ವವನ್ನು ಮನಗಾಣಿಸಿದರು. ಸಂಗಾತಿ ಗುರುರಾಜ ದೇಸಾಯಿ ನಿರ್ವಹಣೆ ಮಾಡಿ, ವಂದಿಸಿದರು.

ಈ ಸಮಾರಂಭ, ಕಾರ್ಯಾಗಾರದ ಒಟ್ಟು ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಸಂಗಾತಿಗಳಿಗೆ, ಸ್ವಾಗತ ಸಮಿತಿಗೆ ಹೃತ್ಪೂರ್ವ ಧನ್ಯವಾದಗಳನ್ನು ಸಲ್ಲಿಸಲಾಯಿತು.



# ಕರಾವಳಿ ಜಿಲ್ಲೆಗಳಲ್ಲಿ ಸಿಐಟಿಯು ವಲಯ ಸಮ್ಮೇಳನಗಳು

ವರದಿ: ವಾ.ಉ.

ಸಿಐಟಿಯುವಿನ ರಾಷ್ಟ್ರೀಯ ಸಮ್ಮೇಳನದ ಪೂರ್ವಭಾವಿಯಾಗಿ ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿ ಕಳೆದೆರಡು ವಾರಗಳಿಂದ ವಲಯ ಸಮ್ಮೇಳನಗಳು ನಡೆದಿವೆ.

**ಉಡುಪಿ:**

ಉಡುಪಿ ತಾಲೂಕು ಸಿಐಟಿಯು ಸಮ್ಮೇಳನವು ಆಗಸ್ಟ್ 7 ರಂದು ಉಡುಪಿಯಲ್ಲಿ ನಡೆಯಿತು. ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಮ್ಮೇಳನದಲ್ಲಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ವಿಮಾ ನೌಕರರ ಸಂಘದ ಕೆ.ವಿಶ್ವನಾಥ ಕೂಡಾ ಮಾತನಾಡಿದರು. ತಾಲೂಕು ಅಧ್ಯಕ್ಷ ರಾಮ ಕರ್ಕಡ ಧ್ವಜಾರೋಹಣ ನೆರವೇರಿಸಿದ್ದಲ್ಲದೆ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಐಟಿಯು ಜಿಲ್ಲಾ ಅಧ್ಯಕ್ಷ ಕೆ.ಶಂಕರ್, ಖಜಾಂಚಿ ಶಶಿಧರ ಗೊಲ್ಲ ಉಪಸ್ಥಿತರಿದ್ದರು. ಸರೋಜ ಸ್ವಾಗತಿಸಿದರು.

ಸಮ್ಮೇಳನವು ಇಂದಿನ ಉಡುಪಿ ತಾಲೂಕಿಗೂ, ಬ್ರಹ್ಮಾವರ ತಾಲೂಕಿಗೂ ಎರಡು ಪ್ರತ್ಯಪ್ರತ್ಯೇಕ ಸಂಚಾಲನ ಸಮಿತಿಯನ್ನು ಆಯ್ಕೆ ಮಾಡಿತು.

ನೂತನ ಉಡುಪಿ ತಾಲೂಕು ಸಮಿತಿಗೆ ಹಿಂದಿನ ತಾಲೂಕು ಪ್ರ.ಕಾರ್ಯದರ್ಶಿ ಕವಿರಾಜ್ ಅವರು ಸಂಚಾಲಕರಾಗುಳ್ಳ 22 ಮಂದಿಯ ಸಮಿತಿಯನ್ನು ಆಯ್ಕೆ ಮಾಡಿತು.

ಬ್ರಹ್ಮಾವರ ತಾಲೂಕು ಸಂಚಾಲನ ಸಮಿತಿಗೆ 22 ಮಂದಿಯನ್ನು ಆಯ್ಕೆ ಮಾಡಲಾಯಿತು. ರಾಮ ಕರ್ಕಡ ಅವರು ಸಂಚಾಲಕರಾಗಿಯೂ, ಸುಭಾಷ್ ನಾಯ್ಕ್ ಸಹ ಸಂಚಾಲಕರಾಗಿಯೂ ಆಯ್ಕೆಯಾಗಿರುತ್ತಾರೆ.

**ಗುರುಪುರ:**

ದ.ಕ.ಜಿಲ್ಲೆಯ ಗುರುಪುರ ವಲಯ ಸಮ್ಮೇಳನವು ಆಗಸ್ಟ್ 7 ರಂದು ಕೈಕಂಭದಲ್ಲಿ ನಡೆಯಿತು. ವಲಯ ಅಧ್ಯಕ್ಷರಾದ ಗಂಗಯ್ಯ ಅಮೀನ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನವನ್ನು ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿ ಮಾತನಾಡಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ರೈತ ಮುಖಂಡ ಸದಾಶಿವದಾಸ್ ಸಮ್ಮೇಳನ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಹಿರಿಯ ಕಾರ್ಮಿಕ ಮುಖಂಡ ಹಾಗೂ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಯು.ಬಿ.ಲೋಕಯ್ಯನವರು ಸಮಾರೋಪ ಭಾಷಣ ಮಾಡಿದರು.

ಸಮ್ಮೇಳನವು ನೂತನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಬಾಬು ಪೂಜಾರಿ, ಕಾರ್ಯದರ್ಶಿಯಾಗಿ ನೋಣಯ್ಯ ಗೌಡ, ಖಜಾಂಚಿಯಾಗಿ ವಸಂತಿ ಕುಪ್ಪೆಪದವು ಆಯ್ಕೆಯಾಗಿರುತ್ತಾರೆ.

**ಮೂಡಬಿದ್ರಿ:**

ಸಿಐಟಿಯು ಮೂಡಬಿದ್ರಿ ತಾಲೂಕು ಸಮ್ಮೇಳನವು ಆಗಸ್ಟ್ 8 ರಂದು ಮೂಡಬಿದ್ರಿಯಲ್ಲಿ ನಡೆಯಿತು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಿಐಟಿಯು ತಾಲೂಕು ಅಧ್ಯಕ್ಷರಾದ ರಮಣಿ ಮೂಡಬಿದ್ರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿಯವರು ಸಮ್ಮೇಳನ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಸಮ್ಮೇಳನದ ಸಮಾರೋಪ ಭಾಷಣ ಮಾಡಿದರು.

ಸಮ್ಮೇಳನವು ನೂತನ ತಾಲೂಕು ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಅಧ್ಯಕ್ಷರಾಗಿ ಶಂಕರ ವಾಲ್ಪಾಡಿ, ಕಾರ್ಯದರ್ಶಿಯಾಗಿ ರಾಧಾ ಮೂಡಬಿದ್ರಿ, ಖಜಾಂಚಿಯಾಗಿ ಮಹಮ್ಮದ್ ತಶ್ರೀಫ್ ಆಯ್ಕೆಯಾಗಿರುತ್ತಾರೆ.




# ನಾರಾಯಣ ಗುರು ವಿಚಾರಧಾರೆ ಮತ್ತು ಕಾರ್ಮಿಕ ವರ್ಗ ವಿಚಾರ ಸಂಕಿರಣ

ನಮ್ಮದು ಒಕ್ಕೂಟ ವ್ಯವಸ್ಥೆ, ಕೇಂದ್ರೀಯ ವ್ಯವಸ್ಥೆ ಅಲ್ಲ. ನಮ್ಮದು ಬಹುತ್ವದಲ್ಲಿ ಏಕತೆ ಹೊಂದಿದ ದೇಶವಾಗಿದೆ. ವಿವಿಧ ಜಾತಿ, ಲಿಂಗ ವರ್ಣ, ಸಂಸ್ಕೃತಿ ಪ್ರದೇಶ ಹೊಂದಿದ ಬಲಿಷ್ಠ ದೇಶ. ಆದರೆ ನಮ್ಮನ್ನಾಳುವ ಸರಕಾರ ಜನರ ಮೇಲೆ ಒಂದು ದೇಶ, ಒಂದೇ ಭಾಷೆ, ಒಂದು ಕಾನೂನು ಜಾರಿ ಮಾಡುವ ಹುನ್ನಾರ ಹೊಂದಿದೆ. ದುಡಿಯುವ ವರ್ಗ ಒಗ್ಗಟ್ಟಾಗಿ ಶೋಷಣೆ ವಿರುದ್ಧ ಪ್ರಶ್ನೆ ಮಾಡಬಾರದು.

ದೇಶದಲ್ಲಿ ವೈದಿಕಶಾಹಿ, ಪುರೋಹಿತಶಾಹಿ ಹಿಡಿತಕ್ಕೆ ಇಟ್ಟುಕೊಂಡು ಮೇಲು ಕೀಳು ಪರಂಪರೆ ಮಾಡುತ್ತಿರುವುದು ವಿರುದ್ಧ ನಾರಾಯಣ ಗುರು ಈ ಜಾತಿ ತಾರತಮ್ಯ, ಅಸ್ಪೃಶ್ಯತೆ ಮೇಲುಕೀಳು ವಿರುದ್ಧ ಒಂದೇ ಜಾತಿ ಜಾತಿ, ಒಂದೇ ಮತ, ಒಂದೇ ದೇವರು ಎಂದು ಪ್ರತಿಪಾದಿಸಿದರು ಎಂದು ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ, ಪ್ರೊ. ಚಂದ್ರ ಪೂಜಾರಿ ಅಭಿಪ್ರಾಯ ಪಟ್ಟರು, ಸಿಐಟಿಯು ರಾಜ್ಯ ಸಮ್ಮೇಳನದ ಅಂಗವಾಗಿ ಇಂದು ಬೈಂದೂರಿನಲ್ಲಿ ಜರುಗಿದ "ನಾರಾಯಣ ಗುರು ವಿಚಾರಧಾರೆ ಮತ್ತು ಕಾರ್ಮಿಕ ವರ್ಗ" ವಿಚಾರ ಸಂಕಿರಣದಲ್ಲಿ ಅವರು ವಿಚಾರ ಮಂಡಿಸಿದರು. ಸಿಐಟಿಯು ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿಯ ಜಿಲ್ಲಾಧ್ಯಕ್ಷ ಕೆ. ಶಂಕರ ವಿಚಾರ ಸಂಕಿರಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಬಾಲಕೃಷ್ಣ ಶೆಟ್ಟಿ ಪ್ರಾಸ್ತಾವಿಕ ಭಾಷಣ ಮಾಡಿದರು. ಎಚ್. ನರಸಿಂಹ, ಸುರೇಶ ಕಲ್ಲಾಗರ, ರಾಜೀವ ಪಡುಕೋಣೆ, ಗಣೇಶ ತೊಂಡೆಮಕ್ಕಿ, ವೆಂಕಟೇಶ್ ಕೋಣಿ ವೇದಿಕೆಯಲ್ಲಿದ್ದರು.



# ರಾಜ್ಯದಲ್ಲಿ ಮತ್ತೊಂದು ಹಗರಣ ಬೆಳಕಿಗೆ – 9 ಮಂದಿ ಬಂಧನ

ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯ ಅಕ್ರಮಕ್ಕೆ ಸಂಬಂಧಿಸಿ ಪೊಲೀಸರು, ಉಪ ಪ್ರಾಂಶುಪಾಲ ಮತ್ತು ಅವರ ಪುತ್ರ ಸೇರಿದಂತೆ ಒಟ್ಟು 9 ಮಂದಿ ಮುಖ್ಯ ಆರೋಪಿಗಳನ್ನು ಬಂಧಿಸಿದ್ದಾರೆ. ನಾಲ್ವರು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆದಿದೆ.

ಬೆಳಗಾವಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಈ ಅಕ್ರಮವನ್ನು ಭೇದಿಸಿರುವ ಬೆಳಗಾವಿ ಪೊಲೀಸರು ಪ್ರಕರಣದ ಇಂಚಿಂಚೂ ತನಿಖೆ ನಡೆಸಿದ್ದಾರೆ.

2022ರ ಆಗಸ್ಟ್ 7 ರಂದು ಕೆಪಿಟಿಸಿಎಲ್ ಪರೀಕ್ಷೆ ನಡೆದಿದ್ದು, ಗದಗ–ಬೆಟಗೇರಿ ಅವಳಿ ನಗರದ 21 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಪ್ರಶ್ನೆ ಪತ್ರಿಕೆ ಲೀಕ್ ಆಗಿರುವ ಜಾಡು ಹಿಡಿದು ಬಂದ ಬೆಳಗಾವಿ ಸೈಬರ್ ಕ್ರೈಂ ಪೊಲೀಸ್ ಇನ್ಸ್‌ಪೆಕ್ಟರ್ ವಿರೇಶ್ ದೊಡ್ಡಮನಿ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಸಾಕಷ್ಟು ಮಾಹಿತಿಯನ್ನು ಕಲೆ ಹಾಕಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

**ಸಿಕ್ಕಿಬಿದ್ದಿದ್ದ ಪರೀಕ್ಷಾರ್ಥಿ:**

ಕೆಪಿಟಿಸಿಎಲ್ ಕಿರಿಯ ಸಹಾಯಕ ಹುದ್ದೆ ಪರೀಕ್ಷೆ ವೇಳೆ ಬೆಳಗಾವಿಯಲ್ಲಿ ಅಕ್ರಮವಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಪರೀಕ್ಷಾರ್ಥಿಗಳಿಂದ ಬಂದ ದೂರು ಮತ್ತು ಗೋಕಾಕದ ಪರೀಕ್ಷಾ ಕೇಂದ್ರದಲ್ಲಿದ್ದ ಸಿಸಿಟೀವಿ ಪರಿಶೀಲಿಸಿದ ವೇಳೆ ಆರೋಪಿ ಸಿದ್ದಪ್ಪ ಮದಿಹಳ್ಳಿ ಸ್ಮಾರ್ಟ್‌ವಾಚ್ ನೋಡಿಕೊಂಡು ಉತ್ತರ ಬರೆಯುತ್ತಿದ್ದ ವಿಚಾರ ಬೆಳಕಿಗೆ ಬಂದಿತ್ತು. ಈತನ ವಿಚಾರಣೆ ವೇಳೆ ಗದಗದಿಂದ ಪ್ರಶ್ನೆಪತ್ರಿಕೆ ಲೀಕ್ ಆಗಿರುವುದು ಖಚಿತಪಟ್ಟಿತ್ತು.

**ಪ್ರಶ್ನೆ ಪತ್ರಿಕೆ ಲೀಕ್ ಆಗಿದ್ದು ಹೇಗೆ?:**

ಪತ್ರಕರ್ತನ ಸೋಗಿನಲ್ಲಿ ಪರೀಕ್ಷಾ ಕೇಂದ್ರಕ್ಕೆ ಬಂದ ಉಪ ಪ್ರಾಚಾರ್ಯ ಮಾರುತಿ ಸೋನಾವನೆ ಮಗ ಸಮೀತ್ ಕುಮಾರ್ ತನ್ನ ಮೊಬೈಲ್ ಮೂಲಕ ಪ್ರಶ್ನೆ ಪತ್ರಿಕೆಯ ಫೋಟೋಗಳನ್ನು ಸೆರೆ ಹಿಡಿದಿದ್ದಾನೆ. ಅಲ್ಲದೇ, ರಾಜ್ಯದ ಬೇರೆ ಬೇರೆ ಪರೀಕ್ಷಾ ಕೇಂದ್ರಗಳಿಗೂ ಪ್ರಶ್ನೆ ಪತ್ರಿಕೆ ಕಳಿಸಿರುವ ಶಂಕೆ ವ್ಯಕ್ತವಾಗಿದೆ. ಸಮೀತ್ ಕುಮಾರನ ಮೊಬೈಲ್‌ಗಾಗಿ ಪೊಲೀಸರು ತೀವ್ರ ಶೋಧ ನಡೆಸಿದ್ದಾರೆ.

**ಬಾಯಲ್ಲಿ ಡಿವೈಸ್!:**

ಪರೀಕ್ಷಾ ಅಕ್ರಮ ನಡೆಸಲು ಆರೋಪಿಗಳು ಅನೇಕ ಕಾರ್ಯತಂತ್ರ ಹೆಣೆಯುತ್ತಾರೆ. ಕೆಪಿಟಿಸಿಎಲ್ ಪರೀಕ್ಷೆ ವೇಳೆ ಕಿರಿದಾದ ಬ್ಲೂಟೂತ್ ಕಿವಿಯಲ್ಲಿ ಹಾಕಿಕೊಳ್ಳುತ್ತಾರೆ. ನಂತರ ಅದಕ್ಕೆ ಕನೆಕ್ಟ್ ಇರುವ ಸಾಧನವನ್ನು ಬಾಯಲ್ಲಿ ಇಟ್ಟುಕೊಂಡಿದ್ದರು. ಇನ್ನೂ ಕೆಲವರು ತೋಳಿನಲ್ಲಿ, ಬಟ್ಟೆಯಲ್ಲಿ ಸುತ್ತಿಕೊಂಡು ಒಳ ಉಡುಪಿನಲ್ಲಿ ಇಟ್ಟುಕೊಂಡಿದ್ದರು. ಕಿವಿಯಲ್ಲಿ ಹಾಕುವ ಬ್ಲೂಟೂತ್ ತೆಗೆಯಲು ಸಣ್ಣದಾದ ಕಡ್ಡಿಯೂ ಅಭ್ಯರ್ಥಿಗಳ ಬಳಿ ಪತ್ತೆಯಾಗಿವೆ.

**4.5 ಲಕ್ಷಕ್ಕೆ ಪ್ರಶ್ನೆ ಪತ್ರಿಕೆ ಮಾರಾಟ!:**

ಗೋಕಾಕ ಹಾಗೂ ಹುಕ್ಕೇರಿ ಬಿ.ಕೆ.ಶಿರಹಟ್ಟಿಯ ಗ್ಯಾಂಗ್‌ಗೆ 4.5 ಲಕ್ಷ ನೀಡಿದರೆ ಪ್ರಶ್ನೆ ಪತ್ರಿಕೆ ನೀಡುವ ಬಗ್ಗೆ ಸುಮಿತ್‌ಕುಮಾರ್ ಡೀಲ್ ಕುದುರಿಸಿದ್ದ. ನಂತರ ಈ ಗ್ಯಾಂಗ್ ಅಭ್ಯರ್ಥಿಗಳ ಜತೆಗೆ 6 ಲಕ್ಷ ಕೊಟ್ಟರೆ ಉತ್ತರ ನೀಡುವ ಡೀಲ್ ಕುದುರಿಸಿದ್ದಾರೆ. ಮುಂಗಡವಾಗಿ 3 ಲಕ್ಷ ಹಾಗೂ ಕೀ ಉತ್ತರಗಳು ಬಿಡುಗಡೆಯಾದ ಬಳಿಕ 3 ಲಕ್ಷ ನೀಡುವ ಬಗ್ಗೆ ಮಾತುಕತೆಯಾಗಿತ್ತು.

**ಬಂಧಿತ ಆರೋಪಿಗಳು:**

ಗೋಕಾಕ ತಾಲ್ಲೂಕಿನ ನಾಗನೂರು ಗ್ರಾಮದ ಸಿದ್ದಪ್ಪ ಕೆಂಪಣ್ಣ ಮದಿಹಳ್ಳಿ, ಮಾಲದಿನ್ನಿಯ ಸುನೀಲ ಅಜ್ಜಪ್ಪ ಭಂಗಿ, ಶಿರಹಟ್ಟಿ ಬಿ.ಕೆ. ಗ್ರಾಮದ ಬಸವಣ್ಣಿ ಶಿವಪ್ಪ ಡೊಣವಾಡ, ವೀರನಗಡ್ಡಿಯ ಸಂತೋಷ ಪ್ರಕಾಶ ಮಾಣಗಾವಿ, ಬೆಣಚಿನಮರಡಿಯ ಸಿದ್ದಪ್ಪ ಕೆಂಚಪ್ಪ ಕೊತ್ತಲ, ಮಾಲದಿನ್ನಿಯ ರೇಣುಕಾ ವಿಠಲ ಜವಾರಿ, ಗದಗ– ಬೆಟಗೇರಿಯ ಅಮರೇಶ ಚಂದ್ರಶೇಖರಯ್ಯ ರಾಜೂರ, ಮಾರುತಿ ಶಂಕರ ಸೋನವಣೆ (ಉಪಪ್ರಾಂಶುಪಾಲ), ಸಮಿತ್‌ಕುಮಾರ ಮಾರುತಿ ಸೋನವಣೆ (ಉಪಪ್ರಾಂಶುಪಾಲರ ಪುತ್ರ).

ರಾಜ್ಯದಲ್ಲಿ ಇತ್ತೀಚೆಗಷ್ಟೇ ಪಿಎಸ್ಐ ಪರೀಕ್ಷೆಯ ಅಕ್ರಮ ಹಗರಣ ಭಾರಿ ಸದ್ದು ಮಾಡಿತ್ತು. ಈ ಪ್ರಕರಣದ ತನಿಖೆ ಇನ್ನೂ ಮುಕ್ತಾಯವಾಗಿಲ್ಲ. ಅದರ ಬೆನ್ನಲ್ಲೇ ಮತ್ತೊಂದು ಅಕ್ರಮ ಬಯಲಾಗಿದ್ದು ರಾಜ್ಯ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

## ಸ್ವಾತಂತ್ರ್ಯ ಚಳುವಳಿಯ ಆಶಯ ಮತ್ತು ಭಾರತದ ಸಂವಿಧಾನ

# ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟವಾದಿ ವ್ಯವಸ್ಥೆ

**ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಅಂದಿನ ಸಂದರ್ಭದಲ್ಲಿ ನಡೆದಿದ್ದ ಸ್ವಾತಂತ್ರ ಚಳುವಳಿಯು ಪ್ರಧಾನ ಕಾರಣವಾಗಿತ್ತು. 2ನೇ ವಿಶ್ವ ಮಹಾಯುದ್ಧ ನಡೆದಿದ್ದ ಅಂದಿನ ಸಮಯದಲ್ಲಿ ಭಾರತೀಯರನ್ನು ತನ್ನೊಂದಿಗೆ ಕರೆದೊಯ್ಯುವ ಅವಿವಾರ್ಯತೆ ಬ್ರಿಟೀಷ್ ಆಡಳಿತಕ್ಕೆ ಇತ್ತು. ಭಾರತದಲ್ಲಿ ಒಂದೆಡೆ ಚಲೇ ಜಾವ್ ಚಳುವಳಿ, ಸುಭಾಷ್‌ಚಂದ್ರ ಬೋಸ್ ನೇತೃತ್ವದ INC (ಭಾರತೀಯ ರಾಷ್ಟ್ರೀಯ ಸೇನೆ) ಮೂಲಕ ಸಶಸ್ತ್ರ ಯುದ್ಧಕ್ಕೆ ಕರೆ, ಬಾಂಬೆ ಮತ್ತು ಇತರೆ ನಗರಗಳಲ್ಲಿ ರಾಯಲ್ ಇಂಡಿಯನ್ ನೇವಿ (RIN) ಮ್ಯೂಟಿನಿ ಮತ್ತು ರಾಷ್ಟ್ರದ ವಿವಿದೆಡೆ ರೈತರು, ಕಾರ್ಮಿಕರ ಅವಿರತ ಹೋರಾಟಗಳು, ಬ್ರಿಟೀಷ್ ಸರಕಾರವನ್ನು "ಸಂವಿಧಾನ ರಚನಾ ಸಭೆ" ಸ್ಥಾಪಿಸುವಂತೆ ಮಾಡಿತ್ತು.**

ಕೆ.ಎನ್.ಉಮೇಶ್

1949 ನವೆಂಬರ್ 26 ರಂದು ಅಂಗೀಕರಿಸಿ, ಅಧಿನಿಯಮಿಸಿ, ಅರ್ಪಿಸಿಕೊಂಡಿರುವ ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತದ ಜನಗಳಾದ ನಾವು ಭಾರತವನ್ನು ಒಂದು "ಸಾರ್ವಭೌಮ ಸಮಾಜವಾದೀ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ" ರಚಿಸಲು ಮತ್ತು ಅದರ ಸಮಸ್ತ ನಾಗರೀಕರಿಗೆ:

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;**
**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅದರಲ್ಲಿ ಭ್ರಾತೃತ್ವಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿರುವುದಾಗಿ ಘೋಷಿಸಿಕೊಂಡಿದ್ದೇವೆ. 1950 ಜನವರಿ 26 ರಿಂದ ಭಾರತವನ್ನು ಗಣರಾಜ್ಯವಾಗಿ, ಸಂವಿಧಾನಿಕ ಆಡಳಿತವನ್ನು ಜಾರಿಗೆ ತಂದಿದ್ದೇವೆ.

**ಸಂವಿಧಾನ ರಚನಾ ಸಭೆ:**

ಇಂತಹ ಸಂವಿಧಾನವನ್ನು ರಚಿಸಲು 1946 ಡಿಸೆಂಬರ್‌ನಿಂದ 1949 ನವೆಂಬರ್‌ವರೆಗೆ 11 ಅಧಿವೇಶನಗಳಲ್ಲಿ 165 ದಿನಗಳ ಕಾಲ ಸಂವಿಧಾನ ರಚನಾ ಸಭೆಯಲ್ಲಿ ವಿವರವಾಗಿ ಒಂದೊಂದು ವಿಧಿಯನ್ನು ಚರ್ಚಿಸಿ ಅಂಗೀಕರಿಸಲಾಗಿದೆ. 300 ಸದಸ್ಯರ ಸಂವಿಧಾನ ರಚನಾ ಸಭೆಯ ಶೇಕಡ 82 ರಷ್ಟು ಸದಸ್ಯರು ಅಂದಿನ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (INC) ಸದಸ್ಯರಾಗಿದ್ದರು. ಮುಸ್ಲಿಂ ಲೀಗ್ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿತ್ತು. ಸಮಾಜವಾದಿಗಳು ಪೂರ್ಣವಾಗಿ ಭಾಗಿಗಳಾಗಲು ಇಚ್ಛಿಸಿರಲಿಲ್ಲ. ಅಂದಿನ (INC) ಒಳಗೆ ಬಲಪಂಥೀಯರು, ಎಡಪಂಥೀಯರು, ಸುಧಾರಣಾವಾದಿಗಳು ಮುಂತಾದವರೆಲ್ಲಾ ಇದ್ದರು. ಕೆಲವರು ಸಮಾಜವಾದದಿಂದ ಪ್ರೇರೇಪಿತರಾಗಿದ್ದವರು, ಮತ್ತೆ ಕೆಲವರು ಜಮೀನ್ದಾರಿ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಕೆಲವರು ಕೋಮುವಾದಿ ಪಕ್ಷಕ್ಕೆ ಹತ್ತಿರವಿದ್ದರೆ, ಇತರರು ಜಾತ್ಯಾತೀತವಾದದ ದೃಢ ಪ್ರತಿಪಾದಕರಾಗಿದ್ದರು.


**ಸ್ವಾತಂತ್ರ್ಯ ಚಳುವಳಿ... ಸಂವಿಧಾನ ರಚನಾ ಸಭೆ..:**

ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಅಂದಿನ ಸಂದರ್ಭದಲ್ಲಿ ನಡೆದಿದ್ದ ಸ್ವಾತಂತ್ರ ಚಳುವಳಿಯು ಪ್ರಧಾನ ಕಾರಣವಾಗಿತ್ತು. 2ನೇ ವಿಶ್ವ ಮಹಾಯುದ್ಧ ನಡೆದಿದ್ದ ಅಂದಿನ ಸಮಯದಲ್ಲಿ ಭಾರತೀಯರನ್ನು ತನ್ನೊಂದಿಗೆ ಕರೆದೊಯ್ಯುವ ಅವಿವಾರ್ಯತೆ ಬ್ರಿಟೀಷ್ ಆಡಳಿತಕ್ಕೆ ಇತ್ತು. ಭಾರತದಲ್ಲಿ ಒಂದೆಡೆ ಚಲೇ ಜಾವ್ ಚಳುವಳಿ, ಸುಭಾಷ್‌ಚಂದ್ರ ಬೋಸ್ ನೇತೃತ್ವದ INC (ಭಾರತೀಯ ರಾಷ್ಟ್ರೀಯ ಸೇನೆ) ಮೂಲಕ ಸಶಸ್ತ್ರ ಯುದ್ದಕ್ಕೆ ಕರೆ, ಬಾಂಬೆ ಮತ್ತು ಇತರೆ ನಗರಗಳಲ್ಲಿ ರಾಯಲ್ ಇಂಡಿಯನ್ ನೇವಿ (RIN) ಮ್ಯೂಟಿನಿ ಮತ್ತು ರಾಷ್ಟ್ರದ ವಿವಿದೆಡೆ ರೈತರು, ಕಾರ್ಮಿಕರ ಅವಿರತ ಹೋರಾಟಗಳು, ಬ್ರಿಟೀಷ್ ಸರಕಾರವನ್ನು "ಸಂವಿಧಾನ ರಚನಾ ಸಭೆ" ಸ್ಥಾಪಿಸುವಂತೆ ಮಾಡಿತ್ತು.

**1857 ಪ್ರಥಮ ಸ್ವಾತಂತ್ರ್ಯ ಸಂಗ್ರಾಮ: ಕಾಯ್ದೆಗೆ ಚಾಲನೆ:**

ಬ್ರಿಟೀಷ್ ಆಡಳಿತವನ್ನು ಮುಂದುವರಿಸುವ ನಿಟ್ಟಿನಲ್ಲಿ 1857ರ ಸ್ವತಂತ್ರ್ಯ ಸಂಗ್ರಾಮದ ತರುವಾಯ 1858ರ ಭಾರತ ಸರ್ಕಾರದ ಕಾಯ್ದೆ ಮೂಲಕ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಿಂದ ಬ್ರಿಟೀಷ್ ಅರಸೊತ್ತಿಗೆಗೆ ಭಾರತದ ಮೇಲಿನ ರಾಜಕೀಯ ಆಡಳಿತದ ಅಧಿಕಾರವನ್ನು ಹಸ್ತಾಂತರಿಸಲಾಯಿತು. ಅಂದಿನಿಂದ 1935 ರ ಭಾರತ ಸರ್ಕಾರದ ಕಾಯ್ದೆವರೆಗೆ ಒಂದು ಹಂತದ ಹಾಗೂ ಅನಂತರ 1946 ರಿಂದ 1949ರವರೆಗೆ ಎರಡನೆ ಹಂತದ ಶಾಸನಾತ್ಮಕ ಪ್ರಕ್ರಿಯೆಗಳಲ್ಲಿ ಭಾರತ ಸಂವಿಧಾನದ ರಚನ ಪ್ರಕ್ರಿಯೆಗೆ ಆಧಾರಗಳನ್ನು ಗುರುತಿಸಬಹುದಾಗಿದೆ.

ಈ ಪ್ರಕ್ರಿಯೆಯಲ್ಲಿ ಕೌನ್ಸಿಲ್ ಆಫ್ ಇಂಡಿಯಾ ಕಾಯ್ದೆ 1861, 1892 ಮತ್ತು 1909 ರ ಮಿಂಟೊ ಮಾರ್ಲೆ ಸುಧಾರಣೆಗಳು, 1930ರ ಸೈಮನ್ ಆಯೋಗ ಆಧಾರಿತ "ಕಮ್ಯೂನಲ್ ಅವಾರ್ಡ್" ಕೋಮು ಆಧಾರಿತ ಪ್ರಾತಿನಿಧ್ಯ, ಅದರ ನಡುವೆ




ಸ್ವಾತಂತ್ರ್ಯ ಹೋರಾಟದ ತೀವ್ರತೆಗೆ ಪ್ರತಿಕ್ರಿಯೆಯಾಗಿ 1919 ಕಾಯ್ದೆ, ನಂತರದ 1935 ರ ಕಾಯ್ದೆಗಳನ್ನು ಬ್ರಿಟೀಷ್ ಸರ್ಕಾರವು ರೂಪಿಸಿತು. 1935'ರ ಕಾಯ್ದೆ ಅಡಿ ಮುಸ್ಲಿಂರು, ಸಿಖ್ಖರು, ಐರೋಪ್ಯರು, ಭಾರತೀಯ ಕ್ರೈಸ್ತರು, ಆಂಗ್ಲೋ ಇಂಡಿಯನ್‌ಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಲಾಯಿತು. ಅದಕ್ಕೂ ಮುನ್ನ 1905 ರಲ್ಲಿ ಬಂಗಾಳವನ್ನು ಧರ್ಮ ಆಧರಿಸಿ ವಿಭಜಿಸಿತ್ತು.

ಇದರ ನಡುವೆ 1921 ರಲ್ಲಿಯೇ INC ನ ಅಹಮದಾಬಾದ್ ಅಧಿವೇಶನದಲ್ಲಿಯೇ ಮೊದಲ ಬಾರಿಗೆ INC ಒಳಗೆ ಇದ್ದ ಕಮ್ಯೂನಿಸ್ಟರು "ಪೂರ್ಣ ಸ್ವಾತಂತ್ರ್ಯ"ದ ಬೇಡಿಕೆ ಮಂಡಿಸಿದ್ದರು. ಆದರೆ INC 1929ರ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಅಂಗೀಕರಿಸಿತು. 1931 ರ ಕರಾಚಿಯ ಅಧಿವೇಶನದಲ್ಲಿ ಮೂಲಭೂತ ಹಕ್ಕುಗಳನ್ನು ಪರಿಭಾಷಿಸಿತು. 1938ರಲ್ಲಿ ಸಂವಿಧಾನ ರಚನಾ ಸಭೆಗೆ ನೆಹರೂ ಮತ್ತು ಕಾಂಗ್ರೆಸ್ ಒತ್ತಾಯಿಸಿತು. ಅದಕ್ಕೆ ಪ್ರತಿಯಾಗಿ 1942 ರಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಮಿಷನ್ "ಅಧೀನ ಸ್ಥಾನಮಾನ" ನೀಡುವ ಶಿಫಾರಸ್ಸನ್ನು ನೀಡಿತು. ಅದನ್ನು ಸ್ವಾತಂತ್ರ್ಯ ಚಳುವಳಿಯು ತಿರಸ್ಕರಿಸಿದ ಕಾರಣ, 1946 ರಲ್ಲಿ ಕ್ಯಾಬಿನೆಟ್ ಮಿಷನ್ ಶಿಫಾರಸ್ಸಿನಂತೆ ಸಂವಿಧಾನ ರಚನಾ ಸಭೆಯು ಸ್ಥಾಪಿತವಾಯಿತು.

**ಏರುಮುಖ ಸ್ವಾತಂತ್ರ್ಯ ಚಳುವಳಿ – ಜನಸಮೂಹದ ಭಾಗವಹಿಸುವಿಕೆ :**

ಈ ಪ್ರಕ್ರಿಯೆಯ ಪ್ರತಿ ಹಂತದಲ್ಲೂ ಏರುಮುಖವಾಗಿದ್ದ ಸ್ವಾತಂತ್ರ್ಯ ಚಳುವಳಿಯ ಕೊಡುಗೆ, ತೀವ್ರಗೊಳ್ಳುತ್ತಿದ್ದ ರೈತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನತೆ, ಸಾಹಿತಿ, ಕಲಾವಿದರು, ಮಹಿಳೆಯರ ಚಳುವಳಿಯು ಪ್ರಧಾನವಾಗಿ ಕಾರಣವಾಗಿದೆ. 1920ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ, AITUC, AIKS, AISF, AIYF, NFIW, IPTA ಮುಂತಾದ ಸಂಘಟನೆಗಳ ಸ್ಥಾಪನೆಯು ಜನಸಮೂಹದ ಭಾಗವಹಿಸುವಿಕೆಯನ್ನು ವ್ಯಾಪಕಗೊಳಿಸಿತು. ಇದೇ ವೇಳೆ ಕಮ್ಯೂನಿಸ್ಟ್ ಪಕ್ಷದ ನಿಷೇಧ, ಜನಚಳುವಳಿಯ ಪ್ರತಿನಿಧಿಗಳಾಗಿದ್ದ ಕಮ್ಯೂನಿಸ್ಟರ ಮೇಲೆ 1922' ರ ಪೇಶಾವರ, 1924'ರ ಕಾನ್ಪುರ್ ಮತ್ತು 1929ರ ಮೀರತ್ ಪಿತೂರಿ ಮೊಕದ್ದಮೆಗಳು, 1931 ರಲ್ಲಿ ಭಗತ್‌ಸಿಂಗ್ ಮತ್ತು ಸಂಗಡಿಗರಿಗೆ ನೇಣು ಮುಂತಾದ ಕ್ರಮಗಳು ಜನಸಮೂಹದ ಭಾಗವಹಿಸುವಿಕೆಯನ್ನು ಮತ್ತಷ್ಟು ಆಳಗೊಳಿಸಿತು. ಪಂಜಾಬಿನ ಗದ್ದಾರ್ ಹೀರೋಗಳು, ಬಂಗಾಳದ ಕ್ರಾಂತಿಕಾರಿಗಳು, ಬಾಂಬೆ ಮತ್ತು ಮದ್ರಾಸಿನ ಸಮರಧೀರ ಕಾರ್ಮಿಕ ಚಳುವಳಿ, ಸಾಮ್ರಾಜ್ಯಶಾಹಿ ವಿರೋಧಿಯಾದಂತಹ ಕೇರಳ, ಆಂಧ್ರದ ಮತ್ತಿತರ ಭಾಗಗಳ ಕ್ರಾಂತಿಕಾರಿ ವಿಚಾರಧಾರೆಯ ಕಾಂಗ್ರೆಸ್ಸಿಗರು, ಭೂಮಾಲೀಕತ್ವ–ಪಾಳೇಗಾರಿ ವಿರೋಧಿಯಾದಂತಹ ತೇಬಾಗ, ಪುನ್ನಪ್ರ ವಯಲಾರ್, ಉತ್ತರ ಮಲಬಾರ್, ವೊರ್ಲಿಯ ಆದಿವಾಸಿಗಳು, ತ್ರಿಪುರಾದ ಟ್ರೈಬಲ್ ಹೋರಾಟ, ಐತಿಹಾಸಿಕ ತೆಲಂಗಾಣದ ಸಶಸ್ತ್ರ ರೈತ ಚಳುವಳಿಯು ಸಹಾ ಬ್ರಿಟೀಷ್ ಸರ್ಕಾರದ ಶಾಸನಾತ್ಮಕ ಪ್ರತಿಕ್ರಿಯೆಗಳ ಮೇಲೆ ಪರಿಣಾಮ ಬೀರಿದವು.

**ಕೋಮು ಆಧಾರಿತ ವಿಭಜಕ ಶಕ್ತಿಗಳು:**

ಇದೇ ವೇಳೆ ಒಂದೆಡೆ ಜಾತಿ, ಧರ್ಮ, ಭಾಷೆ, ಜನಾಂಗ ವಿಚಾರಗಳನ್ನು ಮೀರಿ ಸ್ವಾತಂತ್ರ್ಯ ಚಳುವಳಿಯಲ್ಲಿ ಜನ ಸಮೂಹದ ಭಾಗವಹಿಸುವಿಕೆ ತೀವ್ರಗೊಳ್ಳುತ್ತಿದ್ದಾಗ 1906 ರಲ್ಲಿ ಮುಸ್ಲೀಂ ಲೀಗ್ ಪ್ರಾರಂಭವಾಗಿ, 1930ರಲ್ಲಿ ಧರ್ಮದಾರಿತ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು 1925ರಲ್ಲಿ ಆರ್‌ಎಸ್‌ಎಸ್ ಸ್ಥಾಪನೆಯ ನಂತರ ಪ್ರತಿಪಾದಿಸಿತು. ಆರ್‌ಎಸ್‌ಎಸ್ ಪ್ರಾರಂಭವಾಗುವ ಮುನ್ನ ಸ್ವಾತಂತ್ರ್ಯ ಚಳುವಳಿಯಲ್ಲಿ ವ್ಯಾಪಕವಾಗಿ ಭಾಗವಹಿಸುತ್ತಿದ್ದ ಅದರ ಸದಸ್ಯರು, ಬೆಂಬಲಿಗರು ನಂತರದ ದಿನಗಳಲ್ಲಿ ವೈಯಕ್ತಿಕವಾಗಿ ಭಾಗವಹಿಸುವಿಕೆ ತೋರಿದರೆ ವಿನಃ ಅಧಿಕೃತವಾಗಿ ಸಾಮೂಹಿಕವಾಗಿ ಆರ್.ಎಸ್.ಎಸ್. ಕರೆಯ ಭಾಗವಾಗಿ ಭಾಗವಹಿಸಲಿಲ್ಲ. ಆರ್‌ಎಸ್‌ಎಸ್ ಎಂದು ಸಹಾ ಅಂತಹ ಭಾಗವಹಿಸಿಕೆಗೆ ಕರೆ ನೀಡಲಿಲ್ಲ ಮಾತ್ರವಲ್ಲ ಭಾಗವಹಿಸುವಿಕೆಯನ್ನು ಉತ್ತೇಜಿಸಲಿಲ್ಲ. ಅದರಂತೆಯೇ ಅರ್‌ಎಸ್‌ಎಸ್ ನ ವಿನಾಯಕ್ ದಾಮೋದರ್ ಸಾರ್ವಕರ್ ಬಂಧನದಿಂದ ಬಿಡುಗಡೆ ಕೋರಿ ತಪ್ಪೊಪ್ಪಿಗೆ ಬರೆದುಕೊಟ್ಟರು, ಬ್ರಿಟೀಷರಿಗೆ ಅವರು ಮತ್ತು ಅವರ ಬೆಂಬಲಿಗರು ಸಹಾ ನಿಷ್ಠೆಯಿಂದ ಇರುವುದಾಗಿ ಘೋಷಿಸಿದರು. ಮಾಜಿ ಪ್ರಧಾನಿ ಎ.ಬಿ.ವಾಜಪೇಯಿ ಯವರು ಸಹಾ ತಾವು ಸ್ವತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಲಿಲ್ಲ, ಕೇವಲ ವೀಕ್ಷಕನಾಗಿದ್ದೆನು ಎಂದು ಮುಚ್ಚಳಿಕೆ ಬರೆದುಕೊಟ್ಟು ಬಿಡುಗಡೆ ಹೊಂದಿದ್ದರು. ಬಹುಸಂಖ್ಯಾತ ಧಾರ್ಮಿಕ ಜನರ ಆಧಾರಿತ ಧರ್ಮಾಧಾರಿತ ರಾಷ್ಟ್ರ ರೂಪಿಸುವ ಗುರಿ ಹೊಂದಿದ್ದರು.

ಭಿನ್ನ ರಾಷ್ಟ್ರ ಪ್ರಭುತ್ವಕ್ಕೆ ಸೋಪಾನ:

1618 ಭಾಷೆಗಳು, 6400 ಜಾತಿಗಳು, 6 ಪ್ರಧಾನ ಮತಧರ್ಮಗಳು ಅವುಗಳಲ್ಲಿ 4 ಭಾರತದ ನೆಲದಲ್ಲೆ ಹುಟ್ಟಿದ ಧರ್ಮಗಳು, 6 ಜನಾಂಗೀಯ ಪಂಗಡ, 660 ಪಾಳೇಗಾರಿ ರಾಜ್ಯಾಡಳಿತದ ಪ್ರಾಂತ್ಯಗಳನ್ನು ಹೊಂದಿದಂತಹ ವೈವಿಧ್ಯತೆಯನ್ನು ಹೊಂದಿದ್ದ ಭಾರತದಂತಹ ವಿಶಾಲ ಭೂ ಪ್ರದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ಒಂದು ರಾಷ್ಟ್ರ ಪ್ರಭುತ್ವದ ರೂಪಣೆಗೆ, ಸೋಪಾನವಾಯಿತು. ಪಾಳೇಗಾರಿ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಹೊರಳುವ ನಿಟ್ಟಿನಲ್ಲಿ ಆಧುನಿಕ ರಾಷ್ಟ್ರ ಪ್ರಭುತ್ವವು ರೂಪಿತವಾದ ಪಾಶ್ಚಿಮಾತ್ಯ ದೇಶಗಳಿಗೆ ಭಿನ್ನವಾದ ರಾಷ್ಟ್ರ ಪ್ರಭುತ್ವದ ಪರಿಕಲ್ಪನೆಯನ್ನು ಸ್ವಾತಂತ್ರ್ಯ ಚಳುವಳಿಯು ರೂಪಿಸಿತು. 1648 ರ ವೆಸ್ಟ್‌ಫಾಲಿಯಾ ಒಪ್ಪಂದದಂತೆ ಪಾಶ್ಚಿಮಾತ್ಯ ದೇಶಗಳ ರಾಷ್ಟ್ರ ಪ್ರಭುತ್ವ ರೂಪಿತಗೊಂಡವು. ರಾಜಕೀಯದಿಂದ ಪ್ರಧಾನವಾಗಿ ಪ್ರಭುತ್ವದಿಂದ ಧರ್ಮವನ್ನು ಪ್ರತ್ಯೇಕಿಸುವ ಜಾತ್ಯಾತೀತತೆ – ಧರ್ಮ ನಿರಪೇಕ್ಷತೆ ಪರಿಕಲ್ಪನೆ ಹೊರಹೊಮ್ಮಿತ್ತು.

**ಮೂರು ವಿಚಾರಧಾರೆ – ಧಾರ್ಮಿಕ ಗಣರಾಜ್ಯ ತಿರಸ್ಕೃತ:**

ಈ ಎಲ್ಲಾ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತವು ಹೇಗಿರಬೇಕೆಂಬ ವಿಚಾರ ಕುರಿತು ಮೂರು ಪ್ರಧಾನ ವಿಚಾರಗಳು ಚಳುವಳಿಯ ಭಾಗವಾಗಿಯೇ ಅಂತರಗತವಾಗಿದ್ದವು. ಒಂದೆಡೆ INC ವಿಚಾರಧಾರಿತ ರಾಜಕೀಯ

ಪುಟ 6 ಕ್ಕೆ

## ಬಾಬಾಬುಡನ್ ಗಿರಿ: ಸರಕಾರದ ಅನಾಹುತಕಾರಿ ನಿರ್ಧಾರ.....

ಪುಟ 3 ರಿಂದ

ಸರಕಾರಗಳ ನಿರ್ಧಾರಗಳನ್ನು ಧಿಕ್ಕರಿಸುತ್ತಲೇ ಸಂಘಪರಿವಾರ ಬಂದಿತು. 1947 ರ ಆಗಸ್ಟ್ 15 ರಂದು ಇದ್ದಂತೆಯೇ ಎಲ್ಲವನ್ನು, ಅವುಗಳ ಯಥಾ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎನ್ನುವ 1991ರ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಸಂರಕ್ಷಣೆಯ ಕಾಯ್ದೆಯಂತೆ ದರ್ಗಾ ಪೀಠದಲ್ಲಿ ಆಚರಣೆಗಳಿಗೆ ಸಂಬಂಧಿಸಿ ಯಾವುದೇ ಸಣ್ಣ ಬದಲಾವಣೆಗೂ ಅವಕಾಶವಿಲ್ಲ. 1975 ರಲ್ಲಿ ಮತ್ತು 1989 ಫೆಬ್ರವರಿ 25ರಂದು ಕರ್ನಾಟಕದ ಮುಜರಾಯಿ ಇಲಾಖೆ ಬಾಬಾಬುಡನ್ ಗಿರಿಯಲ್ಲಿ ನಡೆಯುತ್ತಿದ್ದ ಧಾರ್ಮಿಕ ಆಚರಣೆ, ವಿಧಿ ವಿಧಾನಗಳ ಎಲ್ಲವನ್ನೂ ವಿವರವಾಗಿ ಪಟ್ಟಿ ಮಾಡಿದೆ. ಅಲ್ಲದೇ 2017 ರಲ್ಲಿ ನ್ಯಾಯಾಲಯದ ಆದೇಶದಂತೆ ಸರಕಾರ ನೇಮಿಸಿದ್ದ ಉನ್ನತ ತಜ್ಞರ ಸಮಿತಿಯು ಆಗಮ ಪದ್ಧತಿಯಂತೆ ಅರ್ಚಕರ ನೇಮಕ ಮಾಡುವಂತಿಲ್ಲ ಎಂದೂ, 1947 ರ ಕಾಯ್ದೆಯ ಉಲ್ಲಂಘನೆ ಶಿಕ್ಷಾರ್ಹ ಅಪರಾಧವೆಂದು ಹೇಳಿದೆ. ಎಲ್ಲಾ ದಾಖಲೆಗಳಲ್ಲಿಯೂ ಇಲ್ಲಿಯ ಪೂಜಾ ಪದ್ಧತಿ ಮುಜಾವರ್ ಮೂಲಕವಾಗಿ ನಡೆಯುವುದನ್ನು ಹೇಳಿದೆ. ಮತ್ತು ಹಿಂದೂ ಒಳಗೊಂಡು ಯಾವುದೇ ಧಾರ್ಮಿಕ ಮಹನೀಯರು ಗುಹೆಯ ಒಳಗಡೆಯಲ್ಲಿ ಪ್ರವೇಶ ಮಾಡಿ ಅರ್ಚನೆ ಪೂಜೆ ಮಾಡುವುದಕ್ಕೆ ಅವಕಾಶ ಇರುವುದನ್ನೂ ನಮೂದಿಸಿದೆ. ಈ ಗುಹೆ ಒಳಗಡೆ ದರ್ಗಾ–ಪೀಠದ ದರ್ಶನಕ್ಕೆ ಮತ್ತು ಪ್ರಾರ್ಥನೆಗೆ ಪ್ರವೇಶಿಸುವುದಕ್ಕೆ ಯಾವುದೇ ಧರ್ಮದ, ಜಾತಿಯ, ಲಿಂಗ ಭೇದ ಭಾವ ಇಲ್ಲದಿರುವುದನ್ನು ನ್ಯಾಯಾಲಯಗಳು ಮತ್ತು ಕಾಲದಿಂದ ಕಾಲಕ್ಕೆ ರಚಿಸಲಾದ ಎಲ್ಲ ಸಮಿತಿಗಳು ದಾಖಲಿಸಿವೆ. ಅಂದರೆ ಪಾರಂಪರಿಕವಾಗಿ ಮತ್ತು ಕಾನೂನು ಬದ್ಧವಾಗಿ ಇಲ್ಲಿಯ ವಿಶಿಷ್ಟ ಪೂಜಾ ಪದ್ಧತಿಯಲ್ಲಿ ಆಗಲಿ, ಆಡಳಿತದ ನೇತೃತ್ವ ಮತ್ತು ವಿಧಿ ವಿಧಾನಗಳಲ್ಲಾಗಲಿ ಯಾವುದೇ ಹೊಸ ಬದಲಾವಣೆಗಳನ್ನು ಮಾಡಲು ಅವಕಾಶ ಇಲ್ಲದಿರುವುದು ಸುಸ್ಪಷ್ಟ.

ಆದರೆ ಸರಕಾರದ ಈಗಿನ ಆದೇಶ ಇವೆಲ್ಲವನ್ನೂ ಧಿಕ್ಕರಿಸುತ್ತದೆ. ಧಾರ್ಮಿಕ ಸೌಹಾರ್ದತೆ, ಉದಾತ್ತತೆಯನ್ನು ಬೆಸೆದ ನಾಡಿನ ವಿಶಿಷ್ಟ ಸಂಸ್ಕೃತಿಯನ್ನು ತಿರಸ್ಕರಿಸುತ್ತದೆ. ದತ್ತ ಮತ್ತು ಬಾಬಾ ಬೇರೆಯಲ್ಲ ಎನ್ನುವ ಜನಪದರ ನಂಬಿಕೆಯನ್ನೂ ನಿರ್ಲಕ್ಷಿಸುತ್ತದೆ. ಸರಕಾರದ ನಿರ್ಧಾರ ಸೌಹಾರ್ದತೆ, ಸಮನ್ವಯದ ಸಂಸ್ಕೃತಿಗೆ ಬದಲಾಗಿ ತಾರತಮ್ಯದ ವೈಧಿಕ ಸಂಸ್ಕೃತಿಯನ್ನು ಹೇರುವ, ಹಂತ ಹಂತವಾಗಿ ಅಲ್ಲಿಯ ಪರಂಪರೆಯನ್ನು ನಾಶಗೊಳಿಸಿ ಅತಿಕ್ರಮಿಸುವ ಬಹು ದೊಡ್ಡ ಹುನ್ನಾರ. ಸರಕಾರ ತನ್ನ ಅಧಿಕಾರವನ್ನು ದುರುಪಯೋಗ ಮಾಡಿ ನಾಡಿನ ಸೌಹಾರ್ದತೆಯ ಪರಂಪರೆಯನ್ನು ಬುಡಮೇಲು ಮಾಡುವ ಕೃತ್ಯಕ್ಕೆ ಮುಂದಾಗಿರುವುದು ಅತ್ಯಂತ ಖಂಡನೀಯ.

ಇಂತಹ ತೀರ್ಮಾನಕ್ಕೆ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪು ಭೂಮಿಕೆ ಒದಗಿಸಿ ಕೊಟ್ಟಿದೆ ಎನ್ನುವುದು ಅತ್ಯಂತ ವಿಷಾದನೀಯ. ಅಯೋಧ್ಯೆಯ ವಿವಾದ ಪ್ರಕಾರದ ತೀರ್ಪನ್ನೇ ಆಧಾರವಾಗಿರಿಸಿಕೊಂಡಿರುವ ಹೈಕೋರ್ಟ್ ಹಿಂದಿನ ನ್ಯಾಯಾಲಯಗಳ ತೀರ್ಪು ಮತ್ತು ಸ್ವಾತಂತ್ರ್ಯದ ಹೊಸ್ತಿನಲ್ಲಿ ಇದ್ದ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬೇಕು ಎನ್ನುವ 1991ರ ಕಾಯ್ದೆಯನ್ನು ತಟಸ್ಥ ಗೊಳಿಸಿದೆ. ಈ ತೀರ್ಪು ರಾಜ್ಯದ ವಿವಿಧ ಕಡೆಗಳಲ್ಲಿ ವ್ಯಾಪಕವಾಗಿ ಪರಿಣಾಮ ಬೀರುವ ಸಾಧ್ಯತೆಗಳು ಇವೆ.

ಜನತೆಯ ಪ್ರತಿನಿಧಿಯಾಗಿರುವ ಸರ್ಕಾರ ಸಂವಿಧಾನಬದ್ಧವಾಗಿ ಯೋಚಿಸಬೇಕು ಮತ್ತು ನಾಡಿನ ಜನತೆಯ ಒಗ್ಗಟ್ಟು, ಸೌಹಾರ್ದ ಪರಂಪರೆಯ ಪರವಾಗಿರಬೇಕು ಎನ್ನುವ ಪ್ರಾಥಮಿಕ ಅಂಶವನ್ನು ಸರ್ಕಾರ ನಿರ್ಲಕ್ಷಿಸಿದೆ. ಬೊಮ್ಮಾಯಿ ಅವರ ಸರ್ಕಾರ ಸಂವಿಧಾನಕ್ಕೆ ಬದ್ಧವಾಗಿರದೇ, ಭಾರತದ ಪ್ರಜಾತ್ತಾತ್ಮಕ ಸಂವಿಧಾನವನ್ನೇ ಒಪ್ಪದ ಸಂವಿಧಾನೇತರ ಶಕ್ತಿಯ ನಿಯಂತ್ರಣದಲ್ಲಿದೆ. ನಾಡಿನ ಹಿತದ ದೃಷ್ಟಿಯಲ್ಲಿ ಎಲ್ಲರೂ ಈ ಸರಕಾರದ ನಿರ್ಧಾರವನ್ನು ಒಕ್ಕೊಲಿನಿಂದ ವಿರೋಧಿಸಬೇಕು. ಸರಕಾರ ಮತ್ತಷ್ಟು ಗಂಭೀರವಾಗಿ ಎಲ್ಲ ಆಯಾಮಗಳಲ್ಲಿ ಚಿಂತಿಸಿ ತನ್ನ ನಿರ್ಧಾರವನ್ನು ಕೈ ಬಿಡಬೇಕು. ಶಾಂತಿ, ಕೋಮು ಸೌಹಾರ್ದತೆ, ಜನತೆಯಲ್ಲಿ ಒಗ್ಗಟ್ಟನ್ನು ಕಾಪಾಡುವ ಮತ್ತು ಕಾನೂನು, ಸಂವಿಧಾನಬದ್ಧ ಕರ್ತವ್ಯವನ್ನು ಸರಕಾರ ಪಾಲಿಸಬೇಕು. ನ್ಯಾಯಾಲಯಕ್ಕೂ ಮನವರಿಕೆ ಮಾಡಿಕೊಡಬೇಕು.

## ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟವಾದಿ ವ್ಯವಸ್ಥೆ

ಪುಟ 5 ರಿಂದ

ಸ್ವಾತಂತ್ರ್ಯದ ಸರ್ವಧರ್ಮ ಸಮಭಾವದ ಜಾತ್ಯಾತೀತತೆ, ಅದಕ್ಕೆ ಬೆಂಬಲವಾಗಿಯೇ ಭಿನ್ನವಾಗಿ ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸುವ ಪ್ರಭುತ್ವಕ್ಕೆ ಧರ್ಮಾಚರಣೆ ಇರಬಾರದೆಂಬ ಧರ್ಮ ನಿರಪೇಕ್ಷತೆಯ ಜಾತ್ಯಾತೀತವಾದ ಸಹಿತ ರಾಜಕೀಯ ಸ್ವಾತಂತ್ರ್ಯದೊಂದಿಗೆ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಕಮ್ಯುನಿಸ್ಟರ ವಿಚಾರಧಾರೆ ಮತ್ತೊಂದೆಡೆಯಿತು. ಅದೇ ವೇಳೆ ಧರ್ಮಾಧಾರಿತ ರಾಷ್ಟ್ರದ ಪರಿಕಲ್ಪನೆಯ ಬಹುಸಂಖ್ಯಾತ ಧರ್ಮಾನುಯಾಯಿಗಳ ಬಹುಸಂಖ್ಯಾತ ರಾಜಕೀಯ ಆಡಳಿತದ ಧಾರ್ಮಿಕ ರಾಷ್ಟ್ರದ ಪ್ರತಿಪಾದನೆ ಮುಸ್ಲೀಂ ಲೀಗ್ ಮತ್ತು ಆರ್‌ಎಸ್‌ಎಸ್ ನವರದಾಗಿತ್ತು.

ಸ್ವಾತಂತ್ರ್ಯದ ವೇಳೆ ಇಸ್ಲಾಂ ಧರ್ಮಾಧಾರಿತ ಪಾಕಿಸ್ತಾನದ ರಚನೆಗೆ ಬ್ರಿಟೀಷರು ಅನುವುಗೊಳಿಸಿದರು. ಪರಿಣಾಮವಾಗಿ ಇಸ್ಲಾಮಿಕ್ ಗಣರಾಜ್ಯವಾಗಿ ಪಾಕಿಸ್ತಾನ ರೂಪಿತವಾಯಿತು. ಆದರೆ ಎಲ್ಲಾ ಜಾತಿ, ಧರ್ಮ, ಭಾಷೆ ಹೊಂದಿದ್ದ ಭಾರತವು ಸ್ವಾತಂತ್ರ್ಯ ಚಳುವಳಿಯ ಆಶಯದಂತೆ "ಸ್ವಾತಂತ್ರ ಸಾರ್ವಭೌಮ ಗಣರಾಜ್ಯವಾಗುವಾಗಲೇ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ" ರೂಪಿತಗೊಂಡಿತು. ಇದರ ಎಳೆಗಳನ್ನು ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಕಾಣಬಹುದಾಗಿದೆ.

**ಸಂವಿಧಾನ ರಚನಾ ಸಭೆಯ ಚರ್ಚೆ:**

ಬ್ರಿಟೀಷರ ಕರಾಳ ಹಸ್ತದ ತೂಗುವಿಕೆಯಡಿ ನಿಜವಾದಂತಹ ಸ್ವತಂತ್ರ ಸಾರ್ವಭೌಮ ಸಂವಿಧಾನವನ್ನು ರೂಪಿಸಲು ಸಾಧ್ಯವೇ ಎಂಬ ಕಮ್ಯುನಿಸ್ಟರಾಗಿದ್ದ ಸೋಮನಾಥ ಲಹರಿಯವರ ಪ್ರಶ್ನೆಗೆ "ಸಂವಿಧಾನದ ಉದ್ದೇಶಗಳ ನಿರ್ಣಯ" (Objective Resolution) ಮಂಡಿಸಿದ ಪಂಡಿತ್ ಜವಾಹರ್‌ಲಾಲ್ ನೆಹರು ರವರು ಉತ್ತರಿಸುತ್ತಾ "ಜನತೆಯ ಚಿತ್ತವನ್ನು ಪ್ರತಿನಿಧಿಸುವ ಸಂವಿಧಾನ ರಚನಾ ಸಭೆಯು, ಜನಸಮೂಹದ ಹೃದಯದಲ್ಲಿರುವ ಸಂಕಲ್ಪವನ್ನು ಪೂರೈಸಬೇಕಿದೆ" ಎಂದಿದ್ದರು.

ಸಂವಿಧಾನದ ಉದ್ದೇಶದ ನಿರ್ಣಯವು ಭಾರತವು ಸ್ವತಂತ್ರ ಸಾರ್ವಭೌಮ ಗಣರಾಜ್ಯವಾಗಿರಲಿದೆ, ತನ್ನ ಪ್ರಜೆಗಳಿಗೆ ಸಾಮಾನತೆ ಮತ್ತು ಸ್ವಾತಂತ್ರ್ಯವನ್ನು ನೀಡುತ್ತಾ ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು, ತುಳಿತಕ್ಕೊಳಗಾದ ಜನತೆಯ, ಆದಿವಾಸಿಗಳ ಸಂರಕ್ಷಣೆಗೆ ಅಗತ್ಯ ಖಾತ್ರಿ ನೀಡಲಿದೆ ಎಂದಿದ್ದರು.

ವಿಭಜನೆ ವೇಳೆ ಕಂಡ ಕೋಮು ಗಲಭೆ, ಹಿಂಸೆ ಹಾಗೂ ಇತಿಹಾಸದ ಗಾಯಗಳಿಗೆ ಮುಲಾಮ ಹಚ್ಚುವಾಗಲೇ, ವರ್ತಮಾನದ ಗಾಯಗಳಿಗೂ ಮುಲಾಮು ಹಚ್ಚುವ, ಭವಿಷ್ಯದಲ್ಲಿ ಉಂಟಾಗಬಹುದಾದ ಗಾಯಗಳು ಉಂಟಾಗದಂತೆ ತಡೆಯುವ ಕ್ರಮಗಳಾಗಬೇಕೆಂಬುದು ಸಂವಿಧಾನ ರಚನಾ ಸಭೆಯ ಉದ್ದೇಶವಾಗಿತ್ತು.

**ಸ್ವಾತಂತ್ರ್ಯ ಚಳುವಳಿಯ ಆಶಯ–ಪೂರ್ಣವಾಗಿ ಪ್ರತಿಫಲನಗೊಳ್ಳಲಿಲ್ಲ:**

ಆದರೆ INC ಪ್ರೇರಿತ ಸರ್ವಧರ್ಮ ಸಮಭಾವದ ಜಾತ್ಯಾತೀತತೆ, ಆರ್ಥಿಕ ಸ್ವಾತಂತ್ರ್ಯಕ್ಕೆ ಅನುವಾಗಿಸದ ಕೇವಲ ರಾಜಕೀಯ ಸ್ವಾತಂತ್ರ್ಯ ಹಾಗೂ ಕೇಂದ್ರೀಕೃತ ಪ್ರಭುತ್ವದ ಸಂವಿಧಾನ ರೂಪಿತವಾಯಿತು. ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸಲಾರದ ಮಿತಿಯು ನಿರ್ಮಿತವಾಯಿತು. ವಿಧಿ 356ರ ಸೇರ್ಪಡೆಯಿಂದಾಗಿ ರಾಜ್ಯಗಳ ಅಧಿಕಾರ ಕುಂಠಿತವಾಯಿತು. ನೆಹರು ಮತ್ತು ಅಂಬೇಡ್ಕರ್ ಪ್ರತಿಪಾದನೆಯಂತೆ ಹೆಚ್ಚು ಅಧಿಕಾರ ಕೇಂದ್ರ ಸರ್ಕಾರದಲ್ಲಿ ಅಡಕವಾಯಿತು. ರಾಜ್ಯಗಳ ಅಧಿಕಾರ ಸೀಮಿತವಾಯಿತು. ಇದರ ವಿರುದ್ಧ ಸಂವಿಧಾನ ರಚನಾ ಸಭೆಯಲ್ಲಿ ಮದ್ರಾಸಿನ ಸನಾತನಮ್ ಕೇಂದ್ರದ ವಿರುದ್ಧ ಧಂಗೆ ಎದ್ದೇಳಲಿದೆ ಎಂದರೆ, ಓಡಿಸ್ಸಾದ ಪ್ರತಿನಿಧಿ ಮುಂದೊಂದು ದಿನ "ಕೇಂದ್ರವು ಕಳಚಿಬೀಳಲಿದೆ" ಎಂದಿದ್ದರು. ಮೈಸೂರಿನ ರಾಮಸ್ವಾಮಿ ಮೊದಲಿಯಾರ್ ಬಲಿಷ್ಠ ಕೇಂದ್ರದ ಪ್ರತಿಪಾದಕರು ಮಾತ್ರ ದೇಶಪ್ರೇಮಿಗಳಲ್ಲ ಎಂದಿದ್ದರು. ಆದಾಗ್ಯೂ ಕೇಂದ್ರ ಸರ್ಕಾರದ ವ್ಯಾಪ್ತಿಯ ಕೇಂದ್ರ ಪಟ್ಟಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಎರಡಕ್ಕೂ ಸೇರಿದ ಸಮವರ್ತಿ ಪಟ್ಟಿಯಲ್ಲಿ ಹೆಚ್ಚು ವಿಷಯಗಳು ಅಡಕವಾಗಿ, ರಾಜ್ಯಗಳ ಪಟ್ಟಿಯಲ್ಲಿನ ವಿಷಯಗಳು ಸೀಮಿತಗೊಂಡವು. ಇದರ ನಡುವೆಯೆ ಜಮ್ಮು ಮತ್ತು ಕಾಶ್ಮೀರಕ್ಕೆ ಇದ್ದ ವಿಧಿ 35ಎ ಮತ್ತು ವಿಧಿ 370 ರಾಜ್ಯಗಳಿಗೆ ಸಿಗಬಹುದಾಗಿದ್ದ ಗರಿಷ್ಠ ಅಧಿಕಾರದ ಪ್ರತೀಕವಾಗಿ ನೈಜ ಒಕ್ಕೂಟ ತತ್ವವನ್ನು ಪ್ರತಿನಿಧಿಸಿದ್ದವು. ಆದರೆ ಅಂತಹ ಅಧಿಕಾರ ಇತರೆ ರಾಜ್ಯಗಳಿಗೆ ಇಲ್ಲದಾಗಿ, ನೈಜ ಒಕ್ಕೂಟ ವ್ಯವಸ್ಥೆಯ ಆಶಯಕ್ಕೆ ಧಕ್ಕೆ ಉಂಟಾಯಿತು.

**ಹಿಂದಿ ಭಾಷೆ ಮಾತ್ರವಲ್ಲ..**

ಅದೇ ರೀತಿ ಹಿಂದಿ ಭಾಷೆಯನ್ನು ಅಧಿಕೃತ ಭಾಷೆ ಎಂದು ಅಂಗೀಕರಿಸುವ ಮುನ್ನ ನಡೆದ ಚರ್ಚೆ ವೇಳೆ ಸಂಯುಕ್ತ ಪ್ರಾಂತ್ಯದ ಪ್ರತಿನಿಧಿಯಾದ ಆರ್.ವಿ.ದುಲೇಖರ್ ಉಪಯೋಗಿಸಿದ ಪದಗಳು, ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಘೋಷಿಸಬೇಕೆಂಬ ಒತ್ತಾಯ ಹಿಂದಿಯೇತ್ತರ ಭಾಷಾ ಪ್ರತಿನಿಧಿಗಳ ನಡುವೆ ಅಸಮಾಧಾನವನ್ನು ಸೃಷ್ಟಿಸಿತ್ತು. ಮದ್ರಾಸಿನ ಟಿ.ಎ.ರಾಮಲಿಂಗ ಚೆಟ್ಟಿಯಾರ್, ಶ್ರೀಮತಿ ಜಿ.ದುರ್ಗಾಬಾಯಿ, ಬಾಂಬೆಯ ಶಂಕರ್ ರಾವ್ ಡಿಯೋ, ತೀವ್ರ ವಿರೋಧ ವ್ಯಕ್ತಪಡಿಸಿದರು. ಇತರೆ ಭಾಷೆಗಳು ಸಹಾ ರಾಷ್ಟ್ರೀಯ ಭಾಷೆಗಳಾಗಿ ಗುರುತಿಸಲ್ಪಡುವಂತಾದವು.

**ಸಾಮಾಜಿಕ ನ್ಯಾಯ:**

ಆದಿವಾಸಿಗಳು, ಜಾತಿ ತಾರತಮ್ಯ – ಅಸ್ಪೃಶ್ಯತಾಚಾರಣೆಗಳು ಮತ್ತು ಸಾಮಾಜಿಕ ಅನ್ಯಾಯದ ಅಂಶಗಳನ್ನು ಸರಿಪಡಿಸಿ ಪ್ರಜಾಪ್ರಭುತ್ವದ ಆಶಯಗಳನ್ನು ಖಾತ್ರಿಗೊಳಿಸುವ ನಿಟ್ಟಿನಲ್ಲಿ "ಸಾಮಾಜಿಕ ನ್ಯಾಯ"ದ ಪರಿಕಲ್ಪನೆಯನ್ನು ಸಂವಿಧಾನದ ಮೂಲಭೂತ ಆಧಾರವಾಗಿ ಅಂಗೀಕರಿಸಲಾಯಿತು.

**ಸರ್ವಸಮ್ಮತಿಯ ಹಕ್ಕುಗಳು:**

ಸಂವಿಧಾನ ರಚನಾ ಸಭೆಯಲ್ಲಿ ಸರ್ವ ಸಮ್ಮತಿಯ ಆಧಾರದಲ್ಲಿ ಅಂಗೀಕೃತವಾದ ಅಂಶಗಳೆಂದರೆ ಮೂಲಭೂತ ಹಕ್ಕುಗಳ ಅಂಶ ಧಾರ್ಮಿಕ ಸ್ವಾತಂತ್ರ್ಯ (ವಿಧಿ 25–28), ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು (ವಿಧಿ 29–30), ಸಮಾನತೆಯ ಹಕ್ಕುಗಳು (ವಿಧಿ 14, 16, 17) ಮಾತ್ರವಲ್ಲದೆ ಎಲ್ಲರಿಗೂ ಮತದಾನದ ಹಕ್ಕು ನೀಡುವ ಅಂಶಗಳು. ಅತ್ಯಂತ ಹಳೆಯ ಪ್ರಜಾಪ್ರಭುತ್ವಗಳಾದ ಅಮೇರಿಕಾ ಮತ್ತು ಇಂಗ್ಲೆಂಡ್‌ಗಳಲ್ಲೂ ಸಹಾ ಮೊದಲಿಗೆ ಆಸ್ತಿವಂತರಿಗೆ, ನಂತರ ವಿದ್ಯಾವಂತರಿಗೆ, ಹೋರಾಟಗಳ ಪರಿಣಾಮವಾಗಿ ದುಡಿಯುವ ವರ್ಗ ಮತ್ತು ರೈತರಿಗೆ ಆನಂತರ ತೀವ್ರ ಹೋರಾಟಗಳ ಪರಿಣಾಮವಾಗಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಗಿತ್ತು.

**ಮಿತಿ ನಿರ್ಮಿಸಿದ ಆಳುವ ವರ್ಗಗಳು:**

ನಿಜವಾದ ಅರ್ಥದಲ್ಲಿ ರಾಜಕೀಯ ಪ್ರಜಾಪ್ರಭುತ್ವವನ್ನು ಆರ್ಥಿಕ ಪ್ರಜಾಪ್ರಭುತ್ವವನ್ನಾಗಿಸುವ ಅಂಶಗಳಿಗೆ ಪುರಸ್ಕಾರ ಸಿಗಲಿಲ್ಲ. ಸಂವಿಧಾನ ರಚನಾ ಸಭೆಯಲ್ಲಿ ಹಿಡಿತ ಹೊಂದಿದ್ದ ಬಂಡವಾಳಶಾಹಿ ಭೂಮಾಲೀಕ ಶಕ್ತಿಗಳ ಪ್ರತಿನಿಧಿಗಳು ಮೇಲುಗೈ ಸಾಧಿಸಿದ ಕಾರಣ ಹಾಗೂ ಸ್ವಾತಂತ್ರ ಚಳುವಳಿಯ ನಾಯಕತ್ವವನ್ನು ಅದೇ ವರ್ಗ ಹೊಂದಿದ್ದ ಪರಿಣಾಮವಾಗಿ ಇಂತಹ ಮಿತಿಗೆ ಭಾರತ ಸಂವಿಧಾನವು ಒಳಪಟ್ಟಿತ್ತು.

**ಸ್ವಾತಂತ್ರ್ಯ 75ರ ಅಣಕ:**

ಇಂತಹ ಮಿತಿಯ ನಡುವೆಯು 75 ವರ್ಷಗಳ ಕಾಲ ಸ್ವಾತಂತ್ರ್ಯವನ್ನು, ಜನತೆಯ ಹಕ್ಕುಗಳನ್ನು ಸೀಮಿತವಾಗಿಯಾದರು ನೀಡಿದ್ದ ಸಂವಿಧಾನದ ಮೂಲಭೂತ ಆಧಾರವಾದ ಜಾತ್ಯಾತೀತವಾದ, ಸಾಮಾಜಿಕ ನ್ಯಾಯ, ಸಾರ್ವಭೌಮತೆ, ಒಕ್ಕೂಟವಾದದ ತತ್ವಗಳೆಲ್ಲವನ್ನು ಶಿಥಿಲಗೊಳಿಸುವ ಯತ್ನವನ್ನು ಫ್ಯಾಸಿವಾದಿ ಆರ್‌ಎಸ್‌ಎಸ್ ಹಿಡಿತದಲ್ಲಿರುವ ಕೋಮುವಾದಿ ಬಿಜೆಪಿ ಸರ್ಕಾರವು ನಡೆಸಿದೆ. ತನ್ನ ಕಾರ್ಪೊರೇಟ್–ಕೋಮುವಾದಿ ದೃಷ್ಟಕೂಟದ ಆಡಳಿತವು ಬಹುಸಂಖ್ಯಾತಾಧಾರಿತ ಆಡಳಿತದ ಸರ್ವಾಧಿಕಾರಿ ಪ್ರವೃತ್ತಿಗಳನ್ನು ತೋರುತ್ತಿದೆ. ನವ ಉದಾರವಾದಿ ಆರ್ಥಿಕ ನೀತಿಗಳ ಪ್ರಣೀತ ಸಾರ್ವಜನಿಕ ಉದ್ದಿಮೆಗಳ ನಾಶ, ರೈತರು, ಕಾರ್ಮಿಕರ ಹಕ್ಕುಗಳನ್ನು ಕಸಿಯುವ ಕೃಷಿ ಕಾಯ್ದೆಗಳು, ಕಾರ್ಮಿಕ ಸಂಹಿತೆಗಳು, ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಕಿರಿಯ ಪಾಲುದಾರಿಕೆ ರಾಷ್ಟ್ರದ ಸಾರ್ವಭೌಮತೆ ಸ್ವಾವಲಂಬನೆಗೆ ಕೊಡಲಿ ಪೆಟ್ಟು ನೀಡುತ್ತಿದೆ.

ಮಾತ್ರವಲ್ಲ ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ನೀಡುತ್ತಿದೆ. ಜಿಎಸ್‌ಟಿ ಮುಂತಾದ ಹೇರಿಕೆಯ ಕ್ರಮಗಳು ರಾಜ್ಯಗಳ ಅಧಿಕಾರ ಮೊಟಕುಗೊಳಿಸಿ, ಸೀಮಿತ ಒಕ್ಕೂಟ ವ್ಯವಸ್ಥೆಗೂ ಧಕ್ಕೆ ಉಂಟುಮಾಡಿದೆ. ವಿಧಿ 370, 35ಎ ರದ್ಧತಿ, ಸಂವಿಧಾನಿಕ ಸಂಸ್ಥೆಗಳ ದುರುಪಯೋಗ ಶಿಥಿಲಗೊಳಿಸುವ ಯತ್ನಗಳು ಸ್ವಾತಂತ್ರ್ಯ 75'ರ ಅಮೃತ ಮಹೋತ್ಸವ ಘೋಷಣೆಯ ಪೊಳ್ಳುತನ ತೋರುತ್ತಾ ಅಣಕವಾಗಿಸುತ್ತಿವೆ. ಸ್ವಾತಂತ್ರ್ಯ ಚಳುವಳಿಯಲ್ಲಿ ತಿರಸ್ಕಾರಕ್ಕೆ ಒಳಗಾದ ಆರ್‌ಎಸ್‌ಎಸ್ ಪ್ರಣೀತ "ಹಿಂದುತ್ವ ರಾಷ್ಟ್ರವನ್ನು" ಜನತೆಯ ಮೇಲೆ ಹೇರುವ, ಸಂವಿಧಾನದ ಮೂಲಭೂತ ಆಶಯಗಳನ್ನು ಇಲ್ಲದಾಗಿಸುವ ಯತ್ನವನ್ನು ಮೋದಿ ಸರ್ಕಾರ ನಡೆಸಿದೆ. ವಾಖ್ ಸ್ವಾತಂತ್ರ್ಯ, ಸಮಾನತೆಯ ಹಕ್ಕು, ಧಾರ್ಮಿಕ ಹಕ್ಕುಗಳ ಮೊಟಕುಗೊಳಿಸಿ ಮೂಲಭೂತ ಹಕ್ಕುಗಳನ್ನು ಇಲ್ಲದಾಗಿಸಿ ಸಂವಿಧಾನದ ಸ್ವತಂತ್ರ್ಯ, ಸಮಾನತೆ ಮತ್ತು ಸಹೋದರತೆಯನ್ನು ಇಲ್ಲದಾಗಿಸಲು ಹೊರಟಿದೆ.

ಇಂತಹ ಪರಿಸ್ಥಿತಿಯಲ್ಲಿ ಕೋಮುವಾದಿ ಕಾರ್ಪೊರೇಟ್ ದುಷ್ಟಕೂಟವನ್ನು ತಿರಸ್ಕರಿಸಿ ಮೂಲೆಗುಂಪಾಗಿಸಿ, ಭಾರತದ ಧರ್ಮ ನಿರಪೇಕ್ಷತೆಯನ್ನು ಸಂರಕ್ಷಿಸಬೇಕಿದೆ. ಅದಕ್ಕಾಗಿ ಭಾರತವನ್ನು ನವ ಉದಾರವಾದಿ ನೀತಿಗಳು ಮತ್ತು ಕೋಮುವಾದಿಗಳಿಂದ ರಕ್ಷಿಸಬೇಕಿದೆ. ಭಾರತವನ್ನು ಬದಲಿಸಲು ಭಾರತವನ್ನು ರಕ್ಷಿಸುವ ಕೆಲಸಕ್ಕೆ ಮುಂದಾಗಬೇಕಿದೆ.




# ಅಮೆರಿಕದೊಂದಿಗೆ ಹೆಚ್ಚುತ್ತಿರುವ ಕಾರ್ಯತಂತ್ರ ಬಾಂಧವ್ಯ

**ಅಧ್ಯಕ್ಷ ಬೈಡೆನ್ ಪಶ್ಚಿಮ ಏಷ್ಯಾಕ್ಕೆ ಭೇಟಿ ನೀಡಿದ್ದ ಸಂದರ್ಭ 2022 ಜುಲೈ 14ರಂದು ಐ2ಯು2 ವರ್ಚುವಲ್ ಶೃಂಗ ಸಭೆ ನಡೆದಿತ್ತು. ಇರಾನ್-ವಿರೋಧಿಯಾದ ಈ ಮೈತ್ರಿಕೂಟಕ್ಕೆ ಭಾರತ ಸೇರುವ ಅಗತ್ಯವಾದರೂ ಏನು ಹಾಗೂ ಪ್ಯಾಲೆಸ್ತೀನಿ ಉದ್ದೇಶವನ್ನು ಮಣ್ಣುಪಾಲು ಮಾಡುವ ಇಸ್ರೇಲ್-ಅರಬ್ ರಾಷ್ಟ್ರಗಳ ರಾಜಿಯನ್ನು ಭಾರತ ಅನುಮೋದಿಸುವುದಾದರೂ ಯಾಕೆ ಎಂಬ ಪ್ರಶ್ನೆಗಳಿಗೆ ಸರ್ಕಾರದ ಬಳಿ ಖಂಡಿತವಾಗಿಯೂ ಸಮಾಧಾನಕರ ಉತ್ತರವಿರಲಾರದು.**

**ಪ್ರಕಾಶ್ ಕಾರತ್**

ನರೇಂದ್ರ ಮೋದಿ ಸರಕಾರ ಅಮೆರಿಕದೊಂದಿಗೆ ಎಲ್ಲ ರಂಗಗಳಲ್ಲಿ ಕಾರ್ಯತಂತ್ರ ಬಾಂಧವ್ಯವನ್ನು ಆಳಗೊಳಿಸುತ್ತಿದೆ. ಕಳೆದ ಕೆಲವು ತಿಂಗಳಲ್ಲಿ ನಡೆದ ಮೂರು ಘಟನೆಗಳು ಅಮೆರಿಕದ ಭೌಗೋಳಿಕ ರಾಜಕೀಯ ಹುನ್ನಾರಗಳಿಗೆ ಭಾರತ ಇನ್ನಷ್ಟು ಹತ್ತಿರ ಸರಿಯುತ್ತಿರುವುದನ್ನು ಎತ್ತಿತ್ತೋರಿಸುತ್ತದೆ.

ಪಶ್ಚಿಮ ಏಷ್ಯಾದ 'ಐ2ಯು2' ಎಂಬ ಹೊಸ ಗುಂಪಿಗೆ ಭಾರತ ಸೇರ್ಪಡೆಯಾಗಿದೆ. ಇಂಡಿಯಾ ಮತ್ತು ಇಸ್ರೇಲ್ (ಐ2) ಹಾಗೂ ಯುನೈಟೆಡ್ ಸ್ಟೇಟ್ಸ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯು2) ಈ ಕೂಟದಲ್ಲಿವೆ.

ಈ ವಲಯದಲ್ಲಿ ಅಮೆರಿಕದ ಪ್ರಭಾವವನ್ನು ಹೆಚ್ಚಿಸುವ ಅಮೆರಿಕ ಅಧ್ಯಕ್ಷ ಜೋ ಬೈಡೆನ್‌ರ ಹತಾಶ ಪ್ರಯತ್ನಗಳಿಗೆ ಇಂಬು ಕೊಡುವುದು ಬಿಟ್ಟರೆ ಬೇರೆ ಯಾವ ಕಾರಣಕ್ಕೆ ಭಾರತ ಹೀಗೆ ಮಾಡಿದೆ ಎಂದು ಯೋಚಿಸಲೂ ಆಗುವುದಿಲ್ಲ.

ಚೀನಾ ಮತ್ತು ರಷ್ಯಾದ ಹೆಚ್ಚುತ್ತಿರುವ ಆರ್ಥಿಕ ಮತ್ತು ರಾಜಕೀಯ ಸವಾಲುಗಳ ಪರಿಣಾಮವಾಗಿ ಪಶ್ಚಿಮ ಏಷ್ಯಾ ವಲಯದಲ್ಲಿ ಕ್ಷೀಣಿಸುತ್ತಿರುವ ತನ್ನ ಏಕಚಕ್ರಾಧಿಪತ್ಯವನ್ನು ಮರಳಿ ಸ್ಥಾಪಿಸಲು ಈ ವಲಯದಲ್ಲಿ ಇರಾನ್-ವಿರೋಧಿ ಮೈತ್ರಿಕೂಟ ರಚಿಸಲು ಬೈಡೆನ್ ಪ್ರಯತ್ನಿಸುತ್ತಿದ್ದಾರೆ. ಇದಕ್ಕೂ ಮುನ್ನ, ಅರಬ್ ರಾಷ್ಟ್ರಗಳಾದ ಯುಎಇ, ಬಹರೈನ್ ಮತ್ತು ಮೊರಾಕ್ಕೊ ದೇಶಗಳಿಂದ ಇಸ್ರೇಲ್‌ಗೆ ಮಾನ್ಯತೆ ಒದಗಿಸುವ ಉದ್ದೇಶದಿಂದ 'ಅಬ್ರಹಾಂ ಒಡಂಬಡಿಕೆ' ರೂಪಿಸಲು ಅಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಪಕ್ರಮ ಆರಂಭಿಸಿದ್ದರು.

ಅಧ್ಯಕ್ಷ ಬೈಡೆನ್ ಪಶ್ಚಿಮ ಏಷ್ಯಾಕ್ಕೆ ಭೇಟಿ ನೀಡಿದ್ದ ಸಂದರ್ಭ 2022 ಜುಲೈ 14ರಂದು ಐ2ಯು2 ವರ್ಚುವಲ್ ಶೃಂಗ ಸಭೆ ನಡೆದಿತ್ತು. ಇರಾನ್-ವಿರೋಧಿಯಾದ ಈ ಮೈತ್ರಿಕೂಟಕ್ಕೆ ಭಾರತ ಸೇರುವ ಅಗತ್ಯವಾದರೂ ಏನು ಹಾಗೂ ಪ್ಯಾಲೆಸ್ತೀನಿ ಉದ್ದೇಶವನ್ನು ಮಣ್ಣುಪಾಲು ಮಾಡುವ ಇಸ್ರೇಲ್-ಅರಬ್ ರಾಷ್ಟ್ರಗಳ ರಾಜಿಯನ್ನು ಭಾರತ ಅನುಮೋದಿಸುವುದಾದರೂ ಯಾಕೆ ಎಂಬ ಪ್ರಶ್ನೆಗಳಿಗೆ ಸರ್ಕಾರದ ಬಳಿ ಖಂಡಿತವಾಗಿಯೂ ಸಮಾಧಾನಕರ ಉತ್ತರವಿರಲಾರದು.

ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಜೊತೆ ಭಾರತ ತನ್ನ ಸಂಬಂಧವನ್ನು ಬಲಪಡಿಸಬೇಕೆಂದಿದ್ದರೆ ಅದನ್ನು ದ್ವಿಪಕ್ಷೀಯ ಮಾರ್ಗದಲ್ಲಿ ಮಾಡಬಹುದು ಹಾಗೂ ಐ2ಯು2 ವೇದಿಕೆ ಮುಖಾಂತರ ಯುಎಇ ಆಶ್ವಾಸನೆ ನೀಡಿರುವ ಸಮಗ್ರ ಫುಡ್ ಪಾರ್ಕ್‌ಗಳಿಗೆ ಹೂಡಿಕೆಯನ್ನು ಪಡೆಯಬಹುದಿತ್ತು. ಅಮೆರಿಕದೊಂದಿಗಿನ ಕಾರ್ಯತಂತ್ರಾತ್ಮಕ ಮೈತ್ರಿಯನ್ನು ಬಲಪಡಿಸುವುದೊಂದೇ ಈ ಸಂಭಾವ್ಯ ಪಶ್ಚಿಮ ಏಷ್ಯಾ ಕ್ವಾಡ್‌ಗೆ ಸೇರಲು ಭಾರತ ಹೊಂದಿರುವ ಏಕೈಕ ಕಾರಣವಾಗಿದೆ.

ಐ2ಯು2 ಶೃಂಗಸಭೆಯ ಬೆನ್ನಲ್ಲೇ, ಕೂಟದ ಸಹ-ಸದಸ್ಯವಾಗಿರುವ ಬಹರೈನ್‌ನಲ್ಲಿರುವ ಅಮೆರಿಕ ನೇತೃತ್ವದ ಕಂಬೈನ್ಡ್ ಮಾರಿಟೈಮ್ ಫೋರ್ಸ್ (ಸಿಎಂಎಫ್) ಅನ್ನು ಭಾರತ ಸೇರಿತು. ಅಂತಾರಾಷ್ಟ್ರೀಯ ಜಲ ಪ್ರದೇಶಗಳನ್ನು ರಕ್ಷಿಸುವ ಉದ್ದೇಶದ ಭಯೋತ್ಪಾದನಾ ವಿರೋಧಿ ಕೂಟವಾದ ಸಿಎಂಎಫ್ ಅನ್ನು ಅಮೆರಿಕದ ನೌಕಾ ಪಡೆಯ ಸೆಂಟ್ರಲ್ ಕಮಾಂಡ್ ನಾಯಕತ್ವದಲ್ಲಿ ರಚಿಸಲಾಗಿದೆ. ಅದರಲ್ಲಿ 35 ದೇಶಗಳಿದ್ದು ಪ್ರಮುಖವಾಗಿ ಫ್ರಾನ್ಸ್, ಜರ್ಮನಿ ಮತ್ತು ನೆದರ್‌ಲ್ಯಾಂಡ್ಸ್‌ನಂಥ ಕೆಲವು ನ್ಯಾಟೊ ಪಾಲುದಾರರ ಸಹಿತ ಅಮೆರಿಕದ ಮಿತ್ರ ದೇಶಗಳೇ ಕೂಟದಲ್ಲಿ ಹೆಚ್ಚಾಗಿವೆ.

ಅಮೆರಿಕ, ಜಪಾನ್, ಆಸ್ಟ್ರೇಲಿಯಾ ಮತ್ತು ಭಾರತ ಒಳಗೊಂಡ ನಾಲ್ಕು ದೇಶಗಳ ಕ್ವಾಡ್ ಕೂಟವನ್ನು ಹಿಂದೂ ಮಹಾಸಾಗರ-ಶಾಂತಸಾಗರ (ಇಂಡೊ-ಪೆಸಿಫಿಕ್) ವಲಯಕ್ಕಾಗಿ ರಚಿಸಿದ್ದರೆ ಪಶ್ಚಿಮ ಏಷ್ಯಾದಲ್ಲಿ ತನ್ನ ಮಿತ್ರ ದೇಶಗಳನ್ನು ಒಂದೇ ವೇದಿಕೆಗೆ ತರಲು ಅಮೆರಿಕ ಪ್ರಯತ್ನಿಸುತ್ತಿದ್ದು ಭಾರತ ಅದರ ಭಾಗವಾಗಲು ಒಪ್ಪಿಕೊಂಡಿದೆ.

**ಅಮೆರಿಕ ನೌಕೆ ಆಗಮನ**

ಅಮೆರಿಕ ನೌಕಾ ಪಡೆಯ ಹಡಗೊಂದು ರಿಪೇರಿಗಾಗಿ ಚೆನ್ನೈ ಸಮೀಪದ ಕಟ್ಟುಪಲ್ಲಿಯಲ್ಲಿನ ಲಾರ್ಸನ್ ಅಂಡ್ ಟೂಬ್ರೊ ಶಿಪ್‌ಯಾರ್ಡ್‌ಗೆ ಬಂದಿದ್ದು ಇತ್ತೀಚಿನ ಮೂರನೇ ಘಟನೆಯಾಗಿದೆ. ಅಮೆರಿಕ ನೇವಿಯ ಹಡಗುಗಳ ಪ್ರಯಾಣ ನಡುವಿನ ರಿಪೇರಿ ಮತ್ತು ನಿರ್ವಹಣೆಗಾಗಿ ಅಮೆರಿಕ ಮಾರಿಟೈಮ್ ಸೀಲಿಫ್ಟ್ ಕಮಾಂಡ್ ಭಾರತೀಯ ಶಿಪ್‌ಯಾರ್ಡ್‌ಗಳನ್ನು ಬಳಸಬಹುದು ಎಂದು ಅಮೆರಿಕ-ಭಾರತ ನಡುವಿನ ಸಚಿವರ 2+2 ಸಭೆಯಲ್ಲಿ ನಿರ್ಧರಿಸಿದ್ದ ಹಿನ್ನೆಲೆಯಲ್ಲಿ ಈ ವಿದ್ಯಮಾನ ಘಟಿಸಿದೆ. ಅಮೆರಿಕ ನೇವಿಯ 'ಚಾರ್ಲ್ಸ್ ಡ್ರ್ಯೂ' ಭಾರತೀಯ ಹಡಗುಕಟ್ಟೆಯಲ್ಲಿ ರಿಪೇರಿಯಾದ ಅಮೆರಿಕದ ಮೊದಲ ನೌಕೆಯಾಗಿದೆ. ಇದು ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೊರಾಂಡಂ ಆಫ್ ಅಗ್ರಿಮೆಂಟ್ (ಎಲ್‌ಇಎಂಒಎ) ಎಂದು ಕರೆಯಲಾಗುವ ಅಮೆರಿಕ ಮತ್ತು ಭಾರತ ನಡುವಿನ ಸಾಗಾಟ ಸರಬರಾಜು ಕುರಿತ ಒಪ್ಪಂದದ ಫಲಶೃತಿಯಾಗಿದೆ. ಈ ಒಪ್ಪಂದದ ಪ್ರಕಾರ ಅಮೆರಿಕದ ವಾಯು ಪಡೆ ವಿಮಾನಗಳು ಮತ್ತು ನೌಕಾ ಪಡೆಯ ಹಡಗುಗಳು ಭಾರತೀಯ ವಾಯು ನೆಲೆಗಳು ಹಾಗೂ ಬಂದರುಗಳನ್ನು ಇಂಧನ ತುಂಬಿಸಿಕೊಳ್ಳಲು, ರಿಪೇರಿ ಹಾಗೂ ನಿರ್ವಹಣೆಗಾಗಿ ಬಳಸಿಕೊಳ್ಳಬಹುದು.

ಭಾರತದಲ್ಲಿ ಅಮೆರಿಕ ನೌಕೆಯ ರಿಪೇರಿ ಆಗಿರುವುದನ್ನು ಉಲ್ಲೇಖಿಸಿರುವ ನೌಕಾ ಪಡೆಯ ಉಪ ಮುಖ್ಯಸ್ಥ ಎಸ್.ಎನ್.ಘೋರ್ಮಡೆ, 'ಇದು ಪರಸ್ಪರ ವಿಶ್ವಾಸವನ್ನು ಪ್ರದರ್ಶಿಸುತ್ತದೆ. ಅಮೆರಿಕದ ಪ್ರಮುಖ ರಕ್ಷಣಾ ಪಾಲುದಾರನಾಗಿ ನಮ್ಮ ಪಾತ್ರವನ್ನು ಇನ್ನಷ್ಟು ಬಲಪಡಿಸುತ್ತದೆ' ಎಂದಿದ್ದಾರೆ.

ಕಾರ್ಯತಂತ್ರಾತ್ಮಕ ಮೈತ್ರಿಯ ಕೇಂದ್ರದಲ್ಲಿರುವ, ಬೆಳೆಯುತ್ತಿರುವ ಮಿಲಿಟರಿ ಮೈತ್ರಿಯನ್ನು ಮನಮೋಹನ್ ಸಿಂಗ್ ಸರ್ಕಾರ ಅಧಿಕೃತಗೊಳಿಸಿತ್ತು. 2005 ಜೂನ್‌ನಲ್ಲಿ ಅಮೆರಿಕದೊಂದಿಗೆ ಡಿಫೆನ್ಸ್ ಫ್ರೇಮ್‌ವರ್ಕ್ ಅಗ್ರಿಮೆಂಟ್‌ಗೆ (ರಕ್ಷಣಾ ಚೌಕಟ್ಟು ಒಡಂಬಡಿಕೆ) ಸಹಿ ಹಾಕುವ ಮೂಲಕ ಅದಕ್ಕೆ ನಾಂದಿ ಹಾಡಲಾಗಿತ್ತು.

ಸಾರಿಗೆ ಸರಬರಜು ಒಪ್ಪಂದ ಮುಂತಾದ ಒಡಂಬಡಿಕೆಗಳಿಗೆ ಸಹಿ ಹಾಕಲು ಆ ಚೌಕಟ್ಟು ಅವಕಾಶ ಕಲ್ಪಿಸಿತ್ತು. ಮೋದಿ ಸರ್ಕಾರ ಇನ್ನೂ ಮುಂದೆ ಹೋಗಿ ತಥಾಕಥಿತ ಮೂರು ಅಸ್ತಿಭಾರ ಒಪ್ಪಂದಗಳಿಗೆ ಸಹಿ ಹಾಕಿದೆ. ಅದು ಉಭಯ ದೇಶಗಳ ಸಶಸ್ತ್ರ ಪಡೆಗಳ ಜೋಡಣೆ ಮತ್ತು ಅಂತರ್‌ಕಾರ್ಯಾಚರಣೆಗೆ ಅನುಕೂಲ ಕಲ್ಪಿಸುತ್ತದೆ.

ಕ್ವಾಡ್ ಆಗಿರಬಹುದು, ಅಮೆರಿಕದ ಸೆಂಟ್ರಲ್ ಮತ್ತು ಇಂಡೊ-ಪೆಸಿಫಿಕ್ ಕಮಾಂಡ್‌ಗಳಿಗೆ ಸಂಪರ್ಕ ಅಧಿಕಾರಿಗಳ ನೇಮಕವಿರಬಹುದು ಅಥವಾ ಅಮೆರಿಕದಿಂದ ರಕ್ಷಣಾ ಖರೀದಿಗಳೇ ಇರಬಹುದು; ಭಾರತವು ಅಮೆರಿಕದ ಮಿಲಿಟರಿ ಭಾಗಿದಾರ ಆಗುವತ್ತ ಸಾಗಿದೆ. ಬಿಜೆಪಿ ಸರಕಾರದಿಂದ ನಡೆಯುತ್ತಿರುವ ಈ ಎಲ್ಲ ಚಟುವಟಿಕೆಗಳು ಹಿಂದುತ್ವ ಬಲಪಂಥೀಯ ಶಕ್ತಿಗಳು ಅಮೆರಿಕ ಸಾಮ್ರಾಜ್ಯಶಾಹಿ ಜೊತೆ ನಿಕಟ ಸೈದ್ಧಾಂತಿಕ ಬಾಂಧವ್ಯ ಹಾಗೂ ರಾಜಕೀಯ ಸಾಮೀಪ್ಯ ಹೊಂದುತ್ತಿರುವುದರ ಸೂಚನೆಯಾಗಿದೆ.



**ಅನು: ವಿಶ್ವ**

## ವಿದ್ಯುತ್ ತಿದ್ದುಪಡಿ ಮಸೂದೆಯ ವಿರುದ್ಧ 10 ಲಕ್ಷ ವಿದ್ಯುತ್ ನೌಕರರು, ಇಂಜಿನಿಯರುಗಳ ಪ್ರತಿಭಟನೆ

**ಪುಟ 2 ರಿಂದ**

ಕ್ಲಬ್‌ನಲ್ಲಿ ವಿದ್ಯುತ್ ನೌಕರರು ಮತ್ತು ಇಂಜಿನಿಯರ್‌ಗಳ ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಿತು. ಬೃಹತ್ ಉದ್ಯಮಿಗಳಿಗೆ ಅನುಕೂಲವಾಗುವಂತೆ ವಿದ್ಯುಚ್ಛಕ್ತಿ (ತಿದ್ದುಪಡಿ) ಮಸೂದೆ 2022 ಅನ್ನು ಜಾರಿಗೊಳಿಸುವ ಮೂಲಕ ರೈತರು ಮತ್ತು ಸಣ್ಣ ಉದ್ಯಮಿಗಳು ಸೇರಿದಂತೆ ಬಡ ಮತ್ತು ಗ್ರಾಮೀಣ ಜನರಿಗೆ ವಿದ್ಯುತ್ ಹಕ್ಕುಗಳನ್ನು ನಿರ್ಬಂಧಿಸುವ ಸ್ಪಷ್ಟ ಉದ್ದೇಶದಿಂದ ಭಾರತವು ಸಂಸತ್ತಿನಲ್ಲಿ ಈ ಮಸೂದೆಯನ್ನು ಮಂಡಿಸುತ್ತಿದೆ ಎಂದು ಈ. ಸಮಾವೇಶವು ಅಂಗೀಕರಿಸಿದ ನಿರ್ಣಯ ಹೇಳಿತ್ತು. "ಆಜಾದಿ ಕಾ ಅಮೃತ್ ಮಹೋತ್ಸವ" ಎಂದು ಆಚರಿಸುತ್ತಲೇ, "ಆತ್ಮನಿರ್ಭರ ಭಾರತ್" ಮುಂತಾದ ದೊಡ್ಡ-ದೊಡ್ಡ ಮಾತುಕತೆಗಳ ಮರೆಯಲ್ಲಿ ಸ್ವಾತಂತ್ರ್ಯದ ನಂತರ ಏಳು ದಶಕಗಳಲ್ಲಿ ನಿರ್ಮಿಸಲಾದ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಜಾಲದ ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಕೈಗಳಿಗೆ ವರ್ಗಾಯಿಸುವ ಸರ್ಕಾರದ ಅಂತಿಮ ಉದ್ದೇಶವನ್ನು ಬಯಲಿಗೆಳೆಯಬೇಕು ಎಂದು ಆ ಸಮಾವೇಶ ನಿರ್ಧರಿಸಿತ್ತು. ಜನರು ತಮ್ಮ ತಾಯ್ನಾಡನ್ನು ಅದರ ಶ್ರೀಮಂತ ಸಂಪನ್ಮೂಲಗಳು ಮತ್ತು ಸ್ವಾವಲಂಬನೆಯನ್ನು ಅದರ ನಿಜವಾದ ಅರ್ಥದಲ್ಲಿ ಗೌರವಿಸಲು ಮತ್ತು ಪ್ರೀತಿಸಲು ಬಯಸುತ್ತಾರೆ. ವ್ಯಾಪಾರ ಸಮುದಾಯಕ್ಕೆ "ಭಾರಮಾತೆ"ಯನ್ನು ಮಾರಾಟವನ್ನು ಅವರು ಇಷ್ಟಪಡುವುದಿಲ್ಲ. ಆದ್ದರಿಂದ "ವಿದ್ಯುತ್ ವಲಯವನ್ನು ಉಳಿಸಿ, ಭಾರತ ಉಳಿಸಿ" ಎಂಬ ಕರೆಯನ್ನು ನೀಡುವುದಾಗಿ ಎನ್‌ಸಿಸಿಒಇಇಇ ಸಮಾವೇಶ ಹೇಳಿತ್ತು.

ಸರ್ಕಾರವು ಈ ಮಸೂದೆಯನ್ನು ಯಾವುದೇ ಚರ್ಚೆಯಿಲ್ಲದೆ ತರಾತುರಿಯಲ್ಲಿ ಅಂಗೀಕರಿಸುವ ಉದ್ದೇಶ ಹೊಂದಿತ್ತು. ಆದರೆ ಸಂಸತ್ತಿನ ಒಳಗೆ ಮತ್ತು ಹೊರಗೆ ವಿರೋಧದಿಂದಾಗಿ ಅದನ್ನು ವ್ಯಾಪಕ ಸಮಾಲೋಚನೆಗಾಗಿ ಸಂಸದೀಯ ಸ್ಥಾಯಿ ಸಮಿತಿಗೆ ಕಳುಹಿಸಲು ಸರ್ಕಾರ ಒಪ್ಪಿಕೊಳ್ಳಬೇಕಾಗಿ ಬಂದಿದೆ. ಇದು ಮೊದಲ ವಿಜಯಎಂದಿರುವ ಎನ್‌ಸಿಸಿಒಇಇಇ ಅದಕ್ಕಾಗಿ ತನ್ನ ಘಟಕಗಳು, ಇತರ ಕಾರ್ಮಿಕ ಸಂಘಟನೆಗಳು ಮತ್ತು ಎಸ್‌ಕೆಎಂ ನೇತೃತ್ವದ ರೈತ ಸಂಘಟನೆಗಳನ್ನು ಅಭಿನಂದಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

**ಚಂದಾ ವಿವರ:**
**ವಾರ್ಷಿಕ ಚಂದಾ :** ರೂ.500.00
**ದ್ವೈವಾರ್ಷಿಕ ಚಂದಾ :** ರೂ.1000.00

**ಚಂದಾದಾರರು ಸಂರ್ಕಿಸಿ:**
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
**ಕಛೇರಿ ದೂರವಾಣಿ :** 080-22234369
**ಫೋನ್ :** 9448578021, 9483966467

# ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ರಕ್ಷಣೆಗಾಗಿ ಹೋರಾಟಗಳು ಮತ್ತು ಪ್ರತಿರೋಧ



**ಇಂದು, ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಧ್ವಂಸಮಾಡಿ ಒಂದು ಫ್ಯಾಸಿಸ್ಟ್ ತೆರನ ಹಿಂದುತ್ವ ರಾಷ್ಟ್ರವನ್ನು ಹೇರುವ ಹುಚ್ಚು ಪ್ರಯತ್ನಗಳಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಾವೆಲ್ಲ ಒಟ್ಟು ಸೇರಿ ಗಟ್ಟಿಗೊಳಿಸಬೇಕಾಗಿದೆ.**

**ಸೀತಾರಾಮ್ ಯೆಚೂರಿ**

(ಸೀತಾರಾಮ್ ಯೆಚೂರಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಂಸದರು)

ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವವನ್ನು ಮೋದಿ ಸರ್ಕಾರವು 'ಆಜಾದಿ ಕಾ ಅಮೃತ್ ಮಹೋತ್ಸವ್' ಎಂದು ನಾಮಕರಣ ಮಾಡಿದ್ದು, ಅದನ್ನು ದೇಶದ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜವನ್ನು ಹಾರಿಸುವುದರ ಮೇಲೆ ಕೇಂದ್ರೀಕರಿಸುವ. ಒಂದು ದೊಡ್ಡ ಅಭಿಯಾನವಾಗಿ ಭಾರೀ ಪ್ರಚಾರ ಮಾಡಲಾಗುತ್ತಿದೆ. ಇದಕ್ಕಾಗಿ, ಭಾರತದ ಧ್ವಜ ಸಂಹಿತೆಯನ್ನು ಡಿಸೆಂಬರ್ 2021 ರಲ್ಲಿ ತಿದ್ದುಪಡಿ ಮಾಡಿ, ಖಾದಿ, ಹತ್ತಿ ಮತ್ತು ರೇಷ್ಮೆಯಂತಹ ನೈಸರ್ಗಿಕ ಬಟ್ಟೆಯಲ್ಲದೆ, ಪಾಲಿಯೆಸ್ಟರ್ ಬಟ್ಟೆಯಲ್ಲೂ ಬಾವುಟಗಳನ್ನು ಮಾಡಲು ಅನುಮತಿ ನೀಡಲಾಗಿದೆ. ದೇಶದ ಅತಿದೊಡ್ಡ ಪಾಲಿಯೆಸ್ಟರ್ ಉತ್ಪಾದಕರು ಯಾರು ಎಂಬುದು ಎಲ್ಲರಿಗೂ ತಿಳಿದಿದೆ. ಇದು ಆಯ್ದ ಬಂಟರಿಗೆ ಮಹಾ ಲಾಭದ ಅವಕಾಶಗಳನ್ನು ಒದಗಿಸುತ್ತದೆ.

ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗುವ ವರೆಗೂ ಆರ್‌ಎಸ್‌ಎಸ್–ಬಿಜೆಪಿ ಎಂದೂ ರಾಷ್ಟ್ರಧ್ವಜವನ್ನು ಹಾರಿಸಿರಲಿಲ್ಲ, ಅವರ ನಿಷ್ಠೆ ಕೇಸರಿ ಧ್ವಜಕ್ಕಷ್ಟೇ ಮೀಸಲು. ಆರ್‌ಎಸ್‌ಎಸ್ ಎಂದಿಗೂ ಭಾರತೀಯ ಸ್ವಾತಂತ್ರ್ಯ ಹೋರಾಟದ ಭಾಗವಾಗಿರಲಿಲ್ಲ. ಅತ್ಯಂತ ಸಹಾನುಭೂತಿಯುಳ್ಳ ಹಿಂದುತ್ವ ಇತಿಹಾಸಕಾರರೂ ದಾಖಲಿಸಿರುವ ಸತ್ಯಸಂಗತಿ ಇದು ಮತ್ತು ಬ್ರಿಟಿಷ್ ಗುಪ್ತಚರ ವರದಿಗಳು ಇದನ್ನು ದೃಢೀಕರಿಸಿವೆ.

**ಕಮ್ಯೂನಿಸ್ಟರ ಭವ್ಯ ಪಾತ್ರ**

ಇದಕ್ಕೆ ವ್ಯತಿರಿಕ್ತವಾಗಿ, ಸಿಪಿಐ(ಎಂ)ನ ಎಲ್ಲಾ ಒಂಬತ್ತು ಸಂಸ್ಥಾಪಕ ಪೊಲಿಟ್ ಬ್ಯೂರೋ ಸದಸ್ಯರನ್ನು ಬ್ರಿಟಿಷರು ಬಂಧಿಸಿದ್ದರು; ಅವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಹಳ ವರ್ಷಗಳನ್ನು ಜೈಲಿನಲ್ಲಿ ಕಳೆಯಬೇಕಾಯಿತು. ಅಂಡಮಾನ್‌ನ ಸೆಲ್ಯುಲಾರ್ ಜೈಲಿನಲ್ಲಿ (ಕಾಲಾಪಾನಿ) ಅಮೃತಶಿಲೆಯಲ್ಲಿ ಕೆತ್ತಿದ ಹೆಚ್ಚಿನ ಹೆಸರುಗಳು ಕ್ರಾಂತಿಕಾರಿ ಕಮ್ಯುನಿಸ್ಟ್ ಚಳುವಳಿಯೊಂದಿಗೆ ಸಂಬಂಧ ಹೊಂದಿದ್ದವು. ಕಾಂ. ಎ.ಕೆ. ಗೋಪಾಲನ್ ಅವರು ಆಗಸ್ಟ್ 15, 1947 ರಂದು ಇನ್ನೂ ಕಣ್ಣಾನೂರು ಜೈಲಿನಲ್ಲೇ ಇದ್ದು, ಅಲ್ಲೇ ರಾಷ್ಟ್ರಧ್ವಜವನ್ನು ಹಾರಿಸಿದರು. 16 ವರ್ಷದ ಹರ್ಕಿಶನ್ ಸಿಂಗ್ ಸುರ್ಜೀತ್ 1932 ರಲ್ಲಿ ಹೋಶಿಯಾರ್‌ಪುರದ ಕಲೆಕ್ಟರೇಟ್‌ನಲ್ಲಿ ಯೂನಿಯನ್ ಜ್ಯಾಕ್ ಅನ್ನು ಕೆಳಗಿಳಿಸಿ ತ್ರಿವರ್ಣವನ್ನು ಹಾರಿಸಿದಾಗ ಬ್ರಿಟಿಷರಿಂದ ಬಂಧಿಸಲ್ಪಟ್ಟರು.. ಕಮ್ಯುನಿಸ್ಟರು ಮತ್ತು ಸಿಪಿಐ(ಎಂ)ಗೆ ದೇಶಭಕ್ತಿ ಮತ್ತು ತ್ಯಾಗದ ಮನೋಭಾವವು ಭಾರತದ ಸಮಾಜವಾದಿ ಪರಿವರ್ತನೆಯ ಕ್ರಾಂತಿಕಾರಿ ಕಣ್ಣೋಟದ ಅವಿಭಾಜ್ಯ ಅಂಗವಾಗಿದೆ.

1920 ರಲ್ಲಿ ಸ್ಥಾಪನೆಯಾದಂದಿನಿಂದಲೇ, ಕಮ್ಯುನಿಸ್ಟ್ ಪಕ್ಷವು ರಾಷ್ಟ್ರೀಯ ಆಂದೋಲನದ ಕಾರ್ಯಸೂಚಿಯ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿತು. 1921 ರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಹಮದಾಬಾದ್ ಅಧಿವೇಶನದಲ್ಲಿ, ಸಿಪಿಐ ಪರವಾಗಿ ಮೌಲಾನಾ ಹಸ್ರತ್ ಮೊಹಾನಿ ಮತ್ತು ಸ್ವಾಮಿ ಕುಮಾರಾನಂದ ಅವರು ಬ್ರಿಟಿಷ್ ಆಳ್ವಿಕೆಯಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಆಗ್ರಹಿಸುವ ನಿರ್ಣಯವನ್ನು ಮಂಡಿಸಿದರು, ಅದನ್ನು ಆಗ ಗಾಂಧೀಜಿ ಸ್ವೀಕರಿಸಲಿಲ್ಲ, (ಪೂರ್ಣ ಸ್ವರಾಜ್ಯ ಕರೆಯನ್ನು ನೀಡಿದ್ದು 1929 ರಲ್ಲಷ್ಟೇ.) 1922 ರಲ್ಲಿ ಗಯಾದಲ್ಲಿ ನಡೆದ ಮುಂದಿನ ಎಐಸಿಸಿ ಯಲ್ಲಿ ಸಿಪಿಐ ರಾಷ್ಟ್ರೀಯ ಆಂದೋಲನದ ಧ್ಯೇಯೋದ್ದೇಶಗಳ ಒಂದು ಪಟ್ಟಿಯನ್ನು ಸುತ್ತೋಲೆಯಾಗಿ ಪ್ರಸಾರ ಮಾಡಿತು. ಇದು ನಂತರದ ಎಐಸಿಸಿ ಅಧಿವೇಶನಗಳಲ್ಲಿ ಮುಂದುವರೆಯಿತು.

ಸ್ವಾತಂತ್ರ್ಯ ಚಳವಳಿಯ ಕಾರ್ಯಸೂಚಿಯ ಮೇಲೆ ಪ್ರಭಾವ ಬೀರಿದ ಕಮ್ಯುನಿಸ್ಟರ ಪ್ರಮುಖ ಕೊಡುಗೆಯೆಂದರೆ ಭೂಮಿಯ ಪ್ರಶ್ನೆ: 1940 ರ ದಶಕದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಕಮ್ಯುನಿಸ್ಟರು ಭೂಪ್ರಶ್ನೆಗೆ ಸಂಬಂಧಿಸಿದ ಹೋರಾಟಗಳನ್ನು ಹರಿ ಬಿಟ್ಟರು–ವಿಶೇಷವಾಗಿ, ಕೇರಳದ ಪುನ್ನಪ್ರ–ವಯಲಾರ್, ಬಂಗಾಳದಲ್ಲಿ ತೆಭಾಗ ಚಳುವಳಿ, ಅಸ್ಸಾಂನಲ್ಲಿ ಸುರ್ಮಾ ಕಣಿವೆ ಹೋರಾಟ, ಮಹಾರಾಷ್ಟ್ರದಲ್ಲಿ ವಾರ್ಲಿ ಬಂಡಾಯ ಇತ್ಯಾದಿ. ಈ ಹೋರಾಟಗಳಲ್ಲಿ ಎದ್ದು ಕಂಡದ್ದು ತೆಲಂಗಾಣದಲ್ಲಿ ನಡೆದ ಸಶಸ್ತ್ರ ಹೋರಾಟ–ಇವು ಭೂಸುಧಾರಣೆ ಮತ್ತು ಜಮೀನ್ದಾರಿ ರದ್ದತಿಯನ್ನು ಕೇಂದ್ರ ಪ್ರಶ್ನೆಯಾಗಿ ಮುಂಚೂಣಿಗೆ ತಂದವು.

ಕಮ್ಯುನಿಸ್ಟರು ಭಾರತದ ಭಾಷಾ ವೈವಿಧ್ಯತೆಯನ್ನು ಪ್ರತಿಪಾದಿಸಿದರು ಮತ್ತು ಸ್ವಾತಂತ್ರ್ಯ ಹೋರಾಟದೊಂದಿಗೆ ವಿವಿಧ ಭಾಷಾ ರಾಷ್ಟ್ರೀಯತೆಗಳನ್ನು ಸಮಗ್ರೀಕರಿಸಿದ್ದು ಅಂತಿಮವಾಗಿ ಸ್ವತಂತ್ರ ಭಾರತದಲ್ಲಿ ರಾಜ್ಯಗಳ ಭಾಷಾವಾರು ಮರುಸಂಘಟನೆಗೆ ದಾರಿ ಮಾಡಿ ಕೊಟ್ಟಿತು.

ಜಾತ್ಯತೀತತೆಗೆ ಕಮ್ಯುನಿಸ್ಟರ ದೃಢವಾದ ಬದ್ಧತೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭುಗಿಲೆದ್ದ ಕೋಮುಗಲಭೆಗಳ ಸಂದರ್ಭದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಎತ್ತಿಹಿಡಿಯುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು. ಕಮ್ಯುನಿಸ್ಟರು ಇಂದಿಗೂ ಜಾತ್ಯತೀತತೆಯನ್ನು ಅತ್ಯಂತ ಸ್ಥಿರತೆಯಿಂದ ಎತ್ತಿ ಹಿಡಿಯುತ್ತಿದ್ದಾರೆ.

ಗ್ರಾಮೀಣ ಭಾರತದ ಶೋಷಿತ ಬಹುಸಂಖ್ಯಾತರನ್ನುಸೆಳೆಯುವುದು; ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರನ್ನು ವಿಶೇಷವಾಗಿ ಹೊಲಸು ಜಾತಿ–ಆಧಾರಿತ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿಗೆ ಒಳಗಾಗುತ್ತಿರುವವರನ್ನು ಸೆಳೆಯುವುದು, ಹಲವಾರು ಭಾಷಾ ರಾಷ್ಟ್ರೀಯತೆಗಳನ್ನು ಸೆಳೆಯುವುದು ಮತ್ತು ಬಹು–ಧರ್ಮೀಯ ಭಾರತೀಯ ಜನಸಂಖ್ಯೆಯನ್ನು ಸೆಳೆಯುವುದು, ಎಲ್ಲಕ್ಕಿಂತ ಹೆಚ್ಚಾಗಿ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯದ ಎಲ್ಲರನ್ನೂ ಒಳಗೊಳ್ಳುವ ಹಾದಿಗೆ ಎಲ್ಲಾ ಭಾರತೀಯರನ್ನು ಸೆಳೆಯುವುದು ಸ್ವಾತಂತ್ರ್ಯ ಹೋರಾಟಕ್ಕೆ ಕಮ್ಯುನಿಸ್ಟರ ಕೊಡುಗೆಯ ತಿರುಳಾಗಿದೆ.

**ಇತಿಹಾಸದ ಮರುಲೇಖನ ಮತ್ತು ಹುಸಿಗೊಳಿಸುವ ಕೃತ್ಯ**

ಆರೆಸ್ಸೆಸ್/ಬಿಜೆಪಿಗೆ, ಈ ಅವಲೋಕನಗಳು ಸ್ವಾತಂತ್ರ್ಯ ಚಳವಳಿಯ ಭಾಗವಾಗಿ ತಮ್ಮನ್ನು ಕಳ್ಳತನದಿಂದ ತೂರಿಸುವ ಮೂಲಕ ಇತಿಹಾಸದ ಮರುಲೇಖನಕ್ಕೆ ಅವಕಾಶವನ್ನು ಒದಗಿಸುತ್ತವೆ. ಹಿಂದುತ್ವ ಮತ್ತು ಆರೆಸ್ಸೆಸ್ ನಾಯಕರನ್ನು ಸ್ವಾತಂತ್ರ್ಯ ಹೋರಾಟಗಾರರೆಂದು ಬಿಂಬಿಸುವ ಒಂದು ಕರ್ಕಶ ಸರ್ಕಾರಿ ಪ್ರಾಯೋಜಿತ ಅಭಿಯಾನವನ್ನು ಹರಿಯ ಬಿಡಲಾಗಿದೆ. ಈ ಅಭಿಯಾನದಲ್ಲಿ ವಿ.ಡಿ. ಸಾವರ್ಕರ್ ರದ್ದೇ ಪ್ರಮುಖ ಉಲ್ಲೇಖ ಕಾಣುತ್ತದೆ. ಸಾವರ್ಕರ್ 1923 ರಲ್ಲಿ ಹಿಂದುತ್ವ ಎಂಬ ಪದವನ್ನು ಸೃಷ್ಟಿಸಿದವರು, ಇದು ಹಿಂದೂ ಧರ್ಮದ ಆಚರಣೆಯೊಂದಿಗೆ ಯಾವುದೇ ಸಂಬಂಧವಿಲ್ಲದ ಒಂದು ರಾಜಕೀಯ ಯೋಜನೆ ಎಂದೇ ಅವರು ನಿರೂಪಿಸಿದರು. ಗಾಂಧೀಜಿಯವರ ಹತ್ಯೆಯ ಸಂಚಿನ ಹಿಂದಿನ ಪ್ರಚಂಡ ನಿಯೋಜಕ ಎಂದು ಅವರನ್ನು ಬಂಧಿಸಲಾಯಿತು. ಮಾಫೀದಾರ ಸಾಕ್ಷಿಯ ಸಾಕ್ಷ್ಯವನ್ನು ದೃಢೀಕರಿಸುವ ಸಾಕ್ಷ್ಯಾಧಾರಗಳು ಇರಬೇಕು ಎನ್ನುವುದು ಕ್ರಿಮಿನಲ್ ಕಾನೂನಿನ ಒಂದು ತಾಂತ್ರಿಕ ಅಂಶ. ಇದರ ಕೊರತೆಯಿಂದಾಗಿ ಸಾವರ್ಕರ್ ರನ್ನು ಅಂತಿಮವಾಗಿ ಖುಲಾಸೆಗೊಳಿಸಲಾಯಿತು.. ಸ್ವತಃ ಉತ್ತಮ ಕ್ರಿಮಿನಲ್ ವಕೀಲರಾಗಿದ್ದ ಸರ್ದಾರ್ ಪಟೇಲ್ ಅವರಿಗೆ ಸಾವರ್ಕರ್ ಅವರ ತಪ್ಪಿನ ಬಗ್ಗೆ ವೈಯಕ್ತಿಕವಾಗಿ ಮನವರಿಕೆಯಾಗಿದ್ದು ಅವರನ್ನು ವಿಚಾರಣೆಗೆ ಒಳಪಡಿಸಿದರು.

ಸಾವರ್ಕರ್ ಅವರು ಎರಡು ರಾಷ್ಟ್ರಗಳ ಸಿದ್ಧಾಂತವನ್ನು, ಮೊಹಮ್ಮದ್ ಅಲಿ ಜಿನ್ನಾ ಮುಂದೆ ಬ್ರಿಟಿಶರ ನೆರವು ಮತ್ತು ಪ್ರಚೋದನೆಯಿಂದ ದೇಶದ ದುರದೃಷ್ಟಕರ ವಿಭಜನೆಗೆ ಕಾರಣವಾದ ಪ್ರತ್ಯೇಕ ಮುಸ್ಲಿಂ ಪ್ರಭುತ್ವಕ್ಕಾಗಿ ಹೋರಾಟವನ್ನು ಮುನ್ನಡೆಸುವ ಎರಡು ವರ್ಷಗಳ ಮೊದಲೇ ಪ್ರತಿಪಾದಿಸಿದ್ದರು. ಸೆಲ್ಯುಲರ್ ಜೈಲಿನ ಕೈದಿಯಾಗಿ ಸಾವರ್ಕರ್ ಬ್ರಿಟಿಷರಿಗೆ ಕ್ಷಮಾದಾನ ಅರ್ಜಿಗಳನ್ನು ಕಳುಹಿಸಿ ತಮ್ಮ ಬಿಡುಗಡೆಗಾಗಿ ಮನವಿ ಮಾಡಿದರು, ಇವುಗಳಲ್ಲಿ ಬ್ರಿಟಿಷರ ಶರತ್ತುಗಳಂತೆ ನಡೆದುಕೊಳ್ಳುವುದಾಗಿ ಭರವಸೆ ನೀಡಿದ್ದರು ಎಂದು ಹಿಂದುತ್ವದ ಬಗ್ಗೆ ಸಹಾನುಭೂತಿ ಇರುವ ಇತಿಹಾಸಕಾರರೂ ದಾಖಲಿಸಿದ್ದಾರೆ..


"'ಈಗ ಭಾರತದ ಒಳಿತನ್ನು ಮತ್ತು ಮಾನವೀಯತೆಯನ್ನು ಹೊಂದಿರುವ ಯಾವುದೇ ವ್ಯಕ್ತಿ 1906–1907ರ ಭಾರತದಲ್ಲಿದ್ದ ಉದ್ರೇಕಿತ ಮತ್ತು ಹತಾಶ ಪರಿಸ್ಥಿತಿಯಲ್ಲಿ ಆದಂತೆ ಪ್ರಗತಿ ಮತ್ತು ಶಾಂತಿಯ ಮಾರ್ಗದಿಂದ ಅಡ್ಡದಾರಿಗೆ ತಿರುಗಿಸಿ ಮುಳ್ಳಿನ ಹಾದಿಯಲ್ಲಿ ಕುರುಡಾಗಿ ಹೆಜ್ಜೆ ಹಾಕುವ ಮೋಸಕ್ಕೆ ಒಳಗಾಗುವುದಿಲ್ಲ. ಆದ್ದರಿಂದ, ಸರ್ಕಾರವು ತನ್ನ ಬಹುವಿಧ ಉಪಕಾರ ಮತ್ತು ಕೃಪೆಯಿಂದ ನನ್ನನ್ನು ಬಿಡುಗಡೆ ಮಾಡಿದರೆ, ನಾನು ಸಾಂವಿಧಾನಿಕ ಪ್ರಗತಿಯ ಮತ್ತು ಆ ಪ್ರಗತಿಯ ಪ್ರಪ್ರಥಮ ಷರತ್ತಾದ ಇಂಗ್ಲಿಷ್ ಸರಕಾರಕ್ಕೆ ನಿಷ್ಠೆಯ ಕಟ್ಟಾ ಪ್ರತಿಪಾದಕನಾಗದೇ ಇರುವುದು ಸಾಧ್ಯವಿಲ್ಲ. (ಆರ್.ಸಿ.ಮಜುಂದಾರ್, ಪೀನಲ್ ಸೆಟ್ಲ್ ಮೆಂಟ್ಸ್ ಇನ್ ಅಂಡಮಾನ್ಸ್', ಪುಟಗಳು. 211–213)

ಬ್ರಿಟಿಷರೊಂದಿಗೆ ಶಾಂತಿ ಮಾಡಿಕೊಂಡ ನಂತರ ಅವರ ಜೀವನದ ಬಹುಪಾಲು, ಅವರ ರಾಜಕೀಯವು ಬ್ರಿಟಿಷರಿಗಿಂತ ಹೆಚ್ಚಾಗಿ ಕಾಂಗ್ರೆಸ್ ಮತ್ತು ಎಡ ನೇತೃತ್ವದ ಚಳುವಳಿಗಳಿಗೆ ವಿರುದ್ಧವಾಗಿತ್ತು. ಹಿಂದೂ ಮಹಾಸಭಾದ ನಾಯಕರಾಗಿ, ಅವರು 1942 ರ ಕ್ವಿಟ್ ಇಂಡಿಯಾ ಚಳುವಳಿಯಂತಹ ಚಳುವಳಿಗಳಲ್ಲಿ ಹಿಂದೂ ಮಹಾಸಭಾ ಅಥವಾ ಸಂಘಟನಾವಾದಿ (ಆರ್‌ಎಸ್‌ಎಸ್)ಗಳು ಯಾವುದೇ ರೀತಿಯಲ್ಲಿ ಭಾಗವಹಿಸದಂತೆ ನೋಡಿಕೊಂಡರು.


ಈ ಸಂದರ್ಭದಲ್ಲಿ ಅವರು ನೀಡಿದ್ದ ಸೂಚನೆ ಹೀಗಿತ್ತು:"ಸರ್ಕಾರಿ ಸೇವೆಗಳಲ್ಲಿ ಯಾವುದೇ ಹುದ್ದೆ ಅಥವಾ ಆಯಕಟ್ಟಿನ ಸ್ಥಾನಮಾನವನ್ನು ಹೊಂದಿರುವ ಎಲ್ಲಾ ಹಿಂದೂ ಸಂಘಟನೆಗಳವರು ಅದಕ್ಕೆ ಅಂಟಿಕೊಳ್ಳಬೇಕು ಮತ್ತು ತಮ್ಮ ನಿಯಮಿತ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ನಾನು ಈ ಖಚಿತ ಸೂಚನೆಯನ್ನು ನೀಡುತ್ತೇನೆ"" (ನೂರಾನಿ, ಫ್ರಂಟ್‌ಲೈನ್, ಡಿಸೆಂಬರ್ 1, 1995 ರಲ್ಲಿ ಉಲ್ಲೇಖಿಸಲಾಗಿದೆ),

ವಾಸ್ತವವಾಗಿ, 1942 ರ ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಬಾಂಬೆ ಗೃಹ ಇಲಾಖೆಯು "ಸಂಘವು ತನ್ನನ್ನು ತಾನು

ಪುಟ 10 ಕ್ಕೆ




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್




# ಪ್ರಜಾಪ್ರಭುತ್ವಕ್ಕೆ ಧಿಗ್ಬಂಧನ

**ಇದುವರೆಗೆ ಜನರಿಂದಾಗಿ, ಜನಪ್ರಿಯ ಹೋರಾಟಗಳು ಮತ್ತು ಪ್ರಜಾಸತ್ತಾತ್ಮಕ ಚಳವಳಿಗಳಿಂದಾಗಿ ಪ್ರಜಾಪ್ರಭುತ್ವದ ಭರವಸೆ ಉಳಿದಿತ್ತು. ಆದರೆ, ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ವೇಳೆಗೆ ಆ ಭರವಸೆ ಮಸುಕಾಗಿದೆ. ಎಲ್ಲ ನಿಯಮಗಳನ್ನು ಮತ್ತು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಮತೋಲನ ಮತ್ತು ನಿಯಂತ್ರಣಗಳನ್ನು ವಿಧಿಸುವ ಪ್ರಭುತ್ವದ ಸಂಸ್ಥೆಗಳನ್ನು ಹೊಸಕಿ ಹಾಕುವಂಥ ಪೂರ್ಣ ಪ್ರಮಾಣದ ಸರ್ವಾಧಿಕಾರವನ್ನು ಕಾಣುತ್ತಿದ್ದೇವೆ.**

**ಪ್ರಕಾಶ್ ಕಾರತ್**

(ಲೇಖಕರು ಪೀಪಲ್ಸ್ ಡೆಮಾಕ್ರಸಿ ಪತ್ರಿಕೆಯ ಸಂಪಾದಕರು, ಹಾಗೂ ಸಿಪಿಐ(ಎಂ) ಮಾಜಿ ಪ್ರಧಾನ ಕಾರ್ಯದರ್ಶಿ)

ಇತ್ತೀಚಿನ ವರ್ಷಗಳ ವರೆಗೆ, ಸ್ವಾತಂತ್ರ್ಯ ದಿನದ ಮಹತ್ವದ ಕಾಲಘಟ್ಟಗಳ ಆಚರಣೆ ಸಂದರ್ಭದಲ್ಲಿ ಸಂಸದೀಯ ಪ್ರಜಾಪ್ರಭುತ್ವವು ಸ್ವತಂತ್ರ ಭಾರತದ ಒಂದು ಪ್ರಮುಖ ಸಾಧನೆಯೆಂದು ನಾವು ಹೇಳಿಕೊಳ್ಳಬಹುದಿತ್ತು. 1950ರಲ್ಲಿ ಅಳವಡಿಸಿಕೊಂಡ ಒಂದು ಗಣತಾಂತ್ರಿಕ ಸಂವಿಧಾನವು ರಾಜಕೀಯದಲ್ಲಿ ಜನರ ಭಾಗವಹಿಸುವಿಕೆ ಮತ್ತು ಜನರ ದನಿಗೆ ಅವಕಾಶ ಒದಗಿಸಿತ್ತು. ಅದು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಾರತೀಯ ಜನರ ಆಶೋತ್ತರಗಳನ್ನು ಪ್ರತಿಫಲಿಸಿತ್ತು.

ಬೆಳೆಯುತ್ತಿರುವ ಬಂಡವಾಳಶಾಹಿ ಸಮಾಜದಲ್ಲಿ ಜನತಂತ್ರ ವ್ಯವಸ್ಥೆಯ ಆಧಾರ ತೀರಾ ಸಂಕುಚಿತವಾಗಿದ್ದರೂ, ಮತ್ತು ವರ್ಗ ನಿರ್ಬಂಧಗಳಿದ್ದರೂ, ಭಾರತದಲ್ಲಿ ಆರು ದಶಕಕ್ಕೂ ಹೆಚ್ಚು ಸಮಯದಿಂದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ತನ್ನ ಮಹತ್ವವನ್ನು ಉಳಿಸಿಕೊಂಡು ಬಂದಿದ್ದು ನಿಜಕ್ಕೂ ದೊಡ್ಡ ಸಾಧನೆಯೇ ಸರಿ. ಮುಖ್ಯವಾಗಿ ಜನರಿಂದಾಗಿ ಹಾಗೂ ಜನಪ್ರಿಯ ಹೋರಾಟಗಳು ಮತ್ತು ಪ್ರಜಾಸತ್ತಾತ್ಮಕ ಚಳವಳಿಗಳ ಕಾರಣದಿಂದಾಗಿ ಪ್ರಜಾಪ್ರಭುತ್ವದ ಭರವಸೆ ಉಳಿದಿತ್ತು.

**ಪೂರ್ಣ ಪ್ರಮಾಣದ ಸರ್ವಾಧಿಕಾರ**

ಆದರೆ, ನಾವು ಸ್ವಾತಂತ್ರ್ಯದ 75ನೇ ವರ್ಷ ಆಚರಿಸುತ್ತಿರುವಾಗ, ಪ್ರಜಾಪ್ರಭುತ್ವದ ಭರವಸೆ ಮಸುಕಾಗಿದೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವದ ತಳಹದಿಯಾಗಿ ಸಂವಿಧಾನ ನಮಗೆ ನೀಡಿದ್ದೆಲ್ಲವೂ ಅಪಾಯಕ್ಕೆ ಸಿಲುಕಿದೆ ಹಾಗೂ ಗಂಭೀರ ಆಕ್ರಮಣಕ್ಕೆ ತುತ್ತಾಗಿದೆ. ಪ್ರಜಾಪ್ರಭುತ್ವದ ಎಲ್ಲ ನಿಯಮಗಳನ್ನು ಮತ್ತು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಮತೋಲನ ಮತ್ತು ನಿಯಂತ್ರಣಗಳನ್ನು ವಿಧಿಸುವ ಪ್ರಭುತ್ವದ ಸಂಸ್ಥೆಗಳನ್ನು ಹೊಸಕಿ ಹಾಕುವಂಥ ಪೂರ್ಣ ಪ್ರಮಾಣದ ಸರ್ವಾಧಿಕಾರವನ್ನು ನಾವಿಂದು ಕಾಣುತ್ತಿದ್ದೇವೆ.

2019ರ ಮೇ ತಿಂಗಳಲ್ಲಿ ಇನ್ನೂ ಹೆಚ್ಚಿನ ಬಹುಮತದೊಂದಿಗೆ ಅಧಿಕಾರಕ್ಕೆ ಮರಳಿದ ನಂತರ ಬಿಜೆಪಿ ಏಕ-ಪಕ್ಷ ಸರ್ವಾಧಿಕಾರ ಸ್ಥಾಪಿಸುವ ಗುರಿ ಇಟ್ಟುಕೊಂಡಿದೆ. ಅದಕ್ಕಾಗಿ ಪ್ರತಿಪಕ್ಷದ ಮೇಲೆ ಸಾರಾಸಗಟು ಆಕ್ರಮಣ ನಡೆಸಬೇಕಾಗುತ್ತದೆ. ಸಂಸತ್ತಿನಲ್ಲಿ ಅವರ ಪಾತ್ರವನ್ನು ಬದಿಗೆ ಸರಿಸಲಾಗುತ್ತಿದೆ. ಪ್ರತಿಪಕ್ಷಗಳ ಚುನಾಯಿತ ರಾಜ್ಯ ಸರಕಾರಗಳನ್ನು ಶಾಸಕರ ಖರೀದಿ ಹಾಗೂ ಕೇಂದ್ರೀಯ ಸಂಸ್ಥೆಗಳನ್ನು ಬಳಸುವ ಮೂಲಕ ಅಸ್ಥಿರಗೊಳಿಸಲಾಗುತ್ತಿದೆ. ಅನುಷ್ಠಾನ ನಿರ್ದೇಶನಾಲಯ (ಇ.ಡಿ.), ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ) ಮತ್ತು ಆದಾಯ ತೆರಿಗೆ ಇಲಾಖೆಗಳನ್ನು ಪ್ರತಿಪಕ್ಷ ನಾಯಕರು ಮತ್ತು ಪ್ರತಿಪಕ್ಷ ಆಡಳಿತದ ರಾಜ್ಯಗಳ ಸಚಿವರಿಗೆ ಕಿರುಕುಳ ನೀಡಲು ಆಯುಧವಾಗಿ ಬಳಸಲಾಗುತ್ತಿದೆ.

ಸಂಸತ್ತು ಮತ್ತು ಸಂಸದೀಯ ಕಲಾಪಗಳ ಅಪಮೌಲ್ಯ, ವಿಶೇಷವಾಗಿ ಮೋದಿ ಸರಕಾರದ ಎರಡನೇ ಅವಧಿಯಲ್ಲಿ ಹೆಚ್ಚು ಆಕ್ರಮಣಕಾರಿಯಾಗಿ ಕಾಣಿಸಿದೆ. 2021ರಲ್ಲಿ ಸಂಸತ್ತು ಕೇವಲ 50 ದಿನ ಅಧಿವೇಶನ ನಡೆಸಿದೆ. ಶಾಸನಗಳ ಮೇಲೆ ಚರ್ಚೆ ನಡೆಯುತ್ತಿಲ್ಲ ಎನ್ನುವುದರ ಜೊತೆಯಲ್ಲಿ ಶಾಸನಾತ್ಮಕ ಮಸೂದೆಗಳ ಪರಿಶೀಲನೆಯೂ ಆಗುತ್ತಿಲ್ಲ. ಯುಪಿಎ ಸರಕಾರದ ಅವಧಿಯಲ್ಲಿ ಲೋಕ ಸಭೆಯಿಂದ ಶೇಕಡ 60ರಿಂದ 70 ಮಸೂದೆಗಳು ಸ್ಥಾಯಿ ಸಮಿತಿಯ ಪರಿಶೀಲನೆಗೆ ಹೋಗುತ್ತಿದ್ದವು. ಅದು ಮೋದಿ ಸರಕಾರದ ಮೊದಲ ಅವಧಿಯಲ್ಲಿ ಶೇಕಡ 22ಕ್ಕೆ ಹಾಗೂ ಎರಡನೇ ಅವಧಿಯಲ್ಲಿ ಈ ವರೆಗೆ ಕೇವಲ 13 ಪ್ರತಿಶತಕ್ಕೆ ಇಳಿದಿದೆ. ಇದರೊಂದಿಗೆ ವಿಷಯಗಳನ್ನು ಪ್ರಸ್ತಾಪಿಸುವ ಪ್ರತಿಪಕ್ಷಗಳ ಹಕ್ಕು ಮತ್ತು ಶಾಸನಾತ್ಮಕ ಪ್ರಕ್ರಿಯೆ ವೇಳೆ ಮತದಾನಕ್ಕೆ ಒತ್ತಾಯಿಸುವ ಹಕ್ಕನ್ನು ನಿರಾಕರಿಸುವುದರೊಂದಿಗೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ವಿವಿಧ ಶಾಸನಗಳನ್ನು ಮೇಲ್ಮನೆಯ ಪರಿಶೀಲನೆಗೆ ಒಪ್ಪಿಸದೆ ಹಾಗೂ ಅಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸದೆ ಹಣಕಾಸು ಮಸೂದೆಯಾಗಿ ಘೋಷಿಸುವ ಮೂಲಕ ರಾಜ್ಯ ಸಭೆಯ ಘನತೆಯನ್ನು ಕುಂದಿಸಲಾಗಿದೆ. ಸರಕಾರ ಸರ್ವಾಧಿಕಾರದತ್ತ ಹೆಚ್ಚು ವೇಗವಾಗಿ ಸಾಗುತ್ತಿರುವುದರಿಂದ ಸಂವಿಧಾನದಲ್ಲಿ ಅಡಕವಾಗಿರುವ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರಗಳ ಹರಣವಾಗುತ್ತಿವೆ.

ಭಿನ್ನಮತವನ್ನು ಅಪರಾಧೀಕರಿಸುವುದು ಹಾಗೂ ನಾಗರಿಕ ಸ್ವಾತಂತ್ರ್ಯಗಳನ್ನು ದಮನಿಸುವುದು ಯಾವುದೇ ಸರ್ವಾಧಿಕಾರಿ ಆಡಳಿತದ ಪ್ರಮುಖ ಲಕ್ಷಣಗಳಾಗಿರುತ್ತವೆ. ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನು (ಯುಎಪಿಎ) ಮತ್ತು ದೇಶದ್ರೋಹದ ಕಲಮು ಮುಂತಾದ ಕರಾಳ ಕಾನೂನುಗಳ ಮುಖೇನ ಅದು ಅಭೂತಪೂರ್ವ ಎತ್ತರಕ್ಕೆ ತಲುಪಿದೆ. 2014ರಿಂದ 2020ರ ನಡುವಿನ ಏಳು ವರ್ಷಗಳ ಅವಧಿಯಲ್ಲಿ ಸುಮಾರು 690 ಯುಎಪಿಎ ಪ್ರಕರಣಗಳು ದಾಖಲಾಗಿದ್ದು ಅದರ ಉಪಬಂಧಗಳ ಅಡಿಯಲ್ಲಿ 10,552 ಜನರನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ರಾಜಕೀಯ ಕಾರ್ಯಕರ್ತರು, ನಾಗರಿಕ ಹಕ್ಕುಗಳ ಹೋರಾಟಗಾರರು, ಪತ್ರಕರ್ತರು ಮತ್ತು ಲೇಖಕರು ಇದ್ದಾರೆ. 16 ಪ್ರಮುಖ ಕಾರ್ಯಕರ್ತರು ಮತ್ತು ಬುದ್ಧಿಜೀವಿಗಳು ಯುಎಪಿಎ ಕಾನೂನಿನಡಿ ಮೂರು ವರ್ಷಗಳಿಂದ ಜೈಲಿನಲ್ಲಿರುವ ಭೀಮಾ ಕೋರೆಗಾಂವ್ ಪ್ರಕರಣ ಇದಕ್ಕೊಂದು ಪ್ರಮುಖ ಉದಾಹರಣೆಯಾಗಿದೆ.

ನ್ಯಾಯಾಂಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದನ್ನು ಹಾಗೂ ಕಾರ್ಯಾಂಗದ ಅತಿರೇಕಗಳಿಗೆ ತಡೆ ಹಾಕುವುದನ್ನು ನಿಲ್ಲಿಸುವುದು ಸರ್ವಾಧಿಕಾರಿ ಆಡಳಿತವೊಂದರ ಪ್ರಮುಖ ಲಕ್ಷಣವಾಗಿದೆ. ಸುಪ್ರಿಂ ಕೋರ್ಟ್ ಕಾರ್ಯನಿರ್ವಾಹಕ ನ್ಯಾಯಾಲಯವಾಗಿ ವರ್ತಿಸುವುದು ಹೆಚ್ಚುತ್ತಿದೆ. ಝಾಕಿಯಾ ಜಾಫ್ರಿ ಸಲ್ಲಿಸಿದ ಮೇಲ್ಮನವಿ ಮೇಲೆ ಮತ್ತು ಹಣಕಾಸು ಅಕ್ರಮ ಹಣ ವ್ಯವಹಾರ ತಡೆ (ಪಿಎಂಎಲ್‌ಎ) ಕಾನೂನಿನ ಅಡಿಯಲ್ಲಿ ಜಾರಿ ನಿರ್ದೇಶನಾಲಯ(ಇ.ಡಿ.) ಹೊಂದಿರುವ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಈಚೆಗೆ ನೀಡಿದ ತೀರ್ಪುಗಳು ದೇಶದ ಅತ್ಯುನ್ನತ ನ್ಯಾಯಾಲಯವು ಕಾರ್ಯಾಂಗದ ಆಕ್ರಮಣಗಳಿಂದ ನಾಗರಿಕರ ಬದುಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಹೇಗೆ ವಿಫಲವಾಗುತ್ತಿದೆ ಎನ್ನುವುದನ್ನು ತೋರಿಸಿದೆ.

ಕಳೆದ 75 ವರ್ಷಗಳನ್ನು ಅವಲೋಕಿಸಿದಾಗ ಇಂದಿರಾ ಗಾಂಧಿ 1975 ಜೂನ್‌ನಲ್ಲಿ ಆಂತರಿಕ ತುರ್ತು ಪರಿಸ್ಥಿತಿ ಹೇರಿದ್ದು ದೇಶದಲ್ಲಿ ಪ್ರಜಾಪ್ರಭುತ್ವದ ಮೇಲಿನ ಅತಿ ದೊಡ್ಡ ಆಕ್ರಮಣವಾಗಿ ಕಾಣಿಸುತ್ತದೆ. ಸರ್ವಾಧಿಕಾರದ ಈ ಅವಧಿಯಲ್ಲಿ ಪ್ರತಿಪಕ್ಷಗಳ ನಾಯಕರನ್ನು ಸೆರೆಮನೆಗಳಿಗೆ ತಳ್ಳಲಾಯಿತು, ನಾಗರಿಕ ಹಕ್ಕುಗಳನ್ನು ಅಮಾನತು ವ ಂ ಾ ಡ ಲಾ ಯಿ ತ ು ಹಾಗೂ ಪತ್ರಿಕೆಗಳ ಮೇಲೆ ನಿರ್ಬಂಧಗಳನ್ನು ವಿಧಿಸಲಾಯಿತು. ಇವೆಲ್ಲವೂ 20 ತಿಂಗಳ ಸೀಮಿತ ಅವಧಿಗೆ ಅಸ್ತಿತ್ವದಲ್ಲಿದ್ದವು. ಅದರ ನಂತರ ನಡೆದ ಲೋಕಸಭೆ ಚುನಾವಣೆಗಳಲ್ಲಿ ಜನರು ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದರು. ಪ್ರಜಾಪ್ರಭುತ್ವದ ಮೇಲೆ ಈಗ ನಡೆಯುತ್ತಿರುವ ದಾಳಿ ಹೆಚ್ಚು ಗಂಭೀರವಾದುದೂ ವ್ಯಾ ಪ ಕ ವಾ ದ ು ದ ೂ ಆಗಿದೆ. ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸಿ ಹಾಗೂ ಜಾತ್ಯತೀತತೆ ಮತ್ತು ಒಕ್ಕೂಟ ತತ್ವವನ್ನು ಕಡೆಗಣಿಸುವ ಮೂಲಕ ಗಣರಾಜ್ಯದ ಸ್ವರೂಪವನ್ನೇ ಬದಲಾಯಿಸುವುದು ಅದರ ಉದ್ದೇಶವಾಗಿದೆ.



ಪ್ರಜಾಪ್ರಭುತ್ವದ ಕತ್ತು ಹಿಸುಕುವ ಈ ಅಪಾಯಕಾರಿ ಸರ್ವಾಧಿಕಾರ ದೇಶದ ಮೇಲೆ ಬಿಗಿ ಹಿಡಿತ ಸಾಧಿಸಿರುವುದು ಯಾಕೆ? ಇದೊಂದು ಯಾವುದೋ ದಿಕ್ಚ್ಯುತಿ ಅಥವಾ ಆಕಸ್ಮಿಕ ತಿರುವು ಬಿಂದು ಅಲ್ಲ. ಅಥವಾ ಅದು ಯಾರದೋ ಒಬ್ಬರ ಸರ್ವಾಧಿಕಾರಿ ಧೋರಣೆಯ ಫಲ ಎಂದೂ ಹೇಳಲಾಗದು. ಈ ಸರ್ವಾಧಿಕಾರದ ಕಬಂಧಬಾಹು ಹರಡಿರುವ ಶಕ್ತಿಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ರಾಜಕೀಯ ಪ್ರಜಾಪ್ರಭುತ್ವದ ಬಗ್ಗೆ ಅಂಬೇಡ್ಕರ್ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಇಲ್ಲದೆ ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ ಎಂದು ಸಂವಿಧಾನವನ್ನು ಅಳವಡಿಸಿಕೊಳ್ಳುವ ವೇಳೆ ಡಾ. ಬಿ.ಆರ್. ಅಂಬೇಡ್ಕರ್ ಎಚ್ಚರಿಸಿದ್ದರು. 'ಭಾರತದಲ್ಲಿ ಪ್ರಜಾಪ್ರಭುತ್ವವು ಅಪ್ರಜಾಸತ್ತಾತ್ಮಕವೇ ಆಗಿರುವ ಭಾರತೀಯ ಮಣ್ಣಿನ ಮೇಲ್ಪದರವಷ್ಟೇ' ಎಂದೂ ಅವರು ಎಚ್ಚರಿಸಿದ್ದರು.

ಹಲವು ದಶಕಗಳಿಂದ 'ಚುನಾವಣಾ ಪ್ರಜಾಪ್ರಭುತ್ವ' ಬೆಳೆದು ನಿಂತಿದ್ದಾಗ, ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ ಸಾಧನೆಯ ವಿಚಾರ ಹಿನ್ನೆಲೆಗೆ ಸರಿಯಿತು. ಆಳುವ ವರ್ಗಗಳು ಅನುಸರಿಸಿದ ಅಭಿವೃದ್ಧಿಯ ಬಂಡವಾಳಶಾಹಿ ಪಥವು ವರ್ಗ ಮತ್ತು ಪ್ರಾದೇಶಿಕ ಅಸಮಾನತೆಗಳನ್ನು ಇನ್ನಷ್ಟು ಹೆಚ್ಚಿಸಿತು. ಮೂರು ದಶಕಗಳ ಹಿಂದೆ ಕಾಲಿಟ್ಟ ನವ-ಉದಾರವಾದಿ ನೀತಿಗಳು ಆರ್ಥಿಕ ಅಸಮಾನತೆಗಳು ಹೆಚ್ಚಾಗಲು ಹಾಗೂ ಅಸಹ್ಯಪಡುವಷ್ಟು ಸಂಪತ್ತನ್ನು ಹೊಂದಿದ ಧನಿಕರ ಪ್ರಭುತ್ವ ಕ್ರೋಡೀಕರಣಗೊಳ್ಳಲು ಕಾರಣವಾದವು.

ಸಾಮಾಜಿಕ ರಂಗದಲ್ಲಿ ನೋಡುವುದಾದರೆ, ಭೂಮಾಲಿಕತ್ವ ಮತ್ತು ಬಂಡವಾಳಶಾಹಿ-ಪೂರ್ವ ಸಂಬಂಧಗಳೊಂದಿಗೆ ರಾಜಿ ಮಾಡಿಕೊಂಡ ಬೂರ್ಷ್ವಾ ವರ್ಗವು ಜಾತಿ ದೌರ್ಜನ್ಯ ಹಾಗೂ ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಕೊನೆಗಾಣಿಸಲು ಕೇವಲ ಔಪಚಾರಿಕ ಪ್ರಯತ್ನವನ್ನಷ್ಟೇ ನಡೆಸಿತು. ಆದ್ದರಿಂದ ಅಂಬೇಡ್ಕರ್ ಅವರು ಮುಂಗಂಡಂತೆ ರಾಜಕೀಯ ಪ್ರಜಾಪ್ರಭುತ್ವ ಮತ್ತು ಹೆಚ್ಚುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳ ನಡುವಿನ ವೈರುಧ್ಯವು ಒಂದಲ್ಲ ಒಂದು ಸಮಯದಲ್ಲಿ ಮುನ್ನೆಲೆಗೆ ತಲುಪಲಿದೆ.

ಪುಟ 15 ಕ್ಕೆ

# ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ರಕ್ಷಣೆಗಾಗಿ ಹೋರಾಟಗಳು ಮತ್ತು ಪ್ರತಿರೋಧ

ಪುಟ 8 ರಿಂದ

ಕಾನೂನಿನೊಳಗೆ ನಿಷ್ಠುರವಾಗಿ ಇಟ್ಟುಕೊಂಡಿದೆ ಮತ್ತು ನಿರ್ದಿಷ್ಟವಾಗಿ ಆಗಸ್ಟ್ 1942 ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರ ಉಳಿದಿದೆ''' ಎಂದು ದಾಖಲಿಸಿದೆ.

**ಹೀಗಿದೆ ಸಾವರ್ಕರ್ ಅವರ ನಾಚಿಕೆಗೆಟ್ಟ ದಾಖಲೆ**

ಈ ವಾಸ್ತವವನ್ನು ಮರೆಮಾಚಲು ಅವರು ಕಮ್ಯುನಿಸ್ಟರ ವಿರುದ್ಧ ಅಪಪ್ರಚಾರ ಮಾಡಿದರು. ದೇಶವು ಕ್ವಿಟ್ ಇಂಡಿಯಾ ಚಳುವಳಿಯ 50 ನೇ ವರ್ಷಾಚರಣೆಯನ್ನು ಆಚರಿಸುತ್ತಿದ್ದಾಗ, 1992 ರ ಆಗಸ್ಟ್ 9/10 ರ ಮಧ್ಯರಾತ್ರಿಯಲ್ಲಿ ಸಂಸತ್ತಿನ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ, ಭಾರತದ ಅಂದಿನ ರಾಷ್ಟ್ರಪತಿ ಡಾ ಶಂಕರ್ ದಯಾಳ್ ಶರ್ಮಾ ಅವರು "ಕಾನ್ಪುರ್, ಜಮ್ಶೆಡ್‌ಪುರದ ಮತ್ತು ಅಹಮದಾಬಾದ್ ನಲ್ಲಿ 'ಗಿರಣಿಗಳಲ್ಲಿ ದೊಡ್ಡ ಪ್ರಮಾಣದ ಮುಷ್ಕರದ ನಂತರ ದೆಹಲಿಯಿಂದ 5 ಸೆಪ್ಟೆಂಬರ್ 1942 ರಂದು, ಲಂಡನ್‌ನಲ್ಲಿದ್ದ ಸೆಕ್ರೆಟರಿ ಆಫ್ ಸ್ಟೇಟ್ ಗೆ ರವಾನೆ ಮಾಡಿದ ಒಂದು ಸುದ್ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಬಗ್ಗೆ ಮಾಡಿದ ವರದಿಯಲ್ಲಿ "ಅದರ ಅನೇಕ ಸದಸ್ಯರ ನಡವಳಿಕೆಯು ಯಾವಾಗಲೂ ಸ್ಪಷ್ಟವಾಗಿದ್ದನ್ನು ಅಂದರೆ, ಇದು ಬ್ರಿಟಿಷ್ ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂಬುದನ್ನುಸಾಬೀತುಪಡಿಸುತ್ತದೆ" ಎಂದು ಹೇಳಲಾಗಿತ್ತು" ಎಂದು ಹೇಳಿದರು.

ಇದಕ್ಕೆ ವ್ಯತಿರಿಕ್ತವಾಗಿ, ಕಮ್ಯುನಿಸ್ಟರ ಬಗ್ಗೆ ಬಿಡಿ, ಜವಾಹರಲಾಲ್ ನೆಹರೂರವರ ಉಲ್ಲೇಖ ಕೂಡ ಈ ಸರ್ಕಾರಿ ಪ್ರಚಾರಗಳಲ್ಲಿ ಬಹು ಕಡಿಮೆ. ಇದರಲ್ಲಿ ಆಶ್ಚರ್ಯವೇನಿಲ್ಲ ಏಕೆಂದರೆ ನೆಹರೂ ಅವರು ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತದ ಅತ್ಯಂತ ಉಗ್ರ ಪ್ರತಿಪಾದಕರಾಗಿದ್ದರು, ಭಾರತೀಯ ಸಂವಿಧಾನದ ರಚನೆಗೆ ಮತ್ತು ಸ್ವತಂತ್ರ ಭಾರತವನ್ನು ಆಧುನಿಕ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಿಸಲು ಕಾರಣವಾದ ಪ್ರಮುಖ ಚರ್ಚೆಗಳು ಮತ್ತು ನಿರ್ಣಯಗಳನ್ನು ಸಾದರ ಪಡಿಸಿದವರು. ಇವು ಸಾವರ್ಕರ್ ಮತ್ತು ಆರ್‌ಎಸ್‌ಎಸ್ ಪ್ರತಿಪಾದಿಸಿದ ಉಗ್ರ ಅಸಹಿಷ್ಣು ಫ್ಯಾಸಿಸ್ಟ್ ತೆರನ 'ಹಿಂದುತ್ವ ರಾಷ್ಟ್ರ' ಎಂಬ ಕಣ್ಣೋಟವನ್ನು ನೇರವಾಗಿಯೇ ವಿರೋಧಿಸುವಂತದ್ದು. ಆರ್‌ಎಸ್‌ಎಸ್‌ನ ರಾಜಕೀಯ ಅಂಗವಾಗಿ ಬಿಜೆಪಿ ಇಂದು ಈ ಫ್ಯಾಸಿಸ್ಟ್ ತೆರನ ಹಿಂದುತ್ವ ರಾಷ್ಟ್ರದ ಈಡೇರಿಕೆಗೆ ತೀವ್ರ ಧಾವಂತ ನಡೆಸಿದೆ.

**ಭಾರತದ ಸಂವಿಧಾನದ ಮೇಲೆ ಹಲ್ಲೆ**

ಈ ಫ್ಯಾಸಿಸ್ಟ್ ತೆರನ ಯೋಜನೆಯು ಯಶಸ್ವಿಯಾಗಬೇಕಾದರೆ ಸಂವಿಧಾನದಿಂದ ಸ್ಥಾಪಿಸಲ್ಪಟ್ಟ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದ ಮೇಲೆ ಪ್ರಹಾರ ಮಾಡಬೇಕಾಗಿದೆ, ಅದನ್ನು ದುರ್ಬಲಗೊಳಿಸಬೇಕಾಗಿದೆ ಮತ್ತು ಅಂತಿಮವಾಗಿ ನಾಶಪಡಿಸುವ ಅಗತ್ಯವಿದೆ ಎಂಬುದು ಸ್ಪಷ್ಟ. ಸಿಪಿಐ(ಎಂ) 23 ನೇ ಮಹಾಧಿವೇಶನ ಗಮನಿಸಿದಂತೆ, ವಿಶೇಷವಾಗಿ 2019 ರಲ್ಲಿ ಮೋದಿ ಸರ್ಕಾರವು ಮರಳಿದ ನಂತರ, ನಮ್ಮ ಸಂವಿಧಾನದ ನಾಲ್ಕು ಮೂಲ ಸ್ತಂಭಗಳಾದ ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟ ತತ್ವ, ಸಾಮಾಜಿಕ ನ್ಯಾಯ, ಆರ್ಥಿಕ ಸಾರ್ವಭೌಮತ್ವ–ಇವುಗಳ ಮೇಲೆ ತೀವ್ರ ಏಟುಗಳನ್ನು ಕೊಡಲಾಗುತ್ತಿದೆ.

ಸಂವಿಧಾನದ ಮೇಲಿನ ಈ ಏಟುಗಳ ಜೊತೆಗೆ ಎಲ್ಲಾ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳು ಮತ್ತು ಪ್ರಾಧಿಕಾರಗಳನ್ನು ದುರ್ಬಲಗೊಳಿಸುವುದು ಕೂಡ ಅವರಿಗೆ ಅಗತ್ಯವಾಗಿದೆ. ಏಕೆಂದರೆ ಇವುಗಳನ್ನು ಸಂವಿಧಾನದ ಕಾರ್ಯಶೀಲತೆಯನ್ನು ಕಾಪಾಡಲು ಮತ್ತು ಜನಗಳಿಗೆ ಸಂವಿಧಾನದ ಖಾತರಿಗಳು ತಲುಪುವಂತೆ ಖಾತ್ರಿಪಡಿಸಲು ತಪಾಸಣೆ ಮತ್ತು ಸಮತೋಲನಗಳ ಸಾಧನಗಳಾಗಿ ವಿನ್ಯಾಸಗೊಳಿಸಲಾಗಿದೆ.

ಇವುಗಳಲ್ಲಿ ಅತ್ಯಂತ ಪ್ರಮುಖವಾಗಿರುವ ಸಂಸತ್ತು ತೀವ್ರವಾಗಿ ದುರ್ಬಲಗೊಳ್ಳುತ್ತಿದೆ. ಅದರ ಎಲ್ಲಾ ಸ್ಥಾಪಿತ ಕಾರ್ಯವಿಧಾನಗಳು, ಸಮಿತಿಗಳ ಮೂಲಕ ಕಾರ್ಯನಿರ್ವಹಣೆ ಮತ್ತು ಕಲಾಪಗಳ ವಿಧಾನಗಳನ್ನು ತೊರೆಯಲಾಗುತ್ತಿದೆ. ಯಾವುದೇ ಚರ್ಚೆ ಅಥವಾ ಪರಿಶೀಲನೆಯಿಲ್ಲದೆ ವಿವೇಚನಾರಹಿತ ಬಹುಮತದಿಂದ ಶಾಸನಗಳನ್ನು ಮಾಡಲಾಗುತ್ತಿದೆ. ಪ್ರಸಕ್ತ ಅಧಿವೇಶನದಲ್ಲಿ, ಅಂಕೆಯಿಲ್ಲದೆ ಏರುತ್ತಿರುವ ಹಣದುಬ್ಬರ ಮತ್ತು ನಿರುದ್ಯೋಗ ನಾಗಾಲೋಟದಂತಹ ಜನರ ಜ್ವಲಂತ ಸಮಸ್ಯೆಗಳ ಬಗ್ಗೆ ಒಂದು ಗಣನೀಯ




ವ್ಯಂಗ್ಯಚಿತ್ರ ಕೃಪೆ: ಮಂಜುಲ್

ಚರ್ಚೆ ನಡೆಯಬೇಕೆಂದು ಒತ್ತಾಯಿಸಿದ 'ಅಪರಾಧ'ಕ್ಕಾಗಿ ಹಿಂದೆಂದೂ ಕಂಡಿರದ ರೀತಿಯಲ್ಲಿ 27 ಸಂಸದರನ್ನು ಅಮಾನತುಗೊಳಿಸಲಾಗಿದೆ. ಸರಿಯಾಗಿ ಕಾರ್ಯನಿರ್ವಹಿಸದ ಸಂಸತ್ತು ಅಪಾಯಕಾರಿ ಏಕೆಂದರೆ, ಜನತೆಯ ಸಾರ್ವಭೌಮತೆ ಭಾರತೀಯ ಸಂವಿಧಾನದ ಕೇಂದ್ರ ಅಂಶ – ಜನತೆಯ ಸಾರ್ವಭೌಮತ್ವವನ್ನು ಸಂಸದರು ಜನರಿಗೆ ಜವಾಬ್ದಾರರಾಗಿರುವುದರ ಮೂಲಕ ಮತ್ತು ಸರ್ಕಾರವು ಸಂಸತ್ತಿಗೆ ಜವಾಬ್ದಾರರಾಗಿರುವ ಮೂಲಕ ಚಲಾಯಿಸಲಾಗುತ್ತದೆ. ಸಂಸತ್ತನ್ನು ದುರ್ಬಲಗೊಳಿಸುವುದು ಎಂದರೆ ಜನರ ಸಾರ್ವಭೌಮತ್ವವನ್ನು ಶೂನ್ಯಗೊಳಿಸುವುದು ಮತ್ತು ಸರ್ಕಾರವು ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ತಪ್ಪಿಸಿಕೊಂಡು ಮತ್ತು ಫ್ಯಾಸಿಸ್ಟ್ ತೆರನ ವಿಧಾನಗಳನ್ನು ಬಳಸಿಕೊಂಡು ನಿರಂಕುಶ ಸರ್ವಾಧಿಕಾರದತ್ತ ಕಡೆಗೆ ದೇಶಕ್ಕೆ ಕೇಂಡುಂಟು ಮಾಡುವ ರೀತಿಯಲ್ಲಿ ಚಲಿಸುವುದು..

ಸುಮಾರು ಮೂರು ವರ್ಷಗಳಿಂದ ಸಂವಿಧಾನದ ಕಲಮು 370 ಮತ್ತು 35 ಎ ರದ್ದತಿಗೆ ಸವಾಲುಗಳು; ಸಿಎಎ; ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಚುನಾವಣಾ ಬಾಂಡ್‌ಗಳು ನಮ್ಮ ಸಂವಿಧಾನದ ಉಲ್ಲಂಘನೆ ಎಂಬ ಸವಾಲು ಇತ್ಯಾದಿಗಳು ವಿಚಾರಣೆಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಾಗದೇಯೇ ಉಳಿದಿವೆ. ನ್ಯಾಯಾಂಗದ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯವು ತೀವ್ರವಾಗಿ ರಾಜಿಗೊಳಗಾಗಿರುವಾಗ, ಸಾಂವಿಧಾನಿಕ ನಿಬಂಧನೆಗಳು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ನಾಗರಿಕ ಸ್ವಾತಂತ್ರ್ಯಗಳ ಖಾತರಿಗಳ ಅನುಷ್ಠಾನದ ಮೇಲೆ ನ್ಯಾಯಾಂಗದ ಮೇಲ್ವಿಚಾರಣೆ ಅಸ್ತಿತ್ವದಲ್ಲೇ ಇಲ್ಲದಂತಾಗುತ್ತದೆ.

ಹಾಗೆಯೇ, ಚುನಾವಣಾ ಆಯೋಗದ ಸ್ವಾತಂತ್ರ್ಯ ಮತ್ತು ನಿಷ್ಪಕ್ಷಪಾತತೆಯು ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಒಂದು ಸಮ ಮಟ್ಟದ ಅವಕಾಶವಿರುವ, ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಚಿತಪಡಿಸಿಕೊಳ್ಳುವ ಮೂಲೆಗಲ್ಲಾಗಿದೆ. ಇದು ರಾಜಿಗೊಳಗಾದಾಗ ಸರ್ಕಾರಗಳು ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನು ಮತ್ತು ಜನಾದೇಶವನ್ನು ಪ್ರತಿಬಿಂಬಿಸದೇ ಹೋಗುತ್ತವೆ.

ಸಿಬಿಐ, ಇಡಿ ಮುಂತಾದ ಕೇಂದ್ರೀಯ ಸಂಸ್ಥೆಗಳು ಮೋದಿ ಸರಕಾರದ ರಾಜಕೀಯ ಅಜೆಂಡಾವನ್ನು ಅನುಷ್ಠಾನಕ್ಕೆ ತರುವ ಅಸ್ತ್ರವಾಗುತ್ತಿರುವುದನ್ನು ಇಡೀ ದೇಶವೇ ನೋಡುತ್ತಿದೆ. ಪ್ರತಿಪಕ್ಷ ನಾಯಕರನ್ನು ಗುರಿಯಾಗಿಸುವುದು, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರ್ಕಾರಗಳನ್ನು ಅಸ್ಥಿರಗೊಳಿಸುವುದು, ಚುನಾವಣೆಯಲ್ಲಿ ಸೋತ ನಂತರವೂ ಬಿಜೆಪಿ ಸರ್ಕಾರ ರಚಿಸಬಹುದು ಎಂದು ಖಚಿತಪಡಿಸಿಕೊಳ್ಳಲು ಪಕ್ಷಾಂತರಗಳ ಬಲವಂತ ಪ್ರಜಾಪ್ರಭುತ್ವದ ಅಣಕವಾಗಿದೆ, ಮತ್ತು ಅದನ್ನು ನಾಶಪಡಿಸುತ್ತಿವೆ.

**ಉನ್ಮತ್ತ ಕೋಮು ಧ್ರುವೀಕರಣ**

ನಮ್ಮ ಸಾಂವಿಧಾನಿಕ ವ್ಯವಸ್ಥೆಯ ಇಂತಹ ದೊಡ್ಡ ಪ್ರಮಾಣದ ನಾಶದೊಂದಿಗೆ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಧ್ವಂಸಗೊಳಿಸಲು ಕೋಮು ಧ್ರುವೀಕರಣದ ದುಷ್ಟ ಪ್ರಚಾರಗಳು ನಡೆಯುತ್ತಿವೆ. 'ಇವು ವಿಷಪೂರಿತ ದ್ವೇಷ ಮತ್ತು ಭಯೋತ್ಪಾದನೆಯನ್ನು ಹರಡಿಸುವ ಆಧಾರದ ಮೇಲೆ ನಡೆಯುತ್ತಿವೆ. ಬುಲ್ಡೋಜರ್ ರಾಜಕೀಯ'ವನ್ನು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿ ದೊಡ್ಡ ಪ್ರಮಾಣದಲ್ಲಿ ನಿಯೋಜಿಸುತ್ತಿರುವುದು ಹಲವಾರು ರಾಜ್ಯಗಳಲ್ಲಿ ಹಿಂಸಾಚಾರಕ್ಕೆ ದಾರಿ ಮಾಡಿಕೊಡುತ್ತಿದೆ. ಮತ್ತು ಹೊಸ ಸಂಸತ್ತಿನ ಕಟ್ಟಡದ ಮೇಲೆ ರಾಷ್ಟ್ರೀಯ ಲಾಂಛನವನ್ನು ಅನಾವರಣಗೊಳಿಸುವಾಗ ಹಿಂದೂ ಧಾರ್ಮಿಕ ಆಚರಣೆಗಳನ್ನು ನಡೆಸಿರುವುದು ಭಾರತೀಯ ಪ್ರಭುತ್ವ ಮತ್ತು ಸರ್ಕಾರವನ್ನು ಹಿಂದುತ್ವದೊಂದಿಗೆ ಗುರುತಿಸುತ್ತದೆಯೇ ಹೊರತು ಭಾರತದ ಸಂವಿಧಾನದೊಂದಿಗೆ ಅಲ್ಲ ಎಂಬುದನ್ನು ಸೂಚಿಸುತ್ತದೆ.

**ಸರ್ವಾಧಿಕಾರಿ ಹಲ್ಲೆಗಳು**

ಹೀಗೆ ಕೋಮು ಧ್ರುವೀಕರಣದ ಇಂತಹ ಬೆದರಿಕೆಯು ಕೇಂಡು ತರುವ ರೀತಿಯಲ್ಲಿ ಏರುತ್ತಿರುವುದರೊಂದಿಗೆ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ಅಭೂತಪೂರ್ವ ಹಲ್ಲೆಗಳು ನಡೆಯುತ್ತಿವೆ. ತೀಸ್ತಾ ಸೆಟಲ್ವಾಡ್ ಅವರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟಿರುವ ರೀತಿಯಲ್ಲಿ, ಭೀಮಾ ಕೋರೆಗಾಂವ್ ಬಂಧಿತರು ಮತ್ತು ಹಲವಾರು ಪತ್ರಕರ್ತರು ಮತ್ತು ಇತರರು ಕೂಡ ಕರಾಳ ಕಾನೂನುಗಳ ಅಡಿಯಲ್ಲಿ ಜೈಲಿನಲ್ಲಿ ಕೊಳೆಯುತ್ತಿರುವುದರಲ್ಲಿ ಇದನ್ನು ಕಾಣಬಹುದು. ಭಿನ್ನಾಭಿಪ್ರಾಯದ ಪ್ರತಿಯೊಂದು ಅಭಿವ್ಯಕ್ತಿಯನ್ನೂ 'ದೇಶ–ವಿರೋಧಿ' ಎಂದು ಪರಿಗಣಿಸಲಾಗುತ್ತದೆ, ಕಣ್ಗಾವಲು ಪ್ರಭುತ್ವದ 'ದುಷ್ಟ ಕಣ್ಣು'ಗಳ ನಿಗಾವಣೆಗೆ ಗುರಿ ಮಾಡಲಾಗುತ್ತದೆ.

**ವೈಚಾರಿಕತೆ ಮತ್ತು ತಾರ್ಕಿಕತೆಯ ಮೇಲೆ ಹಲ್ಲೆ**

ಈ ಹಿಂದುತ್ವದ ಕಥನ ಯಶಸ್ವಿಯಾಗಲು, ಭಾರತೀಯ ಇತಿಹಾಸವನ್ನು ಈ ಫ್ಯಾಸಿಸ್ಟ್ ತೆರನ ಯೋಜನೆಯ ಸೈದ್ಧಾಂತಿಕ ಹೂರಣವನ್ನು ಪೋಷಿಸಿಕೊಳ್ಳುವಂತೆ ಹೊಂದಿಸಿಕೊಳ್ಳಲು ಮರುಲೇಖನ ಮಾಡುವುದು ಅತ್ಯಗತ್ಯವಾಗುತ್ತದೆ. ಆದ್ದರಿಂದ, ಶಿಕ್ಷಣ ವ್ಯವಸ್ಥೆಯನ್ನು ಪರಿಷ್ಕರಿಸಲಾಗುತ್ತಿದೆ, ವೈಚಾರಿಕತೆಯ ಬದಲಿಗೆ ಚಿಂತನೆ ಮತ್ತು ಅಭ್ಯಾಸದಲ್ಲಿ ಅವೈಚಾರಿಕತೆಯನ್ನು ಉತ್ತೇಜಿಸಲಾಗುತ್ತದೆ; ವೈಜ್ಞಾನಿಕ ಮನೋಭಾವವನ್ನು ನಿರಾಕರಿಸಿ ಕುರುಡು ನಂಬಿಕೆ/ ಅಂಧಶ್ರದ್ಧೆ /ಪುರಾಣವನ್ನು ಪ್ರಾಯೋಜಿಸಲಾಗುತ್ತದೆ; ಭಾರತೀಯ ಸಂಸ್ಕೃತಿಯ ಸಮ್ಮಿಶ್ರ ವಿಕಸನದ ಸ್ಥಾನದಲ್ಲಿ ಏಕಸಂಸ್ಕೃತಿಯ ಏಕರೂಪದ ಕಥನವನ್ನು ಹೇರುವ ಪ್ರಯತ್ನ ನಡಸಲಾಗುತ್ತದೆ. ಇದು ಭಾರತದ ಶ್ರೀಮಂತ ವೈವಿಧ್ಯತೆ ಮತ್ತು ಬಹುತ್ವವನ್ನು ನಾಶಪಡಿಸುತ್ತದೆ ಮತ್ತು ಇತಿಹಾಸದ ಸ್ಥಾನದಲ್ಲಿ ಹಿಂದೂ ಪುರಾಣವನ್ನು ಹಾಗೂ ತತ್ವಜ್ಞಾನದ ಸ್ಥಾನದಲ್ಲಿ ಹಿಂದೂ ಧರ್ಮಶಾಸ್ತ್ರವನ್ನು ಕೂರಿಸುತ್ತದೆ.

**ಬಲಿಷ್ಟ ಜನತಾ ಪ್ರತಿರೋಧವನ್ನು ಹರಿಯಬಿಡಬೇಕು**

ಜನರ ನಡುವೆ ಈ ರೀತಿಯ ಹಿಂದುತ್ವ ಅಸ್ಮಿತೆಯ ಮಂಟಪವನ್ನು ನಿಲ್ಲಿಸಿ, ಅದನ್ನು ಜೀವನೋಪಾಯದ ಮೇಲೆ ದೈನಂದಿನ ದಾಳಿಗೆ ಒಳಗಾಗುವ ನಮ್ಮ ಜನರ ಶೋಚನೀಯ ಜೀವನ ಪರಿಸ್ಥಿತಿಗಳನ್ನು ನೇಪಥ್ಯಕ್ಕೆ ತಳ್ಳಲು ಬಳಸಿಕೊಳ್ಳಲಾಗುತ್ತಿದೆ. ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಸಂವಿಧಾನವನ್ನು ರಕ್ಷಿಸುವ ಮತ್ತು ಬಲಪಡಿಸುವ ಕೆಲಸವನ್ನು, ಬೆಲೆ ಏರಿಕೆ, ನಿರುದ್ಯೋಗ, ಹಸಿವು, ಅಪೌಷ್ಟಿಕತೆ ಮುಂತಾದ ಜನಗಳ ದಿನನಿತ್ಯದ ಸಮಸ್ಯೆಗಳ ವಿರುದ್ಧ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ್ತು ಪ್ರಜಾಪ್ರಭುತ್ವ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳು ಮತ್ತು ಜಾತ್ಯತೀತತೆಯ ರಕ್ಷಣೆಗಾಗಿ ದೊಡ್ಡ ಪ್ರಮಾಣದ ಜನಪ್ರತಿರೋಧ ಮತ್ತು ಜನಹೋರಾಟಗಳ ಮೂಲಕ ಕೈಗೊಳ್ಳಬೇಕಾಗಿದೆ, ಈ ಹೋರಾಟಗಳನ್ನು ತೀಕ್ಷ್ಣಗೊಳಿಸಬೇಕಾಗಿದೆ.

ಪ್ರಬಲವಾದ ಜನಪರ ಹೋರಾಟಗಳ ಮೂಲಕ ಸಿಪಿಐ(ಎಂ)ನ ಸ್ವತಂತ್ರ ಬಲವನ್ನು ಹೆಚ್ಚಿಸುವುದು, ಎಡ ಶಕ್ತಿಗಳ ಏಕತೆಯನ್ನು ಬಲಪಡಿಸುವುದು; ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸುವುದು ಮತ್ತು ಹಿಂದುತ್ವ ಕೋಮುವಾದದ ವಿರುದ್ಧ ಜಾತ್ಯತೀತ ಶಕ್ತಿಗಳನ್ನು ವಿಶಾಲ ಸ್ವರೂಪದಲ್ಲಿ ಸಜ್ಜುಗೊಳಿಸುವುದು– ಈ ವಿಧಾನದಲ್ಲಿ ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವವನ್ನು ಆಚರಿಸಬೇಕಾಗಿದೆ, ಆಮೂಲಕ ನಮ್ಮ ಸಾಂವಿಧಾನಿಕ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ರಕ್ಷಿಸಬೇಕಾಗಿದೆ. ಈ ಉದ್ದೇಶದ ಸಾಧನೆಗಾಗಿ ಆಗಸ್ಟ್ 15 ರಂದು, ಬ್ರಿಟಿಷ್ ಆಳ್ವಿಕೆಯಿಂದ ಭಾರತದ ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ದಿನ ದೇಶಪ್ರೇಮದ ಹೆಮ್ಮೆಯಿಂದ ಸಿಪಿಐ(ಎಂ) ಪಕ್ಷದ ಎಲ್ಲಾ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುತ್ತದೆ ಮತ್ತು ನಮ್ಮ ಸಂವಿಧಾನದ ಪೀಠಿಕೆಯ ಮೇಲೆ ಪ್ರತಿಜ್ಞೆ ಕೈಗೊಳ್ಳಲಾಗುತ್ತದೆ.

ಇಂದು ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಧ್ವಂಸಮಾಡಿ ಒಂದು ಫ್ಯಾಸಿಸ್ಟ್ ತೆರನ ಹಿಂದುತ್ವ ರಾಷ್ಟ್ರವನ್ನು ಹೇರುವ ಹುಚ್ಚು ಪ್ರಯತ್ನಗಳಿಂದ ಸ್ವಾತಂತ್ರ್ಯಕ್ಕಾಗಿ ನಾವೆಲ್ಲ ಒಟ್ಟು ಸೇರಿ, ಹೋರಾಟವನ್ನು ಗಟ್ಟಿಗೊಳಿಸೋಣ.

**ಅನು: ಮುರಳಿ**





# ಸಾಮೂಹಿಕ ಅತ್ಯಾಚಾರ ಎಸಗಿದವರಿಗೆ ಬಿಡುಗಡೆಯ ಭಾಗ್ಯ ಭಾರತಮಾತೆಯದೆಂತ ಸೌಭಾಗ್ಯ!!!

ಕೆ.ಎಸ್. ವಿಮಲ

ಅಲ್ಲೊಂದು ಸಂಭ್ರಮಾಚರಣೆ, ಗೋದ್ರಾ ಜೈಲಿನಿಂದ 11 ಜನ ಅಪರಾಧಿಗಳನ್ನು ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ದಿನ ಸ್ವತಂತ್ರಗೊಳಿಸಲಾಯಿತು. ಅವರು ದೇಶ ರಕ್ಷಣೆಗಾಗಿ ಗಡಿಗಳಲ್ಲಿ ಶತ್ರು ಸೈನಿಕರ ಜೊತೆ ಕಾದಾಡಿದವರೆಂದು ಭಾವಿಸಿದಿರಾ? ಅಲ್ಲಲ್ಲ,, ಅವರು ಸಾಮೂಹಿಕ ಅತ್ಯಾಚಾರವೆಸಗಿ, ಹಸುಗೂಸಿನ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು ತೃಷೆ ತೀರಿಸಿಕೊಂಡವರು. ಅವರನ್ನು ಗುಜರಾತ್ ಸರಕಾರ 'ಸನ್ನಡತೆ'ಯ ಕಾರಣಕ್ಕೆ ಮತ್ತು 15 ವರ್ಷ ಕಾರಾಗೃಹ ಅನುಭವಿಸಿದವರೆಂದು ಬಿಡುಗಡೆ ಮಾಡಿದೆ. ಗೋದ್ರಾ ಜೈಲಿನ ಹೊರಗೆ ಮಹಿಳೆಯರು!! ಅವರಿಗೆ ಆರತಿ ಬೆಳಗಿ, ತಿಲಕ ಹಚ್ಚಿ ಅವರ ಶೌರ್ಯ ಪರಾಕ್ರಮಗಳನ್ನು ಗುರುತಿಸಿದ್ದಾರೆ. ಹ್ಞಾಂ?. ರಾಜಸ್ಥಾನದ ಭಾಂವ್ರಿ ದೇವಿಯ ಪ್ರಕರಣವೂ ಹೀಗೇ ಅಲ್ಲವೇ ನಡೆದಿದ್ದು. ಅಲ್ಲಿಯೂ ಬಿ.ಜೆ.ಪಿ.ಯ ಅಪ್ಪಟ ಸಂಸ್ಕಾರವಂತ ಮಹಿಳೆಯರು ಆರತಿ ಬೆಳಗಿ ಹೂಮಾಲೆ ಹಾಕಿ ಸಾಮೂಹಿಕ ಅತ್ಯಾಚಾರಿಗಳನ್ನು ಅಲ್ಲಿನ ಕೋರ್ಟ್ ಬಿಡುಗಡೆ ಮಾಡಿದಾಗ ಬರಮಾಡಿಕೊಂಡಿದ್ದರು.

2002ರ ಕುಖ್ಯಾತ ಪ್ರಕರಣವಿದು: ಬಿಲ್ಕಿಸ್ ಬಾನು ಎಂಬ ಐದು ತಿಂಗಳ ಗರ್ಭಿಣಿ ಹೆಣ್ಣು ಮಗಳು ಮತ್ತು ಇತರ ಮಹಿಳೆಯರ ಸಾಮೂಹಿಕ ಅತ್ಯಾಚಾರವೆಸಗಿ, ಮೂರು ವರ್ಷದ ಕಂದಳ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಕೊಂದು, ಅಪರಾಧ ಸಾಬೀತಾಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದವರನ್ನು ಗುಜರಾತ್ ಸರಕಾರ ಬಿಡುಗಡೆ ಮಾಡಿದೆ. ಇದು ಗುಜರಾತಿನ ಕುಖ್ಯಾತ ಗೋದ್ರಾ ಮತ್ತು ಗೋದ್ರೋತ್ತರ ನರಮೇಧಗಳ ಸಂದರ್ಭದ ಘಟನೆ. ಬಿಲ್ಕಿಸ್ ಬಾನು, 21 ವರ್ಷದ ಯುವತಿ. ಮೂರು ವರ್ಷದ ಮಗಳು ಮತ್ತು ಐದು ತಿಂಗಳ ಕೂಸು ಗರ್ಭದಲ್ಲಿ ಹೊತ್ತು ಧರ್ಮದ ನಶೆ ಏರಿದ ದಾಳಿಕೋರರ ದಾಳಿ ಆಕ್ರಮಣಗಳಿಂದ ತಪ್ಪಿಸಿಕೊಳ್ಳಲು ಕುಟುಂಬದ ಇತರ ಸದಸ್ಯರ ಜೊತೆ ಊರು ತೊರೆದು ಹೊರಟು ನಿಂತವಳು. ದುರಾಕ್ರಮಿಗಳು ಮಾರಕಾಸ್ತ್ರಗಳನ್ನು ಹಿಡಿದು ಅವರು ಅವಿತಿಟ್ಟುಕೊಂಡಿದ್ದ ಸ್ಥಳಕ್ಕೆ ನುಗ್ಗಿ ಇಡೀ ಕುಟುಂಬದ ಮೇಲೆ ಎರಗುತ್ತಾರೆ. ಆಕೆಯ ಕಂಕುಳಲ್ಲಿದ್ದ ಮೂರು ವರ್ಷದ ಕಂದಮ್ಮನನ್ನು ಕಿತ್ತೆಸೆದು ಅದರ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಸಾಯಿಸುತ್ತಾರೆ? ಪುರುಷ ಸದಸ್ಯರನ್ನು ಬಡಿಯುತ್ತಾರೆ. ಬಿಲ್ಕಿಸ್ ಳ ತಾಯಿಯ ಮೇಲೂ ಅತ್ಯಾಚಾರ, ಸಾಮೂಹಿಕ ಅತ್ಯಾಚಾರ. ಬರ್ಬರತೆಗೆ ಇಡೀ ದೇಶ ಬೆಚ್ಚಿ ಬಿದ್ದಿತ್ತು.

ತಮ್ಮ ಮೇಲಾದ ಇಂತಹ ಬರ್ಬರ ಕೃತ್ಯದ ನಂತರವೂ ದೇಶದ ಸಂವಿಧಾನ, ನೆಲದ ಕಾನೂನುಗಳ ಮೇಲೆ ಗೌರವವಿಟ್ಟು ಬಿಲ್ಕಿಸ್ ಮತ್ತು ಆಕೆಯ ಪತಿ ಕಾನೂನು ಹೋರಾಟ ನಡೆಸುತ್ತಾರೆ. ಮಾರ್ಚ್ 3 2002 ರಲ್ಲಿ ನಡೆದ ಈ ಘಟನೆಯಲ್ಲಿ 14 ಜನರನ್ನು ಕೊಲ್ಲಲಾಗಿದೆ. ಬಿಲ್ಕಿಸ್ ಮತ್ತು ಆಕೆಯ ಪತಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ನ್ಯಾಯಕ್ಕಾಗಿ ಮೊರೆ ಇಡುತ್ತಾರೆ. ದೇಶದ ಸರ್ವೋಚ್ಚ ನ್ಯಾಯಾಲಯ ಸಿ.ಬಿ.ಐ ಮೂಲಕ ತನಿಖೆಗೆ ಆದೇಶ ನೀಡುತ್ತದೆ ಮತ್ತು 2004ರಲ್ಲಿ ಪ್ರಕರಣದ ವಿಚಾರಣೆಯನ್ನು ಗುಜರಾತಿನಿಂದ ಮಹಾರಾಷ್ಟ್ರಕ್ಕೆ ವರ್ಗಾಯಿಸುತ್ತದೆ. ಕಾರಣ ಕೇಳಬೇಕಿಲ್ಲ ಅಲ್ಲವೇ, ಬಿಲ್ಕಿಸ್ ಬಾನು ಆರೋಪಿಗಳ ಕಡೆಯಿಂದ ಬೆದರಿಕೆ ಎದುರಿಸುತ್ತಾಳಾದ್ದರಿಂದ. 2018ರ ಜನವರಿ 21ರಂದು ಸಿ.ಬಿ.ಐ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಯು.ಡಿ.ಸಾಲ್ವಿಯವರು ಮುಂಬೈನಲ್ಲಿ ಇನ್ ಕ್ಯಾಮೆರಾ ವಿಚಾರಣೆ ನಡೆಸಿ 13 ಜನರನ್ನು ಅಪರಾಧಿಗಳೆಂದು ಪ್ರಕಟಿಸಿ, 11 ಜನರಿಗೆ ಜೀವಾವಧಿ ಶಿಕ್ಷೆ ವಿಧಿಸುತ್ತಾರೆ. 2017 ರಲ್ಲಿ ಬಾಂಬೇ ಹೈಕೋರ್ಟ್ ಈ ಶಿಕ್ಷೆಯನ್ನು ಎತ್ತಿ ಹಿಡಿಯಿತು.

2019ರಲ್ಲಿ ಬಿಲ್ಕಿಸ್ ಬಾನುಗೆ 50 ಲಕ್ಷ ಪರಿಹಾರ ನೀಡಬೇಕೆಂದು ಸರ್ವೋಚ್ಚ ನ್ಯಾಯಾಲಯ ಆದೇಶಿಸಿದೆ. 2002 ರ ನರಮೇಧದ ನಂತರ ದೊರೆತ ಮೊದಲ ಪರಿಹಾರವದು. ಹಾಗೆ ಆದೇಶಿಸುವಾಗ 'ನಡೆಯಬಾರದ ಘಟನೆ ನಡೆದು ಹೋಗಿದೆ, ಆದರೀಗ ರಾಜ್ಯ ಸರಕಾರ ಅದಕ್ಕೆ ಪರಿಹಾರ ನೀಡಲೇಬೇಕು' ಎಂದು ಅಂದಿನ ಮುಖ್ಯ ನ್ಯಾಯಾಧೀಶರಾದ ರಂಜನ್ ಗೊಗೋಯ್, ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ, ಮತ್ತು ಸಂಜೀವ್ ಖನ್ನಾ ಹೇಳಿದ್ದರು.

ಈಗ ದೇಶ 75ನೇ ಸ್ವಾತಂತ್ರ್ಯದ ಅಮೃತ ವರ್ಷಾಚರಣೆಯನ್ನು ಆಚರಿಸುತ್ತಿರುವಾಗ, ದೇಶದ ನೆಲದ ಕಾನೂನುಗಳನ್ನು, ನೆಲಕ್ಕೊತ್ತಿ ನಿಂತು, ಮಹಿಳೆಯರ ಘನತೆಯ ಬದುಕಿನ ಮಾರ್ಗಗಳನ್ನು ನಿರ್ಲಜ್ಜ, ನಿರ್ದಯ ತೀರ್ಮಾನಗಳ ಮೂಲಕ ಮುಚ್ಚುತ್ತ, ದೆಹಲಿಯ ಕೆಂಪು ಕೋಟೆಯ ಮೇಲೆ ನಿಂತು ಇನ್ನು 25 ವರ್ಷಗಳ ನಂತರದ ಕನಸನ್ನು ಬಿತ್ತುವುದು ಆಷಾಡಭೂತಿತನವಲ್ಲವೇ?

ದೇಶದ ಮಹಿಳೆಯರ ಘನತೆಗೆ ಕುಂದುಂಟಾಗದಂತಹ ವ್ಯವಸ್ಥೆಯ ಕುರಿತು ಸ್ವಾತಂತ್ರ್ಯದ 'ಅಮೃತ ಮಹೋತ್ಸವ'ದ ಧ್ವಜಾರೋಹಣ ಮಾಡಿ ಕೆಂಪು ಕೋಟೆಯ ಮೇಲೆ ಭಾಷಣ ಪ್ರಧಾನ ಮಂತ್ರಿಗಳು ಕುಟ್ಟುತ್ತಿರುವಾಗ ಅತ್ತ ಅವರ ತವರು, ಅವರು ಮುಖ್ಯಮಂತ್ರಿಯಾಗಿದ್ದಾಗಲೇ ನಡೆಸಿದ ಮಾನವ ಮಾರಣಹೋಮದ ರಾಜ್ಯದಲ್ಲಿ ಅತ್ಯಾಚಾರಿಗಳೆಂದು ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆ ಅನುಭವಿಸುತ್ತಿದ್ದ 11 ಜನರನ್ನು ಬಿಡುಗಡೆ ಮಾಡಲಾಗಿದೆ! ಶತಮಾನದ ಮುನ್ನೋಟದ ಕನಸು ಬಿತ್ತಿದ ನರೇಂದ್ರ ಮೋದಿಯವರ ಆಡಳಿತದಲ್ಲಿ ಇನ್ನು ಮುಂದೆ ಈ ದೇಶದಲ್ಲಿ ಮಹಿಳೆಯರ ಘನತೆಯನ್ನು ಗುರುತಿಸುವುದು ಹೀಗೆಂದು ಭಾವಿಸಬಹುದೇನೋ??

ಹನ್ನೊಂದು ಜನರಿಗೆ ಸಿ.ಬಿ.ಐ. ವಿಶೇಷ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಮುಂಬೈ ಹೈಕೋರ್ಟ್ ಕೂಡಾ ಎತ್ತಿ ಹಿಡಿದಿತ್ತು. ತಾನು 15 ವರ್ಷ ಶಿಕ್ಷೆ ಅನುಭವಿಸಿದ ಕಾರಣದಿಂದ ತನ್ನನ್ನು ಬಿಡುಗಡೆ ಮಾಡಬೇಕೆಂದು ಅಪರಾಧಿಗಳಲ್ಲೊಬ್ಬ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿದನಂತೆ!. ಅದನ್ನು ಪರಿಶೀಲಿಸಲು ಸರ್ವೋಚ್ಚ ನ್ಯಾಯಾಲಯ ಗುಜರಾತ್ ಸರಕಾರಕ್ಕೆ ತಿಳಿಸಿತಂತೆ. ಅದಕ್ಕಾಗಿ ಸಮಿತಿಯೊಂದನ್ನು ನೇಮಕ ಮಾಡಿ ಅತ್ಯಾಚಾರಿಗಳಿಗೆ ಬಿಡುಗಡೆಯ ಭಾಗ್ಯ ಕರುಣಿಸಲಾಗಿದೆ. ಇದೇ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಅತಿ ಮುಖ್ಯ ಸಂಗತಿ ಜನವರಿ 23, 2014ರಂದು ಕೇಂದ್ರ ಸರಕಾರ ಹೊರಡಿಸಿದ ಆದೇಶದ ಪ್ರಕಾರ (ಅನೆಕ್ಷ್ಚರ್ 1/ ಕಲಮು 4ಸಿ) 'ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಕೊಲೆ ಮುಂತಾದ ಹೀನ ಕೃತ್ಯಗಳನ್ನೆಸಗಿ ಶಿಕ್ಷೆಗೆ ಒಳಗಾದವರು ಪೂರ್ಣ ಪ್ರಮಾಣದ ಶಿಕ್ಷೆಯನ್ನು ಅನುಭವಿಸಬೇಕು. ಅವರು ಕ್ಷಮಾದಾನಕ್ಕೆ ಅರ್ಹರಲ್ಲ'. ಇದು ಕೇಂದ್ರ ಸರಕಾರ ಹೊರಡಿಸಿದ ಆದೇಶ.

ನೆಲದ ಕಾನೂನಿಗೆ ಮಾನ್ಯತೆ ಇಲ್ಲ, ಸಂವಿಧಾನಕ್ಕೆ ಗೌರವವಿಲ್ಲ, ತಾವೇ ಆಡಿದ ಮಾತಿಗೂ ಬೆಲೆ ಕೊಟ್ಟುಕೊಳ್ಳದ ಇಂತಹ ನಿರ್ಲಜ್ಜರನ್ನು ದೇಶ ರಕ್ಷಕರೆಂದು ಕರೆಯುವುದಕ್ಕಿಂತ ವಿಪರ್ಯಾಸವಿನ್ನೊಂದಿರಲು ಸಾಧ್ಯವೇ?? ಅಥವಾ ದೇಶದಾದ್ಯಂತ ಹಿಂದುತ್ವವಾದೀ ಧರ್ಮ ನಶೆಯಲ್ಲಿ ತೇಲಾಡುತ್ತಿರುವ ಮಂತ್ರಿ ಮಹೋದಯರು, ಶಾಸಕರು, ಬಿ.ಜೆ.ಪಿ.ಯ ನಾಯಕರುಗಳು ಕೊಡುತ್ತಿರುವ ಪ್ರಚೋದನಕಾರಿ ಹೇಳಿಕೆಗಳ ಜಾರಿಗೆ ಬೇಕಾದ ಸಾಮೂಹಿಕ ಅತ್ಯಾಚಾರಿ ಪಡೆಗಳ ನಿರ್ಮಾಣ ನಡೆಯುತ್ತಿರಬಹುದು ಎಂದು ಭಾವಿಸಬಹುದೇ?



ಸತೀಶ್ ಆಚಾರ್ಯ, ಫೇಸ್‌ಬುಕ್

# “ಇದೆಂತಾ ವಿವೇಚನೆ? ಯಾವ ಆಧಾರದಲ್ಲಿ ಬಿಡುಗಡೆ?–ಸುಭಾಷಿಣಿ ಅಲಿ


ಬಿಲ್ಕಿಸ್ ಬಾನೊ ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ 11 ಅಪರಾಧಿಗಳ ಬಿಡುಗಡೆ ಆಘಾತಕಾರಿ ಸುದ್ದಿಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಸುಭಾಷಿಣಿ ತೀವ್ರ ಖೇದ ವ್ಯಕ್ತಪಡಿಸಿದ್ದಾರೆ. ಕೆಂಪು ಕೋಟೆಯಿಂದ ಮಹಿಳೆಯರಿಗೆ ಗೌರವ ನೀಡಬೇಕು ಎಂದು ನಮ್ಮ ಪ್ರಧಾನಿ ನಿನ್ನೆ ಕರೆ ನೀಡಿದ್ದರು. ಬಿಲ್ಕಿಸ್ ಬಾನೊ ಪ್ರಕರಣವು ಅಂತಹ ಒಂದು ಪ್ರಕರಣವಾಗಿದ್ದು, ಇದರಲ್ಲಿ ಎಲ್ಲಾ ಸಾಕ್ಷ್ಯಗಳಿವೆ. ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲಾಯಿತು ಎಂದು ಅವರು ಎನ್‌ಡಿಟಿವಿಯೊಂದಿಗೆ ಮಾತನಾಡುತ್ತ ನೆನಪಿಸಿದ್ದಾರೆ. ನಿಜ. ಗುಜರಾತಿನಲ್ಲಿ ಇರುವ ಕಾನೂನಿನ ಪ್ರಕಾರ ಯಾರಿಗಾದರೂ ಜೀವಾವಧಿ ಶಿಕ್ಷೆ ವಿಧಿಸಿದ್ದರೆ, ಅಂತವರಿಂದ ಕ್ಷಮಾದಾನಕ್ಕೆ ಅರ್ಜಿ ಬಂದಿದ್ದರೆ 14 ವರ್ಷಗಳ ನಂತರ ಅವರನ್ನು ಬಿಡುಗಡೆ ಮಾಡುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು. ಗುಜರಾತ್ ಸರ್ಕಾರ ವಿವೇಚನೆ ಬಳಸಿ ಅವರನ್ನು ಬಿಡುಗಡೆ ಮಾಡಿದೆ ಎನ್ನಲಾಗಿದೆ. ಸರ್ಕಾರ ತನ್ನ ವಿವೇಚನೆಯನ್ನು ಹೇಗೆ ಬಳಸಿಕೊಂಡಿದೆ? ಯಾವ ವಿವೇಚನೆಯ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿದೆ? ಎಂದು ಅವರು ಪ್ರಶ್ನಿಸಿದ್ದಾರೆ.

ಸುಭಾಷಿಣಿ ಅಲಿ ಗುಜರಾತ್ ಸರಕಾರದ ಈ ನಿರ್ಧಾರದ ಬಗ್ಗೆ ಟಿಪ್ಪಣಿ ಮಾಡುತ್ತ, ಇಲ್ಲಿ ಮೂರು ವಿಷಯಗಳಿವೆ ಎಂದು ಹೇಳಿದರು. ಸರ್ಕಾರದ ಬೆಂಬಲಿಗರಾಗಿದ್ದರೆ, ಅವರು ಅತ್ಯಾಚಾರವೆಸಗಿದರೂ, ಕೊಂದು ಹಾಕಿದರೂ ಅವರನ್ನು ಬಿಟ್ಟು ಬಿಡಲಾಗುತ್ತದೆ, ಸಾಕಷ್ಟು ರಿಯಾಯಿತಿ ನೀಡಲಾಗುತ್ತದೆ ಎಂಬ ಸಂದೇಶವು ಖಂಡಿತವಾಗಿಯೂ ಹೋಗುತ್ತದೆ; ಇದು ತುಂಬಾ ಅಪಾಯಕಾರಿ,ಅದೂ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿರುವ ಸಮಾಜದಲ್ಲಿ.

ಎರಡನೆಯದಾಗಿ, ಪ್ರಧಾನಿಯವರು ಒಂದು ಮಾತು ಹೇಳುತ್ತಾರೆ, ಆದರೆ ಅದಕ್ಕೆ ತದ್ವಿರುದ್ಧವಾಗಿ ನಡೆಯುತ್ತಿದೆ ಎಂಬ ಸಂದೇಶ ರವಾನೆಯಾಗುತ್ತಿದೆ. ಇದರಿಂದಾಗಿ ಜನ ಪ್ರಧಾನಿಗಳ ಹೇಳಿಕೆಗಳ ಬಗ್ಗೆ ಏನೆಂದು ಯೋಚಿಸುತ್ತಾರೆ?

ಮೂರನೆಯ ವಿಷಯವೆಂದರೆ ಈ ಎಲ್ಲಾ ಅಪರಾಧಿಗಳು ಬಿಲ್ಕಿಸ್ ಬಾನೊ ತನ್ನ ಪತಿಯೊಂದಿಗೆ ವಾಸಿಸುವ ಅದೇ ಹಳ್ಳಿಯಲ್ಲಿ ವಾಸಿಸುತ್ತಿದ್ದಾರೆ. ಆಕೆಗೆ ನಿನ್ನೆಯಿಂದ ಕರೆಗಳು ಬರುತ್ತಿವೆ, ಆಕೆ

ಪುಟ 14 ಕ್ಕೆ



ವ್ಯಂಗ್ಯಚಿತ್ರ ಕೃಪೆ: ಸ್ಯಾನಿಟರಿ ಪ್ಯಾನಲ್ಸ್, ಫೇಸ್‌ಬುಕ್

# ಇದು ಅಮೃತ ಕಾಲ........(ವ್ಯಂಗ್ಯಚಿತ್ರಕಾರರು ಕಂಡಂತೆ)

**ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ದೇಶಾದ್ಯಂತ ಸಂಭ್ರಮೋಲ್ಲಾಸದಿಂದ ಆಚರಿಸಲಾಗಿದೆ. ಕೆಂಪು ಕೋಟೆಯಿಂದ ಪ್ರಧಾನ ಮಂತ್ರಿಗಳು ಸ್ವಾತಂತ್ರ್ಯದ ಶತಮಾನೋತ್ಸವದತ್ತ ಭಾರತದ ಮುನ್ನಡೆಯ ಬಗ್ಗೆ ಮಾತಾಡಿದ್ದಾರೆ. ಇದಕ್ಕೆ ಸ್ವಲ್ಪವೇ ಮೊದಲು ರಾಜಸ್ತಾನದಲ್ಲಿ 9 ವರ್ಷದ ಬಾಲಕ ಇಂದರ್ ಮೇಘ್ವಾಲ್‌ನ ಸಾವಿನ ಸುದ್ದಿ, ಪ್ರಧಾನಿ ಭಾಷಣ ಮುಗಿಯುವ ವೇಳೆಗೆ ಅಹಮದಾಬಾದಿನ ಗೋಧ್ರಾ ಜೈಲಿನಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಅಪರಾಧ ಸಾಬೀತಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಹನ್ನೊಂದು ಮಂದಿಗೆ ಕ್ಷಮಾದಾನದ ಸುದ್ದಿ ಬಂದಿವೆ. ಇದಕ್ಕೆ ಮೊದಲು 'ಹರ್‌ಘರ್ ತಿರಂಗಾ'ದ ಸಂಭ್ರಮದ ನಡುವೆಯೇ ಹಲವು ಕಳವಳಕಾರೀ ಸುದ್ದಿಗಳು –ಇವೆಲ್ಲ ಕೇವಲ ಕಾಕತಾಳೀಯವೋ, ಅಥವ ನಮ್ಮ ಮುಂದಿರುವ ಅಮೃತ ಕಾಲದ ಪ್ರತೀಕಗಳೋ?– ಈ ಎಲ್ಲ ಬೆಳವಣಿಗೆಗಳ ಬಗ್ಗೆ ದೇಶದ ವ್ಯಂಗ್ಯಚಿತ್ರಕಾರರ ಸ್ಪಂದನೆಗಳ ಒಂದು ನೋಟ:**

ಪ್ರಧಾನ ಮಂತ್ರಿಗಳು ಕೆಂಪು ಕೋಟೆಯಿಂದ ಭ್ರಷ್ಟಾಚಾರ ಮತ್ತು ವಂಶ ರಾಜಕಾರಣ ದೇಶದ ಮುಂದಿರುವ ಎರಡು ಅತಿ ದೊಡ್ಡ ಪ್ರಶ್ನೆಗಳು ಎಂದರು.

"ನಾನು ಭ್ರಷ್ಟರನ್ನು ಬಿಡುವುದಿಲ್ಲ"




"ಅವರು ನಿಮ್ಮ ಪಕ್ಷ ಸೇರುವ ವರೆಗೆ?"

(ಅಲೋಕ್ ನಿರಂತರ್, ಫೇಸ್ ಬುಕ್)

" ಭ್ರಷ್ಟಾಚಾರ ದೇಶವನ್ನು ಗೆದ್ದಲುಗಳಂತೆ ಟೊಳ್ಳಾಗಿಸುತ್ತಿದೆ" ಎಂದರು ಪ್ರಧಾನಿಗಳು





"ಅವುಗಳಲ್ಲಿ ಕೆಲವು ಹೊಸದರಂತೆ ಕಾಣುತ್ತಿವೆ"
(ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್)

ನಿಜ, ಅಚ್ಛೇ ದಿನ್‌ಗಳ 15ಲಕ್ಷ ರೂ. ನಂತರ ಮಧ್ಯಪ್ರದೇಶದ ವ್ಯಾಪಂ ನಿಂದ ಕರ್ನಾಟಕದ ಡಬಲ್ ಇಂಜಿನ್ ಸರಕಾರದ 40ಶೇ. ಕಮಿಷನ್ ವರೆಗೆ, ನಡುವೆ ಚುನಾವಣಾ ಬಾಂಡ್‌ಗಳಂತ ಹತ್ತು ಹಲವು ಗೆದ್ದಲುಗಳು ಹೊಸದಾಗಿ ಸೇರಿಕೊಂಡಿವೆ ...
ಡೈನೆಸ್ಟಿ ಪಾಲಿಟಿಕ್ಸ್ ವರ್ಸಸ್ ಕ್ರೋನಿಯಿಸಂ ಅಂದರೆ ವಂಶ ರಾಜಕೀಯ ಕೀಳೋ ಬಂಟ ಬಂಡವಾಳಶಾಹೀ ರಾಜಕೀಯವೋ ಎಂಬ ಚರ್ಚೆಯಂತೂ ಇತ್ತೀಚೆಗೆ ಇನ್ನೂ ಜೋರಾಗಿದೆ.

***

ಭಾರತ ಇನ್ನು 25 ವರ್ಷಗಳಲ್ಲಿ, ಅಂದರೆ ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗುತ್ತದೆ ಎಂದು ಪ್ರಧಾನಿಗಳು ಹೇಳಿದ್ದಾರೆ.
ಇದು ಜನಗಳಿಗೆ ನೀಡಿರುವ ಆಶ್ವಾಸನೆಯೋ ಅಥವ ..

"ಕಾನೂನು ಸುವ್ಯವಸ್ಥೆ"ಗೆ ನೀಡಿರುವ ಬುಲ್‌ಡೋಜರ್ ರಾಜಕೀಯದ ಗಡುವು?




"ನೋಡ್ರಪ್ಪಾ! ನಾವೊಂದು ಸಮಯದ ಗಡುವನ್ನು ಪಾಲಿಸಬೇಕಾಗಿದೆ!"
(ಸಜಿತ್ ಕುಮಾರ್, ಡೆಕ್ಕನ್‌ಹೆರಾಲ್ಡ್)

***

ಕೆಂಪು ಕೋಟೆಯಲ್ಲಿ ಪ್ರಧಾನ ಮಂತ್ರಿಗಳು "ಒಂದಿಲ್ಲೊಂದು ಕಾರಣದಿಂದ ನಮ್ಮೊಳಗೆ ಒಂದು ಎಂತಹ ವಿಕೃತಿ ಬಂದಿದೆಯೆಂದರೆ, ನಮ್ಮ ನಡೆ–ನುಡಿಗಳಲ್ಲಿ, ನಮ್ಮ ಕೆಲವು ಶಬ್ದಗಳಲ್ಲಿ.. ನಾವು ನಾರಿಯರ ಅಪಮಾನ ಮಾಡುತ್ತೇವೆ. ನಾವು ಸ್ವಭಾವದಿಂದ, ಸಂಸ್ಕಾರದಿಂದ, ದೈನಂದಿನ ಜೀವನದಲ್ಲಿ ನಾರಿಯರನ್ನು ಅಪಮಾನಿತರನ್ನಾಗಿ ಮಾಡುವ ಪ್ರತಿಯೊಂದು ಮಾತಿನಿಂದ ಮುಕ್ತಿಯ ಸಂಕಲ್ಪ ಮಾಡಬಲ್ಲೆವೆಯೇ?"
ಎಂದು ಉದ್ಗರಿಸುತ್ತಿರುವಾಗಲೇ, ಇತ್ತ ಅವರ ಸ್ವಂತ ರಾಜ್ಯದ ಸ್ವಂತ ಪಕ್ಷದ ಸರಕಾರ 11 ಅತ್ಯಾಚಾರಿಗಳಿಗೆ ಕ್ಷಮಾದಾನ ನೀಡಿ ಬಿಡುಗಡೆ ಮಾಡಿದೆ.

"ನಾರೀಮುಕ್ತಿ"




(ಎಂಅಲಿ, ಫೇಸ್‌ಬುಕ್)

ಅಚ್ಛೇ ದಿನ್‌ಗಳ **ಬೇಟಿ ಬಚಾವೊ** ಅಮೃತ ಕಾಲದಲ್ಲಿ,,,




( ಪಿ.ಮಹಮ್ಮದ್, ವಾರ್ತಾಭಾರತಿ)

ಇನ್ನು 75ರಿಂದ 100 ರತ್ತ ನಡೆಯ ಸಂಭ್ರಮ.

ಇದೇ ಅಮೃತದ ಮೊದಲ ಸವಿಯಾದರೆ, ದೂರವುಳಿಯುವುದೇ ಒಳ್ಳೆಯದು
(ಇ.ಪಿ.ಉನ್ನಿ, ಇಂಡಿಯನ್ ಎಕ್ಸ್ ಪ್ರೆಸ್)




ಮೂರು ವಾರಗಳ ಹಿಂದೆ ರಾಜಸ್ತಾನದ ಜಲೋರ್ ಜಿಲ್ಲೆಯ ಸುರಾನಾ ಗ್ರಾಮದ ಖಾಸಗಿ ಶಾಲೆಯಲ್ಲೊಂದರಲ್ಲಿ ಮೇಲ್ಜಾತಿ ಶಿಕ್ಷಕರಿಗೆಂದು ಇಟ್ಟಿದ್ದ ಮಡಕೆಯಲ್ಲಿದ್ದ ನೀರು ಕುಡಿದನೆಂದು ಅಮಾನವೀಯವಾಗಿ ಥಳಿಸಲ್ಪಟ್ಟ 9 ವರ್ಷದ ದಲಿತ ವಿದ್ಯಾರ್ಥಿ ಇಂದರ್ ಮೇಘ್ವಾಲ್ ಸಾವನ್ನಪ್ಪಿದ ಸುದ್ದಿ ದೇಶದಲ್ಲಿ 'ಹರ್ ಘರ್ ತಿರಂಗಾ' ದ ಸಂಭ್ರಮದ ನಡುವೆ ಬಂದಿದೆ.

"ನಾವು ಈ ಮಡಕೆಯಿಂದ ನೀರು ಕುಡಿಯುವಷ್ಟು ಸ್ವತಂತ್ರರೇ?"
(ಮಂಜುಲ್, ವೈಬ್ಸ್ ಆಫ್ ಇಂಡಿಯ)





ಸಾಮಾಜಿಕ ಪ್ರಜಾಪ್ರಭುತ್ವದ ತಳಪಾಯವಿಲ್ಲದೆ ರಾಜಕೀಯ ಪ್ರಜಾಪ್ರಭುತ್ವ ಬಹಳ ದಿನ ಉಳಿಯದು, ಸಾಮಾಜಿಕ ಪ್ರಜಾಪ್ರಭುತ್ವವೆಂದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವವನ್ನು ಗುರುತಿಸುವ ಜೀವನ ಮಾರ್ಗ ಎಂದಿದ್ದ ಅವರು ಈ ಸುದ್ದಿಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು?




"ಅಂತೂ ನೀನು ಸ್ವಾತಂತ್ರ್ಯ ಪಡೆದೆ"
(ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ)


ಸಾಮಾಜಿಕ ಪ್ರಜಾಪ್ರಭುತ್ವ ಕಟ್ಟುವಲ್ಲಿ 75 ವರ್ಷಗಳ ಸಾಧನೆಯೇನು?
ಅರ್ಧ ತುಂಬಿದೆ ಅಥವ ಅರ್ಧ ಖಾಲಿ?




"ನಮಗೆ ಅದು ಸದಾ ಪೂರ್ಣ ಖಾಲಿ, ಸಾರ್!"

(ಆರ್. ಪ್ರಸಾದ್, ಇಕನಾಮಿಕ್ ಟೈಮ್ಸ್)

5 ಜಿ ಕಾಲದ ಸಮಾಜದ ಈ ಅಸ್ಪೃಶ್ಯತೆ




(ದಿನೇಶ್ ಕುಕ್ಕುಜಡ್ಕ, ಪ್ರಜಾವಾಣಿ)


***

'ಹರ್ ಘರ್ ತಿರಂಗಾ' (ಮನೆ–ಮನೆಯಲ್ಲಿ ತ್ರಿವರ್ಣ ಬಾವುಟ) ಅಭಿಯಾನದಲ್ಲಿ 20ರೂ. ಕೊಟ್ಟು ತಿರಂಗಾ ಖರೀದಿಸದಿದ್ದರೆ ರೇಷನ್ ಕೊಡುವುದಿಲ್ಲ ಎಂದು ಹರ್ಯಾಣದಲ್ಲಿ ಬೆದರಿಸಲಾಗಿದೆ ಎಂಬುದು ದೊಡ್ಡ ಸುದ್ದಿಯಾಯಿತು ಉತ್ತರಾಖಂಡದ ಆಳುವ ಪಕ್ಷದ ಅಧ್ಯಕ್ಷರು ಯಾವ ಮನೆಗಳ ಮೇಲೆ ತಿರಂಗಾ ಹಾರಿಸಿಲ್ಲವೋ ಅಂತಹ ಮನೆಗಳ ಫೋಟೋ ತನಗೆ ಬೇಕು ಎಂದು ಹೇಳಿರುವುದಾಗಿಯೂ ವರದಿಯಾಗಿದೆ.




"ಕ್ಷಮಿಸು ಮಗಾ, ಇವತ್ತು ಇದನ್ನು ಮಾತ್ರ ಕೊಳ್ಳಲು ಸಾಧ್ಯವಾಯಿತು"
(ಸತೀಶ ಆಚಾರ್ಯ)

ಇದು ಕೆಲವರ ಅಧಿಕಾರಶಾಹೀ ವರ್ತನೆಯಿಂದಾಗಿ ಇರಬಹುದೇನೋ ಆದರೂ ಸರಕಾರೀ ಮಾರಾಟ ಈ ಅಮೃತಕಾಲದ ಪ್ರಮುಖ ಲಕ್ಷಣವಾಗಿಯೇ ಇದೆ, ಇರುತ್ತದೆ ಎಂಬುದರಲ್ಲಿ ಬಹಳಷ್ಟು ಸತ್ಯಾಂಶಗಳು ಇವೆಯಲ್ಲವೇ?



(ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್)

# ಕೊಲೆ ಮತ್ತು ಸಾಮೂಹಿಕ ಅತ್ಯಾಚಾರದ 11 ಅಪರಾಧಿಗಳ ಬಿಡುಗಡೆ: ಅತ್ಯಂತ ಅನ್ಯಾಯಪೂರ್ಣ ಮಹಿಳಾ–ವಿರೋಧಿ ನಿರ್ಧಾರ–ಎಐಡಿಡಬ್ಲ್ಯುಎ

ಗೋದ್ರಾ ಘಟನೆಯ ನಂತರ ನಡೆದ ಕೋಮು ಹತ್ಯಾಕಾಂಡದಲ್ಲಿ ಬಿಲ್ಕಿಸ್ ಬಾನೊ ಪ್ರಕರಣದಲ್ಲಿ 14 ಜನರ ಕೊಲೆ ಮತ್ತು ಸಾಮೂಹಿಕ ಅತ್ಯಾಚಾರದ ಅಪರಾಧಿಗಳ 11 ಜನರನ್ನು ಬಿಡುಗಡೆ ಮಾಡಿರುವುದನ್ನು ಅಖಿಲ ಭಾರತ ಜನಔಅಧೀ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಇಂತಹ ಘೋರ ಮತ್ತು ಹಿಂಸಾತ್ಮಕ ಅಪರಾಧ ಎಸಗಿದ, ವಿಚಾರಣಾ ಕೋರ್ಟ್ ಮತ್ತು ಹೈಕೋರ್ಟ್‌ನಿಂದ ಜೀವಾವಧಿ ಶಿಕ್ಷೆಗೊಳಗಾದ ಈ 11 ಮಂದಿಯನ್ನು ಗುಜರಾತ್ ಸರ್ಕಾರ 1992 ರ ಅದರ ಕ್ಷಮಾದಾನ ನೀತಿಯ ಅಡಿಯಲ್ಲಿ ಅವರು 15 ವರ್ಷಗಳ ಜೈಲಿನಲ್ಲಿ ಪೂರ್ಣಗೊಳಿಸಿದ್ದಾರೆ ಎಂದು ಬಿಡುಗಡೆ ಮಾಡಿರುವುದು ಆಕ್ರೋಶಕಾರಿ ಮತ್ತು ಆಘಾತಕಾರಿಯಾಗಿದೆ ಎಂದು ಅದು ಹೇಳಿದೆ.

ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯ ಸಂಪೂರ್ಣ ಘಟನೆಯು ಆ ಸಮಯದಲ್ಲಿ ಐದು ತಿಂಗಳ ಗರ್ಭಿಣಿಯಾಗಿದ್ದ ಬಿಲ್ಕಿಸ್ ಬಾನೊ ಅವರ ಕಣ್ಣುಗಳ ಮುಂದೆ ನಡೆಯಿತು. ಅದರ ಹೊರತಾಗಿಯೂ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲಾಯಿತು ಮತ್ತು ಆಕೆಯ ತಾಯಿ ಮತ್ತು ಆಕೆಯ ಕುಟುಂಬದ ಇತರ ಮೂವರು ಮಹಿಳೆಯರು ಸಾಮೂಹಿಕ ಅತ್ಯಾಚಾರಕ್ಕೊಳಗಾದ ಭೀಕರತೆಗೆ ಸಾಕ್ಷಿಯಾಗಬೇಕಾಯಿತು ಮತ್ತು ಆಕೆಯ ಮೂರು ವರ್ಷದ ಮಗಳು ಮತ್ತು ಇತರ 13 ಮಂದಿಯನ್ನು 30 ರಿಂದ 40 ಜನರ ಗುಂಪೊಂದು ಉದ್ದೇಶಪೂರ್ವಕವಾಗಿ ಸಾಯಿಸಿತು. ಮುಸ್ಲಿಮರ ವಿರುದ್ಧ ನಡೆಸಲಾಗುತ್ತಿದ್ದ ಹತ್ಯಾಕಾಂಡದಿಂದ ತಪ್ಪಿಸಿಕೊಳ್ಳಲು ಹೊಲವೊಂದರಲ್ಲಿ ಅಡಗಿಕೊಳ್ಳಲು ಯತ್ನಿಸುತ್ತಿದ್ದಾಗ ಅವರ ಮೇಲೆ ಕುಡುಗೋಲು, ಕತ್ತಿ ಮತ್ತು ಕೋಲುಗಳಿಂದ ಕ್ರೂರವಾಗಿ ಹಲ್ಲೆ ನಡೆಸಿದರು. ಅಂತಿಮವಾಗಿ 19 ಮಂದಿಯ ಮೇಲೆ ಕೊಲೆ ಮತ್ತು ಸಾಮೂಹಿಕ ಅತ್ಯಾಚಾರದ ಆರೋಪ ಹೊರೊಸಲಾಯಿತು. ವಿಶೇಷ ನ್ಯಾಯಾಲಯವು ಏಳು ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿತು, ಒಬ್ಬ ಆರೋಪಿ ವಿಚಾರಣೆಯ ಸಮಯದಲ್ಲಿ ಸಾವನ್ನಪ್ಪಿದರು. ಅಂತಿಮವಾಗಿ ಶಿಕ್ಷೆಗೊಳಗಾದ ಈ 11 ಮಂದಿಯ ವಿರುದ್ಧ ನಿಸ್ಸಂಶಯವಾಗಿ ಅಗಾಧ ಪುರಾವೆಗಳಿವೆ.

ಆರೋಪಿಗಳಲ್ಲಿ ಒಬ್ಬರಾದ ರಾಧೇಶ್ಯಾಮ್ ಷಾ ಅವರು ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿದ್ದರು ಮತ್ತು ದುರದೃಷ್ಟವಶಾತ್ ಗುಜರಾತ್ ಸರ್ಕಾರವು ತನ್ನ ಪ್ರಕರಣವನ್ನು 1992 ರ ಪರಿಹಾರ ನೀತಿಯ ಅಡಿಯಲ್ಲಿ ಎರಡು ತಿಂಗಳೊಳಗೆ ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ ಎಂದು ಉಲ್ಲೇಖಿಸುವುದು ಪ್ರಸ್ತುತವಾಗಿದೆ. 1992 ರ ಉಪಶಮನ ನೀತಿಯು ಸಿಬಿಐ ನ್ಯಾಯಾಲಯವು ನಿರ್ಧರಿಸಿದ ಕೊಲೆ ಪ್ರಕರಣಗಳನ್ನು ಹೊರತುಪಡಿಸಲಿಲ್ಲ ಆದರೆ ನಂತರದ 2014 ರ ನೀತಿಯು ಇದನ್ನು ಬದಲಾಯಿಸುತ್ತದೆ ಎಂಬುದನ್ನು ಕೂಡ ಗಮನಿಸುವುದು ಮುಖ್ಯವಾಗಿದೆ. ತರುವಾಯ ಗುಜರಾತ್ ಸರ್ಕಾರವು ಬಿಲ್ಕಿಸ್ ಬಾನೋ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಎಲ್ಲರನ್ನು ಬಿಡುಗಡೆಯ ಪ್ರಶ್ನೆಯನ್ನು ಪರಿಶೀಲಸಲು ಸಮಿತಿಯನ್ನು ರಚಿಸಿತು. ಈ ಅಪರಾಧಿಗಳು 15 ವರ್ಷಗಳ ಜೈಲುವಾಸವನ್ನು ಪೂರ್ಣಗೊಳಿಸಿದ್ದಾರೆ ಎಂಬುದನ್ನು ಹೊರತುಪಡಿಸಿ ಯಾವ ಆಧಾರದ ಮೇಲೆ ಕ್ಷಮಾದಾನ ನೀಡಲಾಗಿದೆ ಎಂಬುದನ್ನು ವಿವರಿಸಲಾಗಿಲ್ಲ ಎಂದಿರುವ ಎಐಡಿಡಬ್ಲ್ಯುಎ ಇಷ್ಟು ಸುದೀರ್ಘ ಮತ್ತು ಕಷ್ಟ–ಕಾರ್ಪಣ್ಯಗಳಿಂದ ತುಂಬಿದ ಕಾನೂನು ಹೋರಾಟದ ನಂತರ ಇಂತಹ ಘೋರ ಅಪರಾಧಕ್ಕೆ ಶಿಕ್ಷೆಗೊಳಗಾದವರನ್ನು ಈ ರೀತಿ ಬಿಡುಗಡೆ ಮಾಡಿರುವುದು ನ್ಯಾಯದ ಅಣಕವಾಗಿದೆ ಎಂದು ವರ್ಣಿಸಿದೆ.

ಮಹಿಳೆಯರ ವಿರುದ್ಧ ಅಪರಾಧಗಳಿಂದ ಅವರನ್ನು ರಕ್ಷಿಸುವ ಅಗತ್ಯತೆಯ ವಿಷಯವನ್ನು ಪ್ರಧಾನ ಮಂತ್ರಿಗಳು ಎತ್ತಿ ಹಿಡಿಯುತ್ತಿದ್ದ ದಿನದಂದೇ ಕ್ರೂರ ಸಾಮೂಹಿಕ ಅತ್ಯಾಚಾರ ಮತ್ತು ಹತ್ಯೆಯ ಅಪರಾಧಿಗಳನ್ನು ಬಿಡುಗಡೆ ಮಾಡಲು ಬಿಜೆಪಿಯ ಗುಜರಾತ್ ಸರ್ಕಾರ ನಿರ್ಧರಿಸಿತು. ಇದು, ಈ ದೇಶದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳು ಹೆಚ್ಚಾಗುತ್ತಿದ್ದರೂ



ಬಿಜೆಪಿ ಸರ್ಕಾರವು ಈ ಅಪರಾಧಗಳಲ್ಲಿ ಅತ್ಯಂತ ಕ್ರೂರವಾದ ಅಪರಾಧದ ಬಗ್ಗೆಯೂ ಪರಿವೆಯಿಲ್ಲ ಎಂಬುದನ್ನು ತೋರಿಸುತ್ತದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ಮುಸ್ಲಿಮರ ವಿರುದ್ಧ ಅಪರಾಧಗಳನ್ನು ನಿರ್ಭಯವಾಗಿ ಎಸಗಬಹುದು, ಅದಕ್ಕೆ ಉತ್ತರದಾಯಿಯಾಗಿ ಆಗಬೇಕಿಲ್ಲ ಎಂಬುದರ ಕೆಟ್ಟ ನಿದರ್ಶನವನ್ನು ಇದು ಕಲ್ಪಿಸಿ ಕೊಟ್ಟಿದೆ. ಅಲ್ಪಸಂಖ್ಯಾತರ – ವಿಶೇಷವಾಗಿ ಮುಸ್ಲಿಮರ – ವಿರುದ್ಧ ಜೀವ ಬೆದರಿಕೆಗಳನ್ನು ನೀಡುವ ಮತ್ತು ಹಿಂಸಾಚಾರಕ್ಕೆ ಕರೆ ನೀಡುವ ಸಂಘ ಪರಿವಾರದ ಮಂದಿಗಳಿಗೆ ಇದು, ನಿರ್ಭಯದಿಂದ ಮತ್ತು ಯಾವುದೇ ಪ್ರತಿಕೂಲ ಪರಿಣಾಮಗಳಿಗೆ ಹೆದರದೆ ಅವನ್ನು ನಡೆಸಬಹುದು ಎಂದು ಪರೋಕ್ಷ ಪ್ರೋತ್ಸಾಹವನ್ನು ನೀಡುತ್ತದೆ. ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗಳನ್ನು ಮಾಡಿದವರಿಗೆ ಸಾಮಾನ್ಯವಾಗಿ ಕ್ಷಮಾದಾನ ನೀಡುವುದಿಲ್ಲ. ಈ ಸ್ವಾತಂತ್ರ್ಯ ದಿನದಂದು ಘೋಷಿಸಲಾದ ಕ್ಷಮಾದಾನದ ಮೇಲಿನ ಕೇಂದ್ರ ಸರಕಾರದ ನೀತಿಯು ಕೂಡ ಕೊಲೆಗಳು ಮತ್ತು ಅತ್ಯಾಚಾರಗಳ ಅಪರಾಧಿಗಳನ್ನು ಹೊರತುಪಡಿಸಿದೆ. ಆದ್ದರಿಂದ ಗುಜರಾತ್ ಸರ್ಕಾರದ ಈ ನಿರ್ಧಾರವು ಈ ಅಪರಾಧಗಳಿಗೆ ಸರ್ಕಾರದ ಮೌನ ಅನುಮೋದನೆಯಿದೆ ಎಂಬುದನ್ನು, 2002 ರ ಕೋಮು ಹತ್ಯಾಕಾಂಡದಲ್ಲಿ ಮುಸ್ಲಿಮರ ಕೊಲೆಗಳು ಮತ್ತು ಅವರ ಮೇಲೆ ನಡೆದ ಅತ್ಯಾಚಾರಗಳು ಬಿಜೆಪಿಯ ಗುಜರಾತ್ ಸರಕಾರಕ್ಕೆ ಲೆಕ್ಕಕ್ಕೇ ಇಲ್ಲ, ಅವು ಮನುವಾದಿ ಹಿಂದುತ್ವದ ಅಜೆಂಡಾಕ್ಕೆ ಅನುಗುಣವಾಗಿವೆ ಎಂಬುದನ್ನು ಸ್ಪಷ್ಟವಾಗಿ ಎತ್ತಿ ತೋರಿದೆ. ಈ ಅಪರಾಧಿಗಳು ಜೈಲಿನಿಂದ ಹೊರಬಂದಾಗ ಅವರನ್ನು ವೀರರೆಂಬಂತೆ ಸಿಹಿತಿಂಡಿಗಳೊಂದಿಗೆ ಸ್ವಾಗತಿಸಿದರು ಎಂಬುದನ್ನು ಖಂಡಿಸುತ್ತ ಇದಕ್ಕೆ ರಾಜ್ಯ ಸರ್ಕಾರ ಹೇಗೆ ಅವಕಾಶ ನೀಡಿತು ಎಂದು ಎಐಡಿಡಬ್ಲ್ಯುಎ ಪ್ರಶ್ನಿಸಿದೆ.

ಈ ಮಧ್ಯೆ, ಅಂತಿಮವಾಗಿ ತನಗೆ ನ್ಯಾಯ ಸಿಕ್ಕಿದೆ ಎಂದು ಭಾವಿಸಿದ್ದ ಬಿಲ್ಕಿಸ್ ಬಾನೊ ಅವರ ವೇದನೆ ಮುಂದುವರಿಯುತ್ತದೆ. ಮತ್ತೊಮ್ಮೆ ಆಕೆಯ ಮತ್ತು ಆಕೆಯ ಕುಟುಂಬದವರ ಜೀವಕ್ಕೆ ಅಪಾಯವಿದೆ ಮತ್ತು ಅವರಲ್ಲಿ ತಮ್ಮ ಸುರಕ್ಷತೆಯ ಬಗ್ಗೆ ಭಯ ಮೂಡಿದೆ ಎಂದು ವರದಿಯಾಗಿದೆ. ಅವರಿಗೆ ತಕ್ಷಣವೇ ರಕ್ಷಣೆ ಒದಗಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

2019 ರಲ್ಲಿ ಸುಪ್ರೀಂ ಕೋರ್ಟ್ ಬಿಲ್ಕಿಸ್ ರವರಿಗೆ 50 ಲಕ್ಷ ರೂ. ಪರಿಹಾರವನ್ನು ಒದಗಿಸಿತು ಮತ್ತು ಆಕೆಗೆ ಮನೆ ಮತ್ತು ಉದ್ಯೋಗವನ್ನು ನೀಡಬೇಕು ಎಂದು ನಿರ್ದೇಶಿಸಿತ್ತು. ಆಕೆಗೆ ಇನ್ನೂ ಮನೆ, ಕೆಲಸ ಕೊಟ್ಟಿಲ್ಲ. ಬಿಲ್ಕಿಸ್ ಬಾನೋ ಪ್ರಕರಣದಲ್ಲಿ ಕೊಲೆ ಮತ್ತು ಸಾಮೂಹಿಕ ಅತ್ಯಾಚಾರದ ಅಪರಾಧಿಗಳ ಶಿಕ್ಷೆಯಿಂದ ಕ್ಷಮಾದಾನ ಕೊಡುವ ಗುಜರಾತ್ ಸರ್ಕಾರದ ಈ ಸಂಪೂರ್ಣ ಅನಗತ್ಯ, ಭಂಡ ಮತ್ತು ಅಮಾನವೀಯ ನಿರ್ಧಾರವನ್ನು ನ್ಯಾಯಾಲಯವು ಮತ್ತೊಮ್ಮೆ ರದ್ದುಪಡಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

# ಮಹಿಳಾ ನ್ಯಾಯಾಧೀಶರಿಂದ ಮನುಸ್ಮೃತಿಯ ಪ್ರಶಂಸೆ: –ಎಐಡಿಡಬ್ಲ್ಯುಎ ಬಲವಾದ ಆಕ್ಷೇಪ

**“ಮಹಿಳಾ ಸಂಘಟನೆಯಾಗಿ ನಮ್ಮ ಮಹಿಳಾ ನ್ಯಾಯಾಧೀಶರಿಂದ ಉತ್ತಮ ತಿಳುವಳಿಕೆಯನ್ನು ನಿರೀಕ್ಷಿಸುತ್ತೇವೆ”**

ಮಹಿಳೆಯರಿಗೆ ಮನುಸ್ಮೃತಿ ಅತ್ಯಂತ ಗೌರವಾನ್ವಿತ ಸ್ಥಾನ ನೀಡಿದೆ ಎಂದು ನ್ಯಾಯಮೂರ್ತಿ ಪ್ರತಿಬಾ ಎಂ. ಸಿಂಗ್ ಹೇಳಿರುವುದಾಗಿ ವರದಿಯಾಗಿದೆ. ಈ ಹೇಳಿಕೆಗೆ ಅಖಿಲ ಭಾರತ ಜನವದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಬಲವಾಧ ಆಕ್ಷೇಪವನ್ನು ವ್ಯಕ್ತಪಡಿಸಿದೆ.

ಉದ್ಯಮಿಗಳ ಸಂಘಟನೆ ‘ಫಿಕಿ’ ಇತ್ತೀಚೆಗೆ ಆಯೋಜಿಸಿದ್ದ ಸಮ್ಮೇಳನದಲ್ಲಿ ಅವರ ಉದ್ಘಾಟನಾ ಭಾಷಣದ ಒಂದು ಭಾಗ ಈ ಹೇಳಿಕೆಯಾಗಿದೆ. ಇಲ್ಲಿ ಅವರು ಮನುಸ್ಮೃತಿಯಂತಹ ಧರ್ಮಗ್ರಂಥಗಳಿಂದಾಗಿ ಭಾರತೀಯ ಮಹಿಳೆಯರು ‘ಪೂಜ್ಯ’ರೆನಿಸಿಕೊಂಡಿದ್ದಾರೆ, ಅಲ್ಲಿ ’ನೀವು ಮಹಿಳೆಯರನ್ನು ಗೌರವಿಸದಿದ್ದರೆ ಮತ್ತು ಗೌರವಿಸದಿದ್ದರೆ, ನೀವು ಮಾಡುವ ಎಲ್ಲಾ ಪೂಜಾ ಮಾರ್ಗಗಳಿಗೆ ಯಾವುದೇ ಅರ್ಥವಿಲ್ಲ’ ಎಂದು ಹೇಳಲಾಗಿದೆ ಎಂದೂ ಹೇಳಿದರು.

ಮೊದಲನೆಯದಾಗಿ ಮನುಸ್ಮೃತಿಯ ನಿಜವಾದ ಉಲ್ಲೇಖವೆಂದರೆ ’ದೇವರುಗಳು ಮಹಿಳೆಯರನ್ನು ಗೌರವಿಸುವ ಸ್ಥಳಗಳಲ್ಲಿ ವಾಸಿಸುತ್ತಾರೆ’. ಅದೇ ಪಠ್ಯದಿಂದ ಕನಿಷ್ಠ ಹತ್ತು ಇತರ ಉಲ್ಲೇಖಗಳನ್ನು ನೀಡಬಹುದು, ಅಲ್ಲಿ ಮಹಿಳೆಯರನ್ನು ನಂಬಿಕೆಗೆ ಅನರ್ಹರು ಮತ್ತು ಸಂಪೂರ್ಣವಾಗಿ ಲೈಂಗಿಕ ಭಾವೋದ್ರೇಕಗಳಿಂದ ವರ್ತಿಸುವವರು ಎಂದೂ ಹೇಳಲಾಗಿದೆ; ಅವರು ಸ್ವತಂತ್ರವಾಗಿ ಕಾರ್ಯಾಚರಿಸದಂತೆ ನೋಡಿಕೊಳ್ಳಬೇಕು ಎಂದು ಹೇಳುವಲ್ಲಿ, ಅವರು ಗಂಡು ಮಕ್ಕಳನ್ನು ಹೆರದಿದ್ದರೆ ಅವರನ್ನು ಕಡೆಗಣಿಸಬಹುದು ಎಂದೂ ಸೂಚಿಸಲಾಗಿದೆ. ’ಬಹಿಷ್ಕರಿಸಿದ’ ಜಾತಿಯ ಪುರುಷನೊಂದಿಗೆ ಸಹಬಾಳ್ವೆ ನಡೆಸುವ ಮಹಿಳೆಯಿಂದ ಜನಿಸಿದ ಮಕ್ಕಳು ಅಗತ್ಯವಾಗಿ ’ಇನ್ನೂ ಹೆಚ್ಚಿನ ಬಹಿಷ್ಕಾರ’ಕ್ಕೆ ಒಳಗಾಗುತ್ತಾರೆ ಎಂದು ಹೇಳಲಾಗಿದೆ. ಮನುಸ್ಮೃತಿಯು ಈ ವಿದ್ವಾಂಸ ನ್ಯಾಯಾಮೂರ್ತಿಗಳ ಹೇಳುವಂತೆ ‘ವೈದಿಕ ಪಠ್ಯ’ವೂ ಅಲ್ಲ, ಬದಲಿಗೆ ಬ್ರಾಹ್ಮಣ ಪ್ರಾಬಲ್ಯವನ್ನು ಬಲಪಡಿಸುವ ಮತ್ತು ಹರಡುವ ನಿರ್ದಿಷ್ಟ ಉದ್ದೇಶದಿಂದ ನಿರ್ದಿಷ್ಟ ಐತಿಹಾಸಿಕ ಘಟ್ಟದಲ್ಲಿ ಮಾಡಿದ ಸಂಕಲನವಾಗಿದೆ. ಯಾವ ಸಂವಿಧಾನವನ್ನು ಪಾಲಿಸುವುದಾಗಿ ವಿದ್ವಾಂಸ ನ್ಯಾಯಾಧೀಶರು ಪ್ರತಿಜ್ಞೆ ಮಾಡಿದ್ದಾರೋ ಮತ್ತು ಅವರ ಪ್ರಸ್ತುತ ಗೌರವಾನ್ವಿತ ಸ್ಥಾನವನ್ನು ಹೊಂದಲು ಅವಕಾಶ ಮಾಡಿಕೊಟ್ಟಿದೆಯೋ, ಆ ಭಾರತೀಯ ಸಂವಿಧಾನ ಮತ್ತು ಭಾರತೀಯ ಕಾನೂನು ವ್ಯವಸ್ಥೆಯೊಂದಿಗೆ ಮನುಸ್ಮೃತಿ ಹೊಂದಿರುವ ವೈರುಧ್ಯವನ್ನು ಅವರು ಕಡೆಗಣಿಸಿದ್ದಾರೆ ಎಂದು ಎಐಡಿಡಬ್ಲ್ಯುಎ ಟಿಪ್ಪಣಿ ಮಾಡಿದೆ.

ಎರಡನೆಯದಾಗಿ, ಭಾರತವು ಅನೇಕ ಧರ್ಮಗಳ ದೇಶ ಎಂಬುದನ್ನೂ ಅವರು ಮರೆತಂತೆ ತೋರುತ್ತಿದೆ ಮತ್ತು ಮನುಸ್ಮೃತಿಯನ್ನು ’ನಮ್ಮ ಧರ್ಮಗ್ರಂಥಗಳು’ ಎಂದು ವಿವರಿಸುವ ಮೂಲಕ ಅವರು ಬಹುಸಂಖ್ಯಾಕ ವಿಭಜನಕಾರೀ ನಿಲುವನ್ನು ತೆಗೆದುಕೊಳ್ಳುತ್ತಿದ್ದಾರೆ ಮತ್ತು ನಮ್ಮ ಪ್ರಜಾಸತ್ತಾತ್ಮಕ ಜಾತ್ಯತೀತ ಸಂವಿಧಾನದಿಂದ ಪರಸ್ಪರ ಒಂದುಗೂಡಿರುವ ಮತ್ತು ಮನುಸ್ಮೃತಿಗೆ ಅರ್ಥಹೀನವಾಗಿರುವ ನಮ್ಮ ಜನರ ದೊಡ್ಡ ವಿಭಾಗಗಳಿಗೆ ತಮ್ಮನ್ನು ಪರಕೀಯರಾಗಿಸಿಕೊಳ್ಳುತ್ತಿದಾರೆ. ಎಲ್ಲರಿಗೂ ನ್ಯಾಯ ಎಂಬುದನ್ನು ಪ್ರತಿನಿಧಿಸುವ ಸಾರ್ವಜನಿಕ ವ್ಯಕ್ತಿಯಾಗಿ ಅವರು ಖಂಡಿತವಾಗಿಯೂ ಇದನ್ನು ಮಾಡಲು ಸಾಧ್ಯವಿಲ್ಲ. ಆಳುವ ಪಕ್ಷದ ರಾಜಕಾರಣಿಗಳು ಮತ್ತು ಜನಪ್ರತಿನಿಧಿಗಳು ಮಹಿಳೆಯರನ್ನು ಅವಮಾನಿಸುವ, ‘ಕೆಳಜಾತಿ’ಯವರು ಎನಿಸಿಕೊಳ್ಳುವವರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ಅವಮಾನಿಸುವ ಮತ್ತು ಅವರ ವಿರುದ್ಧದ ದೌರ್ಜನ್ಯವನ್ನು ಮಂಜೂರು ಮಾಡುವ ಹೇಳಿಕೆಗಳನ್ನು ನಾವು ಪ್ರತಿದಿನ ಕೇಳುತ್ತಿರುವ ಪರಿಸ್ಥಿತಿಯಲ್ಲಿ ಇದು ವಿಶೇಷವಾಗಿ ಖಂಡನೀಯವಾಗಿದೆ. ಆಕೆ ಮಾಡಿದಂತೆ ನ್ಯಾಯಾಂಗದಲ್ಲಿ ಯಾರಾದರೂ ಪಕ್ಷಪಾತ ಧೋರಣೆ ತಳೆದರೆ, ಅದು ಮೇಲೆ ಹೇಳಿದ ವಿಭಾಗಗಳ ಅಭದ್ರತೆಯನ್ನು ಹೆಚ್ಚಿಸುತ್ತದೆ ಎಂದಿರುವ ಎಐಡಿಡಬ್ಲ್ಯುಎ “ಮಹಿಳಾ ಸಂಘಟನೆಯಾಗಿ ನಾವು ನಮ್ಮ ಮಹಿಳಾ ನ್ಯಾಯಾಧೀಶರಿಂದ ಉತ್ತಮ ತಿಳುವಳಿಕೆಯನ್ನು ನಿರೀಕ್ಷಿಸುತ್ತೇವೆ ಮತ್ತು ಅವರ ಮಾತುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುತ್ತೇವೆ” ಎಂದು ಹೇಳಿದೆ.

## “ಇದೆಂತಾ ವಿವೇಚನೆ? ಯಾವ ಆಧಾರದಲ್ಲಿ ಬಿಡುಗಡೆ?...

**ಪುಟ 10 ರಿಂದ**

ಸಂಪೂರ್ಣವಾಗಿ ಅಸುರಕ್ಷಿತಳಾಗಿದ್ದಾಳೆ. ಅವರ ಸುರಕ್ಷತೆಯ ಬಗ್ಗೆ ಗುಜರಾತ್ ಸರ್ಕಾರ ಏನಾದರೂ ಯೋಚಿಸಿದೆಯೇ?

ದೇಶದಲ್ಲಿ ಮಹಿಳೆಯರ ಭದ್ರತೆಯನ್ನು ಬಯಸುವವರು, ಚಳವಳಿಗಳೊಂದಿಗೆ ಇರುವವರು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಬಯಸುತ್ತಾರೆ. ಗುಜರಾತ್‌ನಲ್ಲಿ ನಡೆದಿರುವುದು ಅಪರಾಧಿಗಳ ನೈತಿಕ ಸ್ಥೈರ್ಯವನ್ನು ಹೆಚ್ಚಿಸಲಿದೆ. ಅತ್ಯಂತ ಆಕ್ಷೇಪಾರ್ಹ ವಿಷಯವೆಂದರೆ ಅವರು ಜೈಲಿನಿಂದ ಹೊರಗೆ ಬಂದಾಗ ಅವರನ್ನು ಸ್ವಾಗತಿಸಲಾಗಿದೆ.. ಅವರಿಗೆ ಸಿಹಿ ತಿನ್ನಿಸಲಾಗಿದೆ. ಆಗಸ್ಟ್ 15 ರಂದು ನಾವು ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿಕೊಳ್ಳುವ ರೀತಿಯಲ್ಲಿ ಈ ಕ್ರಿಮಿನಲ್ ಅಪರಾಧಿಗಳನ್ನು ಅವರ ಸಮರ್ಥಕರು, ಬೆಂಬಲಿಗರು ಅವರನ್ನು ಸ್ವಾಗತಿಸುತ್ತಿದ್ದಾರೆ ಎಂದು ಸುಭಾಷಿಣಿ ಅಲಿ ಖೇದ ವ್ಯಕ್ತಪಡಿಸಿದರು.

**ಅತ್ಯಾಚಾರಿಗಳಿಗೆ ಕೊಲೆಗಡುಕರಿಗೆ ಬಿಡುಗಡೆ, ನ್ಯಾಯಕ್ಕಾಗಿ ಹೋರಾಡುವವರಿಗೆ ಜೈಲುವಾಸ!**

ಗರ್ಭಿಣಿ ಯುವತಿಯ ಕೈಗಳಿಂದ ಆಕೆಯ ಮೂರು ವರ್ಷದ ಮಗುವನ್ನು ಕಿತ್ತುಕೊಂಡು ನೆಲಕ್ಕೆ ಅಪ್ಪಳಿಸಿ ಕೊಂದು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ್ದಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದವರನ್ನು ಬಿಡುಗಡೆ ಮಾಡಲಾಗಿದೆ ಎಂದು ಸಿಪಿಐ(ಎಂ) ನ ಗುಜರಾತ್ ಮುಖಂಡರೂ ಬಲವಾಗಿ ಖಂಡಿಸಿದ್ದಾರೆ. ಇದು ಮೋದಿಯವರ ನವಭಾರತದ ನಿಜವಾದ ಮುಖ, ಶಿಕ್ಷೆಗೊಳಗಾಗಿರುವ ಅತ್ಯಾಚಾರಿಗಳನ್ನು, ಕೊಲೆಗಡುಕರನ್ನು ಬಿಡುಗಡೆ ಮಾಡಲಾಗಿದೆ, ಗಲಭೆ ಸಂತ್ರಸ್ತರಿಗೆ ನ್ಯಾಯಕ್ಕಾಗಿ ಹೋರಾಡುತ್ತಿರುವ ತೀಸ್ತಾ ಸೆಟಲ್ವಾಡ್‌ರನ್ನು ಜೈಲಿಗಟ್ಟಲಾಗಿದೆ ಎಂದು ಅವರು ತೀವ್ರ ಖೇದ ವ್ಯಕ್ತಪಡಿಸಿದ್ದಾರೆ.

“ಒಂದಿಲ್ಲೊಂದು ಕಾರಣದಿಂದ ನಮ್ಮೊಳಗೆ ಒಂದು ಎಂತಹ ವಿಕೃತಿ ಬಂದಿದೆಯೆಂದರೆ, ನಮ್ಮ ನಡೆ–ನುಡಿಗಳಲ್ಲಿ, ನಮ್ಮ ಕೆಲವು ಶಬ್ದಗಳಲ್ಲಿ.. ನಾವು ನಾರಿಯರ ಅಪಮಾನ ಮಾಡುತ್ತೇವೆ. ನಾವು ಸ್ವಭಾವದಿಂದ, ಸಂಸ್ಕಾರದಿಂದ, ದೈನಂದಿನ ಜೀವನದಲ್ಲಿ ನಾರಿಯರನ್ನು ಅಪಮಾನಿತರನ್ನಾಗಿ ಮಾಡುವ ಪ್ರತಿಯೊಂದು ಮಾತಿನಿಂದ ಮುಕ್ತಿಯ ಸಂಕಲ್ಪ ಮಾಡಬಲ್ಲೆವೇಯೇ?”

**–ಕೆಂಪು ಕೋಟೆಯಲ್ಲಿ ಪ್ರಧಾನ ಮಂತ್ರಿಗಳು, ಆಗಸ್ಟ್ 15, 2022**



ಎರಡು ದಿನಗಳ ಹಿಂದೆ, ಆಗಸ್ಟ್ 15, 2022 ರಂದು, ಕಳೆದ 20 ವರ್ಷಗಳ ವೇದನೆ ನನ್ನನ್ನು ಮತ್ತೆ ಆವರಿಸಿಕೊಂಡಿತು. ನನ್ನ ಕುಟುಂಬ ಮತ್ತು ನನ್ನ ಬದುಕನ್ನು ಧ್ವಂಸಗೊಳಿಸಿದ ಮತ್ತು ನನ್ನ ಮೂರು ವರ್ಷದ ಮಗಳನ್ನು ನನ್ನಿಂದ ತೆಗೆದುಕೊಂಡ 11 ಶಿಕ್ಷೆಗೊಳಗಾದ ಗಂಡಸರು ಸ್ವತಂತ್ರವಾಗಿ ನಡೆದರು ಎಂದು ನಾನು ಕೇಳಿದಾಗ. ನನ್ನ ಬಳಿ ಪದಗಳೇ ಇರಲಿಲ್ಲ, ಇನ್ನೂ ಮರಗಟ್ಟಿದಂತಿದೆ.

ಇಂದು, ನಾನು ಇಷ್ಟು ಮಾತ್ರ ಹೇಳಬಲ್ಲೆ – ಯಾವುದೇ ಮಹಿಳೆಗೆ ನ್ಯಾಯವು ಈ ರೀತಿ ಕೊನೆಗೊಳ್ಳುವುದು ಹೇಗೆ ಸಾಧ್ಯ? ನಮ್ಮ ನಾಡಿನ ಅತ್ಯುನ್ನತ ನ್ಯಾಯಾಲಯಗಳನ್ನು ನಾನು ನಂಬಿದ್ದೆ. ವ್ಯವಸ್ಥೆಯನ್ನು ನಂಬಿದ್ದೆ ಮತ್ತು ನಿಧಾನವಾಗಿ ನನ್ನ ವೇದನೆಯೊಂದಿಗೆ ಬದುಕಲು ಕಲಿಯುತ್ತಿದ್ದೆ.. ಈ ಶಿಕ್ಷೆಗೊಳಗಾದವರ ಬಿಡುಗಡೆಯು ನನ್ನ ಶಾಂತಿಯನ್ನು ಕಿತ್ತುಕೊಂಡಿದೆ ಮತ್ತು ನ್ಯಾಯದ ಮೇಲಿನ ನನ್ನ ನಂಬಿಕೆಯನ್ನು ಅಲುಗಾಡಿಸಿದೆ. ನನ್ನ ದುಃಖ ಮತ್ತು ನನ್ನ ನಂಬಿಕೆ ಅಲುಗಾಡಿರುವುದು ನನ್ನದು ಮಾತ್ರವಲ್ಲ, ನ್ಯಾಯಾಲಯಗಳಲ್ಲಿ ನ್ಯಾಯಕ್ಕಾಗಿ ಹೋರಾಡುತ್ತಿರುವ ಪ್ರತಿಯೊಬ್ಬ ಮಹಿಳೆಯದ್ದು.



ಇಂತಹ ದೊಡ್ಡ ಮತ್ತು ನ್ಯಾಯವಿಲ್ಲದ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ಯಾರೂ ನನ್ನ ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ವಿಚಾರಿಸಲಿಲ್ಲ.

ನಾನು ಗುಜರಾತ್ ಸರ್ಕಾರಕ್ಕೆ ಮನವಿ ಮಾಡುತ್ತೇನೆ, ದಯವಿಟ್ಟು ಈ ಕೆಡುಕನ್ನು ಸರಿಪಡಿಸಿ. ಭಯವಿಲ್ಲದೆ ಮತ್ತು ಶಾಂತಿಯಿಂದ ಬದುಕುವ ನನ್ನ ಹಕ್ಕನ್ನು ನನಗೆ ಮರಳಿ ಕೊಡಿ. ದಯವಿಟ್ಟು ನನ್ನ ಕುಟುಂಬ ಮತ್ತು ನಾನು ಸುರಕ್ಷಿತವಾಗಿರುವುದನ್ನು ಖಾತ್ರಿಪಡಿಸಿ.

**–ಆಗಸ್ಟ್ 22 ರಂದು ಬಿಲ್ಕಿಸ್ ಬಾನೊ ಪರವಾಗಿ ಆಕೆಯ ವಕೀಲೆ ಶೋಭಾರವರು ಬಿಡುಗಡೆ ಮಾಡಿರುವ ಹೇಳಿಕೆ**

## ಪ್ರಜಾಪ್ರಭುತ್ವಕ್ಕೆ ಧಿಗ್ಬಂಧನ.....

**ಪುಟ 9 ರಿಂದ**

ಡಾ. ಅಂಬೇಡ್ಕರ್ ಅವರ ಈ ವಿಶ್ಲೇಷಣೆಯು ಭಾರತದ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆಗೆ ಅತಿ ಸಮೀಪವಾಗಿದೆಯೆನ್ನುವುದು ಗಮನಾರ್ಹ ಸಂಗತಿಯಾಗಿದೆ. ಸಾಮಾಜಿಕ ಮತ್ತು ಕೃಷಿ ಸಂಬಂಧಗಳಲ್ಲಿ ಆಮೂಲಾಗ್ರ ಪ್ರಜಾಸತ್ತಾತ್ಮಕ ಪರಿವರ್ತನೆಗೆ ವಿಫಲವಾಗುವುದರಿಂದ ಆಧುನಿಕ ಬೂರ್ಷ್ವಾ–ಪ್ರಜಾಪ್ರಭುತ್ವ ಸಮಾಜದ ಅಭಿವೃದ್ಧಿಗೆ ತೊಡಕಾಗುತ್ತದೆ ಎಂದು ಸಿಪಿಐ (ಎಂ) ಆರಂಭದಿಂದಲೇ ಹೇಳುತ್ತಾ ಬಂದಿದೆ. ನವ–ಉದಾರವಾದದ ಪ್ರವೇಶ ಹಾಗೂ ಹಿಂದುತ್ವ ಬಹುಸಂಖ್ಯಾಕ ಕೋಮುವಾದದ ಉದಯವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕೆ ಸಾವಿನ ಗಂಟೆಯಾಗುತ್ತದೆ. ಅದರ ಫಲವಾಗಿ ಪ್ರಜಾಪ್ರಭುತ್ವ ಮೊಟಕುಗೊಂಡು ಸರ್ವಾಧಿಕಾರ ತಲೆಯೆತ್ತುತ್ತದೆ.

**ಪ್ರಜಾಪ್ರಭುತ್ವವನ್ನು ನಿರ್ಬಂಧಿಸುವ ನವ–ಉದಾರವಾದ**

ಜನರು ಮತ್ತು ಅವರ ಹಕ್ಕುಗಳಿಗಿಂತ ಮಾರುಕಟ್ಟೆಯೇ ಪ್ರಧಾನವಾದುದು ಎಂದು ಪರಿಗಣಿಸುವ ನವ–ಉದಾರವಾದವು ಪ್ರಜಾಪ್ರಭುತ್ವವನ್ನು ಕಿರಿದುಗೊಳಿಸುತ್ತದೆ ಹಾಗೂ ನಿರ್ಬಂಧಿಸುತ್ತದೆ. ದೊಡ್ಡ ಬಂಡವಾಳವು ರಾಜಕೀಯ ವ್ಯವಸ್ಥೆಯನ್ನು ಆಕ್ರಮಿಸಿದೆ ಹಾಗೂ ಎಲ್ಲ ಬಂಡವಾಳಶಾಹಿ ರಾಜಕೀಯ ಪಕ್ಷಗಳು ದೊಡ್ಡ ಹಣಬಲಕ್ಕೆ ಅಧೀನವಾಗಿವೆ. ಇದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೊರೆಯುತ್ತಿದೆ.

ಸಿಪಿಐ (ಎಂ) ಕಾರ್ಯಕ್ರಮ ಏನು ಹೇಳುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ‘ದುಡಿಯುವ ಜನಗಳು ಹಾಗೂ ಅವರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳಿಂದ ಸಂಸದೀಯ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯ ಬರುವುದಿಲ್ಲ. ಅಪಾಯ ಉಂಟಾಗುವುದು ಏನಿದ್ದರೂ ಶೋಷಕ ವರ್ಗಗಳಿಂದಲೇ. ತಮ್ಮ ಸಂಕುಚಿತ ಹಿತಗಳ ರಕ್ಷಣೆಗಾಗಿ ಅದನ್ನು ಸಾಧನ ಮಾಡಿಕೊಳ್ಳುವ ಮೂಲಕ ಒಳಗಿನಿಂದಲೂ ಹೊರಗಿನಿಂದಲೂ ಸಂಸದೀಯ ವ್ಯವಸ್ಥೆಯನ್ನು ಅವು ದುರ್ಬಲಗೊಳಿಸುತ್ತವೆ.’.

ಹಿಂದುತ್ವ ಶಕ್ತಿಗಳ ಉದಯ ಹಾಗೂ 2004ರಲ್ಲಿ ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದಿದ್ದರಿಂದ ಭಾರತೀಯ ರಾಜಕಾರಣದಲ್ಲಿ ಒಂದು ಗುಣಾತ್ಮಕ ಬದಲಾವಣೆ ಉಂಟಾಯಿತು. ಪ್ರಭುತ್ವದ ಅಧಿಕಾರವು ಆರ್‌ಎಸ್‌ಎಸ್‌ನ ಫ್ಯಾಸಿಸ್ಟ್ ತೆರನ ಸಿದ್ಧಾಂತ ಹೊಂದಿದ ಒಂದು ಪಕ್ಷದ ಕೈಗೆ ಬಂದಿದೆ. ಅಲ್ಪಸಂಖ್ಯಾತರಿಗೆ ಸಮಾನ ಸ್ಥಾನಮಾನ ಮತ್ತು ಪ್ರಜೆಗಳಾಗಿ ಹಕ್ಕುಗಳನ್ನು ನಿರಾಕರಿಸುವ, ಪ್ರಜಾಪ್ರಭುತ್ವಕ್ಕೆ ಪಥ್ಯವಲ್ಲದ ಹಿಂದೂ ಬಹುಸಂಖ್ಯಾಕ ಆಡಳಿತವನ್ನು ಸ್ಥಾಪಿಸುವುದು ಅವರ ಬಯಕೆಯಾಗಿದೆ.




**“ನಾವು, ಜನತೆ....” ಮತ್ತು ಬುಲ್‌ಡೋಜರ್ ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ**

ನಾವು ಪ್ರಭುತ್ವ ಪ್ರಾಯೋಜಿತ ಕಾನೂನುಗಳನ್ನು ಮತ್ತು ಬುಟಮಟ್ಟದಲ್ಲಿ ಮುಸ್ಲಿಮರನ್ನು ಗುರಿ ಮಾಡುವ, ಅವರನ್ನು ಸಮಯ–ಸಮಯಕ್ಕೆ ಹಿಂಸಾಚಾರದ ಆವೇಶಕ್ಕೆ ತುತ್ತಾಗಿಸುವ ಹಿಂದುತ್ವ ಸಂಘಟನೆಗಳ ಕಾವಲುಕೋರ ಕೃತ್ಯಗಳನ್ನೂ, ಅದರ ಜೊತೆಯಲ್ಲಿ ಸರಕಾರಿ ಯಂತ್ರದ ಕಿರುಕುಳವನ್ನೂ ಕಂಡಿದ್ದೇವೆ.. ವಾಸ್ತವವಾಗಿ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಗುಜರಾತ್ ಮತ್ತು ಕರ್ನಾಟಕದಂಥ ಬಿಜೆಪಿ ಆಳ್ವಿಕೆಯಿರುವ ರಾಜ್ಯಗಳಲ್ಲಿ ಅಲ್ಪಸಂಖ್ಯಾತರನ್ನು ವಸ್ತುಶಃ ದ್ವಿತೀಯ ದರ್ಜೆ ನಾಗರಿಕರ ಸ್ಥಾನಕ್ಕೆ ತಳ್ಳಲಾಗಿದೆ.

**ಹಿಂದುತ್ವ–ಕಾರ್ಪೊರೇಟ್ ಮೈತ್ರಿ**

ಕಾರ್ಪೊರೇಟ್‌ಗಳು ಮತ್ತು ಹಿಂದುತ್ವ ಶಕ್ತಿಗಳ ನಡುವಿನ ಮೈತ್ರಿಯಿಂದಾಗಿ ಸರ್ವಾಧಿಕಾರಿ ಶಕ್ತಿಗಳು ಮುನ್ನುಗ್ಗುತ್ತಿವೆ. ನವ–ಉದಾರವಾದಿ ನೀತಿಗಳು ಮತ್ತು ಸಮಾಜದ ಮೇಲೆ ಹಿಂದುತ್ವ ಮೌಲ್ಯಗಳ ಹೇರಿಕೆಯನ್ನು ಮುಂದೊತ್ತಲು ಉನ್ನತ ಪ್ರಮಾಣದ ಸರ್ವಾಧಿಕಾರದ ಅಗತ್ಯವಿದೆ. ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಅಳವಡಿಸುವ ಮೂಲಕ ದುಡಿಯುವ ವರ್ಗದ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ.

ಸಂವಿಧಾನದ ಮರೆಯಲ್ಲಿ ಪ್ರಭುತ್ವದ ಸಂಸ್ಥೆಗಳನ್ನು ಮರುರೂಪಿಸುವ ಕಾರ್ಯ ನಡೆಯುತ್ತಿದೆ. ಸರ್ವಾಧಿಕಾರದ ಬೀಜ ಬಿತ್ತಲು ರಾಜಕೀಯ ರಂಗದಲ್ಲಿ ಮಾತ್ರ ಮಣ್ಣನ್ನು ಹದಗೊಳಿಸಲಾಗುತ್ತಿಲ್ಲ; ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಅದನ್ನು ಮಾಡಲಾಗುತ್ತಿದೆ. ಗೋ ಹತ್ಯೆ ಮತ್ತು ಗೋಮಾಂಸ ಸೇವನೆ ನಿಷೇಧ, ಅನೈತಿಕ ಪೊಲೀಸ್‌ಗಿರಿ, ಕಲಾವಿದರು ಮತ್ತು ಕಲಾತ್ಮಕ ಕೃತಿಗಳನ್ನು ಹಿಂದೂ–ವಿರೋಧಿ ಎಂದು ಖಂಡಿಸುವುದು, ಶೈಕ್ಷಣಿಕ ಸಂಸ್ಥೆಗಳನ್ನು ನಿಯಂತ್ರಿಸಿ ಅವುಗಳು ಹಿಂದುತ್ವ ಮೌಲ್ಯಗಳಿಗೆ ಒಗ್ಗುವಂತೆ ಮಾಡುವುದು–ಈ ಎಲ್ಲವೂ ಸರ್ವಾಧಿಕಾರಿ ಆಕ್ರಮಣದ ಲಕ್ಷಣಗಳಾಗಿವೆ.

**ಪ್ರಜಾಪ್ರಭುತ್ವಕ್ಕಾಗಿ ಹೋರಾಟ**

ಹೀಗಾಗಿ, ಸ್ವಾತಂತ್ರ್ಯ ಗಳಿಸಿದ 75 ವರ್ಷಗಳ ನಂತರ ಭಾರತದಲ್ಲಿ ಪ್ರಜಾಪ್ರಭುತ್ವ ಒಂದು ನಿರ್ಣಾಯಕ ತಿರುವು ಬಿಂದುವಿನಲ್ಲಿದೆ. ಮೋದಿ ಸರಕಾರವು ಹಿಂದುತ್ವ ಸರ್ವಾಧಿಕಾರಿ ಆಡಳಿತಕ್ಕೆ ಉದಾಹರಣೆಯಾಗಿದ್ದು ಪ್ರಜಾಪ್ರಭುತ್ವ ಮತ್ತು ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ನಿರಂತರ ಬೆದರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಪ್ರಜಾಪ್ರಭುತ್ವ ಮತ್ತು ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಹೋರಾಟಗಳನ್ನು ನಡೆಸಬೇಕಾಗಿದೆ. ಆದರೆ ಪ್ರಜಾಪ್ರಭುತ್ವಕ್ಕಾಗಿನ ಹೋರಾಟವು ಹಿಂದುತ್ವ ಮತ್ತು ನವ–ಉದಾರೀಕರಣದ ವಿರುದ್ಧದ ಸಂಘರ್ಷದೊಂದಿಗೆ ತಳುಕು ಹಾಕಿಕೊಂಡಿದೆ.

ಕಾರ್ಮಿಕ ವರ್ಗಕ್ಕೆ ಪ್ರಜಾಪ್ರಭುತ್ವಕ್ಕಾಗಿ ಹೋರಾಡುವುದು ಒಂದು ಜೀವನ್ಮರಣ ಸಂಗತಿ. ರೋಸಾ ಲಕ್ಸೆಂಬರ್ಗ್ ಅದರ ಮಹತ್ವವನ್ನು ಹೀಗೆ ಪ್ರತಿಪಾದಿಸಿದ್ದಾರೆ: ‘ಪ್ರಜಾಪ್ರಭುತ್ವವು ಬಂಡವಾಳಶಾಹಿಗಳಿಗೆ ಭಾಗಶಃ ಅನವಶ್ಯಕ ಹಾಗೂ ಭಾಗಶಃ ತೊಂದರೆದಾಯಕ ಎನಿಸಿದರೆ, ದುಡಿಯುವ ವರ್ಗಕ್ಕೆ ಅದು ಅಗತ್ಯ ಹಾಗೂ ಅನಿವಾರ್ಯ ಆಗಿದೆ. ಮೊದಲನೆಯದಾಗಿ ಅದು ಅತ್ಯಗತ್ಯ ಯಾಕೆಂದರೆ ಅದು ಸ್ವಯಮಾಡಳಿತ ಸರಕಾರ, ಮತದಾರರ ಹಕ್ಕುಗಳು ಮುಂತಾದ ರಾಜಕೀಯ ವಿಧಾನಗಳನ್ನು ಸೃಷ್ಟಿಸುತ್ತದೆ. ಅವುಗಳು ದುಡಿಯುವ ವರ್ಗಕ್ಕೆ ಬೂರ್ಷ್ವಾ ಸಮಾಜವನ್ನು ಪರಿವರ್ತಿಸುವಲ್ಲಿ ಚಿಮ್ಮುಹಲಗೆ ಹಾಗೂ ಊರುಗೋಲುಗಳಾಗಿ ಕಾರ್ಯ ನಿರ್ವಹಿಸುತ್ತದೆ. ಎರಡನೆಯದಾಗಿ, ಅದು ಅನಿವಾರ್ಯ ಯಾಕೆಂದರೆ, ಪ್ರಜಾಪ್ರಭುತ್ವಕ್ಕಾಗಿನ ಹೋರಾಟದಲ್ಲಿ ಮಾತ್ರವೇ ದುಡಿಯುವ ವರ್ಗ ತನ್ನ ವರ್ಗ ಹಿತಾಸಕ್ತಿಗಳು ಮತ್ತು ತನ್ನ ಐತಿಹಾಸಿಕ ಕಾರ್ಯಭಾರಗಳ ಬಗ್ಗೆ ಪ್ರಜ್ಞಾಶೀಲವಾಗಬಲ್ಲುದು”.

ನವ–ಉದಾರವಾದಿ ಆಳ್ವಿಕೆ ಮತ್ತು ಹಿಂದುತ್ವ ಕೋಮುವಾದದ ವಿರುದ್ಧ ದೃಢ ಸುಸಂಗತ ಶಕ್ತಿಯಾದ ಎಡ ಪಂಥೀಯರು ಸರ್ವಾಧಿಕಾರದ ಅಪಾಯದ ವಿರುದ್ಧ ವಿಶಾಲ ಜನಪ್ರಿಯ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿಗೊಳಿಸುವಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

**ಅನು: ವಿಶ್ವ**




ಮುರಳಿ

**ಕ್ವಾಡ್ ಶೃಂಗಸಭೆಯಲ್ಲಿ ಅಮೆರಿಕ ಬಿಡುಗಡೆ ಮಾಡಿದ ದಸ್ತಾವೇಜಿನ ಅನುಸಾರ ಈ ಒಪ್ಪಂದದ ಅನುಸಾರ 'ಡಾರ್ಕ್ ಶಿಪ್ಪಿಂಗ್" (ಸಮುದಲ್ಲಿ ಸಂಚರಿಸುವ ಈ ನೌಕೆಗಳು ಆಟೋಮ್ಯಾಟಿಂಕ್ ಪತ್ತೆ ವ್ಯವಸ್ಥೆ ಹೊಂದಿರುತ್ತವೆ. ಯುದ್ಧ ಸಾಮಗ್ರಿಗಳನ್ನು ಸಾಗಣೆ ಮಾಡಲಿವೆ. ಈ ನೌಕೆಗಳ ಸ್ವಿಚ್ ಆಫ್ ಮಾಡಿದರೆ ಪತ್ತೆ ಮಾಡಲಾಗದು) ಮತ್ತು ಕಾರ್ಯತಂತ್ರಾತ್ಮಕ ಚಟುವಟಿಕೆಗಳನ್ನು ಪತ್ತೆ ಹಚ್ಚುವುದು. ಜೊತೆಗೆ ವಿವಿಧ ಸಾಗರ ವಲಯಗಳ ನಡುವಿನ ಈಗಾಗಲೆ ಇರುವ ಕಾಯತಂತ್ರಾತ್ಮಕ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು. ಹಿಂದೂ ಮಹಾಸಾಗರದಲ್ಲಿ ಅಂತಹ ಒಂದು ಕೇಂದ್ರವನ್ನು ಸ್ಥಾಪಿಸಿ ಅದರ ನಿಯಂತ್ರಣವನ್ನು ಭಾರತದಲ್ಲಿ ಇಡುವುದು. ಇದು ನಿಜವಾಗಲೂ ಐಪಿಎಂಡಿಎ ಉದ್ದೇಶವಾಗಿದೆ.**

# ಭಾರತದ ರಕ್ಷಣಗೆ ಕ್ವಾಡ್ ಶೂಲ

ಏಷ್ಯಾ-ಪೆಸಿಪಿಕ್ ವಲಯದಲ್ಲಿ ಅಮೆರಿಕದ ಅತಿಹೆಚ್ಚಿನ ರಾಜತಾಂತ್ರಿಕ ಚಟುವಟಿಕೆಗಳೊಂದಿಗೆ ಮೇ ತಿಂಗಳು ಕೊನೆಗೊಂಡಿತು. ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೇರಿದಂತೆ ಅವರ ಹಲವಾರು ಉನ್ನತ ಮಟ್ಟದ ಅಧಿಕಾರಿಗಳು ನಮ್ಮ ಈ ವಲಯಕ್ಕೆ ನೊಣಗಳ ರೀತಿಯಲ್ಲಿ ಭೇಟಿ ನೀಡಿದ್ದರು. ಜೋ ಬೈಡನ್ ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಭೇಟಿ ನೀಡಿದ್ದರ ಜೊತೆಗೆ ಟೋಕಿಯೋದಲ್ಲಿ ಕ್ವಾಡ್ ನಾಯಕರ ಸಭೆ ನಡೆಸಿದರು. ಜೊತೆಗೆ ಹೊಸ ಸಂಸ್ಥೆ ಅಭಿವೃದ್ಧಿಗಾಗಿ ಇಂಡೋ-ಪೆಸಿಪಿಕ್ ಆರ್ಥಿಕ ವೇದಿಕೆ (ಐಪಿಇಎಫ್)ಗೆ ಚಾಲನೆ ನೀಡಿದರು.


ಉಕ್ರೇನ್ ಯುದ್ಧ ಮತ್ತು ನ್ಯಾಟೋ ಪಾಲ್ಗೊಂಡಿರುವುದನ್ನು ಈ ಸಮಯದಲ್ಲಿ ಅಮೆರಿಕ ನಮ್ಮ ವಲಯದಲ್ಲಿ ಇಷ್ಟು ದೊಡ್ಡ ರಾಜತಾಂತ್ರಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದು ಸಹಜವಾಗಿಯೇ ಆಶ್ಚರ್ಯ ಮೂಡಿಸುತ್ತದೆ. ಇದಕ್ಕೆ ಕಾರಣ ಚೀನಾ ದೊಡ್ಡ ಶಕ್ತಿಯಾಗಿ ಬೆಳೆಯುತ್ತಿರುವುದು ಮತ್ತು ಅಮೆರಿಕ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸಿ ಅದರ ವಿರುದ್ಧ ಅಣಿನೆರೆಸುತ್ತಿರುವುದು ದೊಡ್ಡಣ್ಣನಿಗೆ ಭಾರೀ ಆತಂಕ ಮೂಡಿಸಿರುವುದು.

ಮೇ 26ರಂದು ವಾಷಿಂಗ್ಟನ್‌ನಲ್ಲಿ ಮಾತನಾಡಿದ ಅಮೆರಿಕದ ರಕ್ಷಣಾ ಸಚಿವ ಅಂಟೋನಿ ಜೆ ಬಿ ಲಿಂಕೆನ್ ಅವರು ತುಂಬಾ ಸ್ಪಷ್ಟವಾಗಿ ಹೇಳಿದ್ದೇನೆಂದರೆ, ರಷ್ಯಾ ಅಧ್ಯಕ್ಷ ಪುಟಿನ್ ಅವರು ಯುದ್ಧವನ್ನು ಮುಂದುವರೆಸಿದ್ದರೂ ಚೀನಾ ಕಾರ್ಯತಂತ್ರದಿಂದಾಗಿ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಆಗುತ್ತಿರುವ ದೀರ್ಘಕಾಲೀನ ಸವಾಲುಗಳತ್ತ ಗಮನಹರಿಸಬೇಕಾಗಿದೆ. ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಬದಲಾವಣೆ ತರುವ ಸಾಮರ್ಥ್ಯವಿರುವ ಏಕೈಕ ದೇಶ ಚೀನಾ ಆಗಿದೆ. ಮತ್ತಷ್ಟು ಆತಂಕದ ವಿಷಯ ಎಂದರೆ ಅಧ್ಯಕ್ಷ ಕ್ಸಿ ನೇತೃತ್ವದಲ್ಲಿ ಆಡಳಿತಾರೂಡ ಚೀನಾ ಕಮ್ಯೂನಿಸ್ಟ್ ಪಕ್ಷ ಆರ್ಥಿಕತೆ, ರಾಜತಾಂತ್ರಿಕತೆ, ಸೇನೆ, ತಂತ್ರಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಅತಿ ವೇಗವಾಗಿ ಮುಂದುವರೆಯುತ್ತಿದೆ. ತನ್ನ ದೇಶದೊಳಗೂ ಅತ್ಯಂತ ದಮನಕಾರಿ ಮತ್ತು ವಿದೇಶಾಂಗ ನೀತಿಯಲ್ಲಿ ಆಕ್ರಮಣಕಾರಿಯಾಗಿ ಮುನ್ನಡೆದಿದೆ. ಆದರೆ ಈ ಬೆಳವಣಿಗೆಯನ್ನು ತಡೆಯಲು ಸಾಧ್ಯವಿಲ್ಲ. ಹೀಗಾಗಿ ನಾವು ನಮ್ಮ ನೋಟದಂತೆ ಅಂತಾರಾಷ್ಟ್ರೀಯ ಪರಿಸ್ಥಿತಿಯನ್ನು ಬದಲಾಯಿಸಲು ಬೀಜಿಂಗ್ ಜೊತೆ ಗುರುತಿಸಿಕೊಂಡಿರುವ ದೇಶಗಳ ನಡುವೆ ಸ್ಟ್ರಾಟೆಜಿಯನ್ನು ರೂಪಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇಂಡೋ-ಪೆಸಿಪಿಕ್ ಕಾರ್ಯತಂತ್ರಾತ್ಮಕ ದಸ್ತಾವೇಜನ್ನು ರಚಿಸಲಾಗಿದ್ದು ಈ ವರ್ಷದ ಫೆಬ್ರವರಿಯಲ್ಲಿ ಬಿಡುಗಡೆ ಮಾಡಲಾಗಿದೆ. ಈ ಸ್ಟ್ರಾಟೆಜಿಕ್ ಗುರಿಯನ್ನು ಜಾರಿಗೆ ತರುವುದಕ್ಕಾಗಿಯೇ ಈ 'ಕ್ವಾಡ್ ಶೃಂಗಸಭೆ'ಯನ್ನು ಬಳಕೆ ಮಾಡಿಕೊಳ್ಳಲಾಗಿದೆ.

ಕ್ವಾಡ್ ಶೃಂಗಸಭೆಯಲ್ಲಿ ಸಾಗರ ಸ್ಟ್ರಾಟಜಿಯಲ್ಲಿ ಕೈಗೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳನ್ನು ಪ್ರಕಟಿಸಲಾಯಿತು. ಇದನ್ನು ಇಂಡೋ-ಪೆಸಿಪಿಕ್ ಪಾಲುದಾರಿಕೆ ಮಾರಿಟೈಮ್ ಪ್ರದೇಶ ಎಚ್ಚರಿಕೆ (ಐಪಿಎಂಡಿಎ) ಎಂದು ಹೆಸರಿಸಲಾಗಿದೆ. ಬ್ಲಿಂಕನ್ ಹೇಳಿಕೆ ಅನುಸಾರ ಐಪಿಎಂಡಿಎ ಎರಡೂ ದೇಶಗಳು ಸಾಗರದಲ್ಲಿ ಎಚ್ಚರಿಕೆಯಿಂದ ಇರುವುದು ಮತ್ತು ಅಕ್ರಮ ಮೀನುಗಾರಿಕೆ ತಡೆಯುವುದು ಹಾಗೂ ತಮ್ಮ ವ್ಯಾಪ್ತಿಗೆ ಬರುವ ಸಾಗರ ಪ್ರದೇಶದ ಹಕ್ಕುಗಳು ಮತ್ತು ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವುದು.

ಆದರೆ ಕ್ವಾಡ್ ಶೃಂಗಸಭೆಯಲ್ಲಿ ಅಮೆರಿಕ ಬಿಡುಗಡೆ ಮಾಡಿದ ದಸ್ತಾವೇಜಿನ ಅನುಸಾರ ಈ ಒಪ್ಪಂದದ ಅನುಸಾರ 'ಡಾರ್ಕ್ ಶಿಪ್ಪಿಂಗ್" (ಸಮುದಲ್ಲಿ ಸಂಚರಿಸುವ ಈ ನೌಕೆಗಳು ಆಟೋಮ್ಯಾಟಿಂಕ್ ಪತ್ತೆ ವ್ಯವಸ್ಥೆ ಹೊಂದಿರುತ್ತವೆ. ಯುದ್ಧ ಸಾಮಗ್ರಿಗಳನ್ನು ಸಾಗಣೆ ಮಾಡಲಿವೆ. ಈ ನೌಕೆಗಳ ಸ್ವಿಚ್ ಆಫ್ ಮಾಡಿದರೆ ಪತ್ತೆ ಮಾಡಲಾಗದು) ಮತ್ತು ಕಾರ್ಯತಂತ್ರಾತ್ಮಕ ಚಟುವಟಿಕೆಗಳನ್ನು ಪತ್ತೆ ಹಚ್ಚುವುದು. ಜೊತೆಗೆ ವಿವಿಧ ಸಾಗರ ವಲಯಗಳ ನಡುವಿನ ಈಗಾಗಲೆ ಇರುವ ಕಾಯತಂತ್ರಾತ್ಮಕ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವುದು. ಹಿಂದೂ ಮಹಾಸಾಗರದಲ್ಲಿ ಅಂತಹ ಒಂದು ಕೇಂದ್ರವನ್ನು ಸ್ಥಾಪಿಸಿ ಅದರ ನಿಯಂತ್ರಣವನ್ನು ಭಾರತದಲ್ಲಿ ಇಡುವುದು. ಇದು ನಿಜವಾಗಲೂ ಐಪಿಎಂಡಿಎ ಉದ್ದೇಶವಾಗಿದೆ.






ಈ ಐಪಿಎಂಡಿಎ ನಿಜವಾಗಲೂ ಭಾರತ ಮತ್ತು ಅಮೆರಿಕವನ್ನು ನಿಕಟಗೊಳಿಸಲಿದೆ ಎಂದು ಅಮೆರಿಕ ಅತ್ಯಂತ ಸ್ಪಷ್ಟವಾಗಿ ಹೇಳಿದೆ. ಈ ಒಪ್ಪಂದ ಹಿಂದೂ ಮಹಾಸಾಗರದಲ್ಲಿ ಸಂಚರಿಸುವ ಯುದ್ಧ ನೌಕೆಗಳ ಅದರೂ ಚೀನಾದ ನೌಕೆಗಳ ಮೇಲೆ ಕಣ್ಣಿಡುವು ಎಂಬುದು ಇದರಿಂದ ಸ್ಪಷ್ಟವಾಗಲಿದೆ. ಕ್ವಾಡ್ ಶೃಂಗಸಭೆ ಜೊತೆ ಜೊತೆಗೆ (ಅಮೆರಿಕ, ಜಪಾನ್, ಭಾರತ ಮತ್ತು ಆಸ್ಟ್ರೇಲಯಾ) ನಾಲ್ಕೂ ದೇಶಗಳ ಆರ್ಥಿಕ ಅಭಿವೃದ್ಧಿ ಸಂಸ್ಥೆಗಳ ಸಭೆಯನ್ನು ನಡೆಸಲಾಯಿತು. ಇದು ಖಾಸಗಿ ವಲಯದೊಂದಿಗೆ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ಜರುಗಿಸುವಂತೆ ಮಾಡಿಕೊಳ್ಳಲು ನಡೆದ ಸಭೆಯಾಗಿದೆ. ಹೀಗಿದ್ದರೂ ಪ್ರಕಟಿಸಿದ್ದು ಮಾತ್ರ ಹವಾಮಾನ ವೈಪರೀತ್ಯವನ್ನು ಹಿಮ್ಮೆಟ್ಟಿಸುವ ಕ್ರಮಗಳ ಕುರಿತು ಚರ್ಚಿಸಲಾಯಿತು ಎಂದು. ಗಮನಾರ್ಹವಾದ ವಿಷಯ ಎಂದರೆ ಅಮೆರಿಕ ಕ್ವಾಡ್ ಹೂಡಿಕೆದಾರರ ಜಾಲ ಟಿಪ್ಪಣಿಯೊಂದನ್ನು ಬಿಡುಗಡೆ ಮಾಡಿತು. ಕ್ವಾಡ್ ಸೈಬರ್ ಸೆಕ್ಯೂರಿಟಿಯಲ್ಲಿ ಸಹಕರಿಸಲು ಮತ್ತು ಬಲಿಷ್ಠಗೊಳಿಸುವ ಪಾಲುದಾರಿಕೆಗೆ ಅದಾಗಲೆ ಸಹಮತ ವ್ಯಕ್ತವಾಗಿತ್ತು. ಇದನ್ನು ಮತ್ತಷ್ಟು ಮುಂದಕ್ಕೆ ಕೊಂಡೊಯ್ಯುವುದರ ಭಾಗವಾಗಿ ಮೊಟ್ಟ ಮೊದಲ ಕ್ವಾಡ್ ಸೈಬರ್ ಸೆಕ್ಯೂರಿಟಿ ದಿನವನ್ನು ಸಹ ಘೋಷಿಸಲಾಯಿತು. ಇದು ಸೈಬರ್ ಮಾಹಿತಿ ಹಂಚಿಕೆಯನ್ನು ನಾಲ್ಕು ದೇಶಗಳ ನಡುವೆ ಇನ್ನಷ್ಟು ಹೆಚ್ಚಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ. ಈ ಕಾಲಮಾನದಲ್ಲಿ ಅಂಕಿಅಂಶ ಅನ್ನುವುದು ಕೇವಲ ಜ್ಞಾನವಲ್ಲ ಅದೊಂದು ಶಸ್ತ್ರಾಸ್ತ್ರ ಇದ್ದ ಹಾಗೆ. ಸಂಗ್ರಹ ಮಾಡಿದ ಅಂಕಿಅಂಶವನ್ನು ಯಾವ ದೇಶ ಯಾತಕ್ಕೆ ಬಳಕೆ ಮಾಡಲಿದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಸರ್ಕಾರಗಳು ಹಂಚಿಕೊಳ್ಳುವ ಮಾಹಿತಿ ಯಾವುದಕ್ಕೆ ಬಳಕೆ ಮಾಡಲಿದ್ದಾರೆ ಎಂಬುದು ಹೇಳಲಾಗದು. ಏಕೆಂದರೆ ಇಲ್ಲಿ ಕಣ್ಗಾವಲು ಎಂಬುದು ಅತ್ಯಂತ ಪ್ರಮುಖ ಅಂಶವಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಅಂಕಿಅಂಶಗಳನ್ನು ವಿನಿಮಯ ಮಾಡಿಕೊಳ್ಳುವುದು ಪ್ರತಿ ವ್ಯಕ್ತಿಯ ಸ್ವಾತಂತ್ರ್ಯವನ್ನು ವಿನಿಮಯ ಮಾಡಿಕೊಳ್ಳುವುದಲ್ಲದೆ ನಮ್ಮ ದೇಶದ ಸಾರ್ವಭೌಮತ್ವವನ್ನು ಆತಂಕಕ್ಕೆ ಸಿಲುಕಿದಂತಾಗಲಿದೆ. ಇದಲ್ಲದೆ ಕ್ವಾಡ್ ದೇಶಗಳು ಕ್ವಾಡ್ ಸ್ಯಾಟಲೈಟ್ ಡೇಟಾ ಅಂತ ಹೇಳುವ ಮೂಲಕ ಉಪಗ್ರಹ ಅಂಕಿಅಂಶಗಳನ್ನು ನಾಲ್ಕೂ ದೇಶಗಳ ನಡುವೆ ವಿನಿಮಯ ಮಾಡಿಕೊಳ್ಳಲಿವೆ. ನಮ್ಮ ಉಪಗ್ರಹದ ಪೋರ್ಟಲ್‌ನೊಂದಿಗೆ ಇತರೆ ಮೂರು ದೇಶಗಳು ಲಿಂಕ್‌ಗಳನ್ನು ಸಾಧಿಸಲಿದ್ದು ನೇರವಾಗಿ ಮಾಹಿತಿ ಪಡೆದುಕೊಳ್ಳಲಿವೆ.

ಅಮೆರಿಕ ಅತ್ಯಧಿಕ ಪ್ರಮಾಣದಲ್ಲಿ ಬಾಹ್ಯಾಕಾಶವನ್ನು ಶಸ್ತ್ರಾಸ್ತ್ರೀಕರಣಗೊಳಿಸುತ್ತಿದ್ದು ಎಲಾನ್ ಮಸ್ಕ್‌ನಂತಹ ಖಾಸಗಿ ಬಂಡವಾಳಶಾಹಿಗಳನ್ನು ಉತ್ತೇಜಿಸಿ ಇಡೀ ಭೂಮಿಯ ಮೇಲೆ ಕಣ್ಗಾವಲು ಏರ್ಪಡಿಸಲು ಸಣ್ಣ ಪ್ರಮಾಣದ ನೂರಾರು ಉಪಗ್ರಹಗಳನ್ನು ಉಡಾವಣೆ ಮಾಡಿ ಬಾಹ್ಯಾಕಾಶವನ್ನೊಂದು ನಗರವನ್ನಾಗಿ ರೂಪಿಸಲು ಯೋಜಿಸಿದೆ. ಇದರಿಂದ ಬಾಹ್ಯಾಕಾಶ ನಿಧಾನವಾಗಿ ಅತಿಹೆಚ್ಚು ದಟ್ಟಣೆ ಇರುವ ಪ್ರದೇಶವಾಗಲಿದೆ. ಈ ಹಿನ್ನೆಲೆಯಲ್ಲಿ ನಾವು ಈ ವಿಷಯದ ಕುರಿತು ಗಮನ ಹರಿಸಬೇಕಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕ್ವಾಡ್ ಸಭೆಯಲ್ಲಿ ನಮ್ಮ ಕಾರ್ಯತಂತ್ರದೊಂದಿಗೆ ರಾಜಿ ಮಾಡಿಕೊಂಡಿದ್ದಾರೆ. ಅಮೆರಿಕ ಅಧ್ಯಕ್ಷರ ಜೊತೆ ನರೇಂದ್ರ ಮೋದಿ ಮಾತುಕತೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ನಮ್ಮ ಸ್ವತಂತ್ರ ವಿದೇಶಾಂಗ ನೀತಿಯಲ್ಲಿ ರಾಜಿ ಮಾಡಿಕೊಂಡಿದ್ದನ್ನು ತಿಳಿಯಬಹುದು. ಭಾರತದ ಹಿತಾಸಕ್ತಿ ಅಮೆರಿಕದೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಅತ್ಯಂತ ಖುಷಿಯಿಂದ ಹೇಳಿದರು. ಭಾರತ ಮತ್ತು ಅಮೆರಿಕ ನಡುವಿನ ಪಾಲುದಾರಿಕೆ ಸತ್ಯವಾಗಿ ಹೇಳಬೇಕೆಂದರೆ ಅತ್ಯಂತ ವಿಶ್ವಾಸನೀಯವಾಗಿದೆ. ನಮ್ಮ ಸಾಮಾನ್ಯ ಆಸಕ್ತಿಗಳೆಂದರೆ ರಕ್ಷಣೆ ಮತ್ತು ರಕ್ಷಣೆಗೆ ಸಂಬಂಧಿಸಿದ ಇತರವು. ಈಗ ನಾವು ಹಂಚಿಕೊಂಡಿರುವ ಹಿತಾಸಕ್ತಿಗಳು ಎರಡೂ ದೇಶಗಳ ನಡುವಿನ ಬಂಧವನ್ನು ಇನ್ನಷ್ಟು ಗಟ್ಟಿಗೊಳಿಸಲಿದೆ ಎಂದರು. ನಮ್ಮ ಎರಡೂ ದೇಶಗಳು ತಂತ್ರಜ್ಞಾನ ವಿನಿಮಯವನ್ನೂ ಮಾಡಿಕೊಳ್ಳಲಿದೆ. ಮಾತ್ರವಲ್ಲ ಜಾಗತಿಕ ಮಟ್ಟದ ವಿಚಾರಗಳಲ್ಲೂ ನಿಕಟವಾಗಿ ಸಹಕರಿಸುತ್ತೇವೆ. ಇಂಡೋ-ಪೆಸಿಫಿಕ್ ವಿಚಾರದಲ್ಲೂ ಪರಸ್ಪರ ಸಹಕರಿಸುತ್ತೇವೆ ಎಂದು ಘೋಷಿಸಿದರು.

ಕ್ವಾಡ್ ಮತ್ತು ಐಪಿಇಎಫ್ ಈ ಸಹಕಾರ ಒಪ್ಪಂದದ ಎರಡು ಪ್ರಮುಖ ಉದಾಹರಣೆಗಳು. ಪ್ರತ್ಯೇಕವಾಗಿ 'ರಕ್ಷಣಾ ಒಪ್ಪಂದ'ಗಳನ್ನು ಇಲ್ಲಿ ವಿಶೇಷವಾಗಿ ಪ್ರಸ್ತಾವಿಸಲಾಗಿದೆ. ದ್ವಿಪಕ್ಷೀಯ ಮಾತುಕತೆಗಳ ನಂತರ ಅಮೆರಿಕ ನೀಡಿದ ಹೇಳಿಕೆ ಮಾತ್ರ ಇನ್ನಷ್ಟು ಸ್ಪಷ್ಟವಾಗಿತ್ತು. ಅಮೆರಿಕ ಹೇಳಿದ್ದೇನೆಂದರೆ, ಇಬ್ಬರೂ ನಾಯಕರು (ಬೈಡನ್-ಮೋದಿ) ಭಾರತ-ಅಮೆರಿಕದ ಸಮಗ್ರ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆ ಕುರಿತ ಪ್ರಗತಿಯನ್ನು ವಿಸ್ತಾರವಾಗಿ ಚರ್ಚಿಸಿದರು. ನಮ್ಮಿಬ್ಬರ ನಡುವಿನ ಪ್ರಮುಖ ರಕ್ಷಣಾ ಪಾಲುದಾರಿಕೆಯನ್ನು ಪರಿಶೀಲಿಸಿದರು ಎಂದು ಅಮೆರಿಕ ಹೇಳಿತು. ಅವರಿಬ್ಬರೂ ತಮ್ಮ ಪ್ರಮುಖ ರಕ್ಷಣಾ ಪಾಲುದಾರಿಕೆಗೆ ಬದ್ಧರಾಗಿರುವುದರ ಜೊತೆಗೆ ಆರ್ಥಿಕ ಪಾಲುದಾರಿಕೆಗೆ ಜೊತೆಯಾಗಿದ್ದು ಅದರಿಂದ ಎರಡೂ ದೇಶಗಳಿವೆ ಅನುಕೂಲ ಎಂದು ಹೇಳಿತು. ಅತ್ಯಂತ ಅಪಾಯಕಾರಿ ಎಂದರೆ, ಸಂಯುಕ್ತ ಸೇನಾ ಸಮರಾಭ್ಯಾಸದಲ್ಲಿ ಬಹ್ರೇನ್ ಸಹ ಅಸೋಸಿಯೇಟ್ ಸದಸ್ಯ ರಾಷ್ಟ್ರವಾಗಿರಲಿದ ಎಂದು ಎರಡೂ ದೇಶಗಳು ಪ್ರಕಟಿಸಿದ್ದು. ಇದು ಭಾರತದ ರಕ್ಷಣಾ ಹಿತಾಸಕ್ತಿ ಸಂಪೂರ್ಣವಾಗಿ ಅಮೆರಿಕದೊಂದಿಗೆ ಮಿಳಿತಗೊಂಡಿದೆ ಎಂಬುದನ್ನು ಇದು ತೋರಿಸುತ್ತದೆ.

ಭಾರತ ರಷ್ಯಾದಿಂದ ಇನ್ನಷ್ಟು ದೂರವಾಗಿ ಅಮೆರಿಕದ ಮೇಲೆ ತನ್ನ ಅವಲಂಬನೆಯನ್ನು ಹೆಚ್ಚಿಸುವುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ. ಅಮೆರಿಕ ಈಗಾಗಲೆ ಇಸ್ರೇಲ್‌ನಂತಹ ದೇಶಗಳೊಂದಿಗೆ ಸೇನಾ ಒಪ್ಪಂದಗಳನ್ನು ಹೊಂದಿದೆ. ಇದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಎಂಬುದಕ್ಕೆ ಉದಾಹರಣೆಯಂತೆ ಕ್ವಾಡ್ ಶೃಂಗಸಭೆ ಮುಗಿದ ಒಂದೇ ವಾರದ ಅವಧಿಯಲ್ಲಿ ಇಸ್ರೇಲ್‌ನ ರಕ್ಷಣಾ ಸಚಿವ ಭಾರತ ಪ್ರವಾಸ ಕೈಗೊಂಡು ರಕ್ಷಣಾ ಒಪ್ಪಂದಗಳನ್ನು ಪೂರ್ಣಗೊಳಿಸಿ ಹಿಂತುರಿಗಿದರು. ನಂತರ ಭಾರತ ಮತ್ತು ಅಮೆರಿಕ ರಾಷ್ಟ್ರೀಯ ಭದ್ರತಾ ಸಂಸ್ಥೆಗಳು ಅಮೆರಿಕ-ಭಾರತ ಕ್ರಿಟಿಕಲ್ ಅಂಡ್ ಎಮರ್ಜಿಂಗ್ ಟೆಕ್ನಾಲಜೀಸ್ (ಐಸಿಇಟಿ) ಒಪ್ಪಂದ ಮಾಡಿಕೊಂಡಿರುವುದಾಗಿ ಪ್ರಕಟಿಸಿದವು. ಈ ಪಾಲುದಾರಿಕೆ ಅಡಿಯಲ್ಲಿ ಭಾರತದ ಆರು ತಂತ್ರಜ್ಞಾನ ಅನ್ವೇಷನಾ ಕೇಂದ್ರಗಳನ್ನು ಅಮೆರಿಕ ಬಳಕೆ ಮಾಡಿಕೊಳ್ಳಬಹುದು. 2022ರಲ್ಲಿ ಕನಿಷ್ಠ 25 ಜಂಟಿ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲಿವೆ. ಇವು ಡೇಟಾ ವಿಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದಾಗಿವೆ. ಈ ಕ್ರಮಗಳು ನಮಗೆ ಒಳಿತು ಮಾಡುವುದಕ್ಕಿಂತ ಅಪಾಯ ತರುವುದೇ ಹೆಚ್ಚು. ಈಗಾಗಲೆ ಹಲವರು ಅಭಿಪ್ರಾಯ ವ್ಯಕ್ತಪಡಿಸಿರುವುದೇನೆಂದರೆ ಮೋದಿ ಸಮ್ಮುಖದಲ್ಲೇ ಬೈಡನ್ ಪ್ರಕಟಿಸಿರುವ ಐಪಿಇಎಫ್ ಸ್ಪಷ್ಟವಾಗಿಲ್ಲ. ಅದರಲ್ಲಿನ ವಿವರಗಳು ಏನೂ ಅರ್ಥವಾಗದ ರೀತಿಯಲ್ಲಿವೆ ಎಂದಿದ್ದಾರೆ. ಈ ಒಪ್ಪಂದ ಸಂಬಂಧಪಟ್ಟ ದೇಶಗಳಿಗೆ ಯಾವುದೇ ಒಳಿತನ್ನು ಮಾಡುವುದಿಲ್ಲ. ಬಂಡವಾಳ ಹೂಡಿಕೆ, ತಂತ್ರಜ್ಞಾನ, ಮಾರುಕಟ್ಟೆ ದೊರಕಿಸಿಕೊಡುವುದಿಲ್ಲ ಎಂದು ವಿವರಿಸಿದ್ದಾರೆ. ಹಾಗಿದ್ದರೂ ಅಮೆರಿಕದ ನಿಜವಾದ ಉದ್ದೇಶ ಏನೆಂದು ಆ ದೇಶದ ಭದ್ರತಾ ಸಲಹೆಗಾರ ಜಾಕ್ ಸುಲಿವಾನ್ ಬಹಿರಂಗಗೊಳಿಸಿದ್ದಾರೆ. ಅವರ ಪ್ರಕಾರ ಇದು ನಿಜವಾಗಲೂ ಕ್ರಿಟಿಕಲ್ ಆಗಿದೆ. ಈ ಒಪ್ಪಂದ ಇಂಡೋ-ಪೆಸಿಫಿಕ್ ಕುರಿತು ಅಮೆರಿಕದ ಎಲ್ಲ ಕಾರ್ಯತಂತ್ರಾತ್ಮಕತೆ ಮತ್ತು ಆರ್ಥಿಕತೆಯ ಅಡಿಪಾಯವಾಗಿದೆ ಎಂದು ಹೇಳಿದ್ದಾರೆ. ಇಂಡೋ-ಪೆಸಿಪಿಕ್ ವಲಯದ ರೂಪುರೇಷೆಯನ್ನು ಬದಲಿಸಲು ಇದು ಸಹಕಾರಿ ಎಂದಿದ್ದಾರೆ.

ಐಪಿಇಎಫ್ ಅಮೆರಿಕದ ವಿದೇಶಾಂಗ ಸಚಿವ ಬ್ಲಿಂಕನ್ ಹೇಳಿದ್ದೇನೆಂದರೆ ನಾವು ಅಮೆರಿಕದ ಜನತೆಗೆ ಈ ಶತಮಾನದಲ್ಲಿ ಅಗತ್ಯವಿರುವ ಎಲ್ಲವನ್ನೂ ಪೂರೈಸುವ ಉದ್ದೇಶದಿಂದ ಈ ಮೈತ್ರಿಗಳನ್ನು ಮಾಡಿಕೊಂಡಿದ್ದೇವೆ ಎಂದಿದ್ದಾರೆ. ಅಮೆರಿಕದ ಹೊಸ ಆರಂಭ ಎಂದರೆ 'ಸಮಗ್ರ ನೀತಿ' ಯನ್ನು ಮೈತ್ರಿ ದೇಶಗಳನ್ನು ಹತ್ತಿರ ತರುವ ಮೂಲಕ ಸಾಧಿಸಲಾಗುವುದು. ಇದರ ಅಡಿಯಲ್ಲಿ ಸಾಂಪ್ರದಾಯಿಕ ಇಂಧನ, ಪರಮಾಣು, ಬಾಹ್ಯಾಕಾಶ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಬ್ಲಿಂಕೆನ್ ಪ್ರಸ್ತಾವಿಸಿದ ಹೆಸರುಗಳು ಕೇವಲ ಅಮೆರಿಕದ ಸಾಮಾನ್ಯ ಜನರಾಗಿರಲಿಲ್ಲ, ಬದಲಿಗೆ ಅಲ್ಲಿನ ಬೃಹತ್ ಬಂಡವಾಳಶಾಹಿಗಳು ಮತ್ತು ಕಾರ್ಪೊರೇಟ್‌ಗಳಾಗಿದ್ದರು. ಹೀಗಾಗಿ ಕ್ವಾಡ್ ಮತ್ತು ಅಮೆರಿಕದೊಂದಿಗಿನ ಯಾವುದೇ ಮೈತ್ರಿ ಭಾರತಕ್ಕೆ ಅನುಕೂಲವಾಗದು.

NEW No. MAG(3)/NPP/205/2021-2022
JANASHAKTHI KANNADA VARA PATRIKE AUGUST 22-28, 2022 Price: Rs. 10/- Date of Publication: 19 AUGUST 2022 RNI No. KARKAN /2006/17926 Posted on 22-08-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2




**PRO/PR/PA/C3/117/22-23** **Dated : 12-08-22**

**JANASHAKTHI KANNADA VARA PATRIKE:** Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**